

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 21 ಗುರುವಾರ 2022

ಸಂಪುಟ: 43 | ಸಂಚಿಕೆ: 06 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಹುಣಸೂರು ಬಳಿ ಭೀಕರ ರಸ್ತೆ ಅಪಘಾತ: ಮರಕ್ಕೆ ಬೊಲೆರೊ ಡಿಕ್ಕಿ

ಕೊಡಗಿನ 6 ಮಂದಿ ಸಾವು

● ಮೂವರಿಗೆ ತೀವ್ರ ಗಾಯ, ಮೈಸೂರು ಆಸ್ಪತ್ರೆಗೆ ದಾಖಲು ● ಮದುವೆ ಮುಗಿಸಿ ಹೋದವರು ಮಸಣಕ್ಕೆ ● ರಾಯಚೂರು ಬಳಿ ನಡೆದ ಅಪಘಾತದಲ್ಲಿ ಮೂವರ ಸಾವು





ಹುಣಸೂರು, ಏ.20 (ಕೆಕೆ, ಹೆಚ್‌ಎಸ್‌ಎಂ, ಮಹೇಶ)–ಚಾಲಕನ ನಿಯಂತ್ರಣ ತಪ್ಪಿ ಬೊಲೆರೊ ವಾಹನ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಆರು ಮಂದಿ ಸ್ಥಳದಲ್ಲಿ ಸಾವನ್ನಪ್ಪಿ, ಮೂವರು ತೀವ್ರವಾಗಿ ಗಾಯಗೊಂಡಿರುವ ದಾರುಣ ಘಟನೆ ಬುಧವಾರ ಮಧ್ಯಾಹ್ನ ಹುಣಸೂರು–ವಿರಾಜಪೇಟೆ ರಸ್ತೆಯ ಅರಸು ಕಲ್ಲಹಳ್ಳಿ ಬಳಿ ಸಂಭವಿಸಿದೆ.


ಸಂತೋಷ್


ವಿನುತ್


ಬಾಬು


ಅನಿಲ್


ದಯಾನಂದ


ರಾಜೇಶ್

ಕೊಡಗು ಜಿಲ್ಲೆ, ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟದ ನಿವಾಸಿಗಳಾದ ಬಾಲ ಕೃಷ್ಣ ಅವರ ಪುತ್ರ ಸಂತೋಷ್(47), ಬಾಳಪ್ಪರ ಮಗ ವಿನುತ್(33), ಸಂಕಪ್ಪ ರೈ ಮಗ ದಯಾನಂದ್(40), ರಾಘವ್ ಅವರ ಪುತ್ರ ಅನಿಲ್ (44), ಗೋಪಾಲ್ ಅವರ ಪುತ್ರ ಬಾಬು (47), ಸೋಮು ಅವರ ಪುತ್ರ ರಾಜೇಶ್ ಅಪಘಾತದಲ್ಲಿ ಅಸುನೀಗಿದವರಾಗಿದ್ದಾರೆ.

ತೀವ್ರವಾಗಿ ಗಾಯಗೊಂಡಿರುವ ದಿಲೀಪ್ (65) ಅವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೂ, ಸುಂದರ್ ಮತ್ತು ಶಾಂತಿ ದಂಪತಿ ಪುತ್ರಿ ಕೀರ್ತನಾ(22) ಹಾಗೂ ಶಾಮ್ಸನ್ ಮತ್ತು ಕೋಜಿ ದಂಪತಿ ಪುತ್ರಿ ಏಂಜೆಲ್(14) ಅವರನ್ನು ಮೈಸೂರಿನ ಬೃಂದಾವನ ಆಸ್ಪತ್ರೆಗೆ ಸೇರಿಸಲಾಗಿದೆ. ಇವರುಗಳು ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೊಲೆರೊದಲ್ಲಿದ್ದವರೆಲ್ಲಾ ಪಾಲಿಬೆಟ್ಟದ ಒಂದೇ ಏರಿಯಾದ ನಿವಾಸಿಗಳಾಗಿದ್ದು, ಪರಸ್ಪರ ಸ್ನೇಹಿತರಾಗಿದ್ದರು ಎನ್ನಲಾಗಿದೆ.

ಹುಣಸೂರಿನ ಬೈಪಾಸ್ ರಸ್ತೆಯಲ್ಲಿರುವ ಅದುಲಾಮ್ ಕನ್ವೆನ್ಷನ್ ಹಾಲ್‌ನಲ್ಲಿ ಇಂದು ನಡೆಯುತ್ತಿದ್ದ ಪಾಲಿಬೆಟ್ಟದ ಸದಾನಂದ ಮತ್ತು ಹುಣಸೂರು ನಿವಾಸಿ ಜಯಕುಮಾರಿ ವಿವಾಹ ● 8ನೇ ಪುಟಕ್ಕೆ

ಮೈಸೂರಲ್ಲಿ ಸಿದ್ದರಾಮಯ್ಯರ ನೇತೃತ್ವದಲ್ಲಿ ಭಾರೀ ಪ್ರತಿಭಟನೆ

ಬೆಲೆ ಏರಿಕೆ, 40 ಪರ್ಸೆಂಟ್ ಕಮಿಷನ್, ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ಆಕ್ರೋಶ

● ಸಿದ್ದು ಜೊತೆ ಕಾಲ್ನಡಿಗೆಯಲ್ಲಿ ಸಾಗಿದ ಕಾರ್ಯಕರ್ತರು ● ಬಿಜೆಪಿ ವಿರುದ್ಧ ಘೋಷಣೆ



ಮೈಸೂರು, ಏ.20(ಎಂಟಿವೈ)– ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ, ರಾಜ್ಯ ಸರ್ಕಾರದ ಶೇ.40ರಷ್ಟು ಕಮಿಷನ್ ದಂಧೆ ಹಾಗೂ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಬಂಧಿಸುವಂತೆ ಆಗ್ರಹಿಸಿ ಮೈಸೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಿಂದ ಜಿಲ್ಲಾ ಗ್ರಾಮಾಂತರ ಮತ್ತು ನಗರ ಕಾಂಗ್ರೆಸ್ ಕಾರ್ಯಕರ್ತರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಡಿಸಿ ಕಚೇರಿವರೆಗೂ ಮೆರವಣಿಗೆ ನಡೆಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಹಾತ್ಮಗಾಂಧಿ ವೃತ್ತದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ನಗಾರಿ ಬಾರಿಸುವ ಮೂಲಕ ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಿದರೆ, ಕೆ.ಎಸ್.ಈಶ್ವರಪ್ಪ ಮುಖವಾಡ ಧರಿಸಿದ್ದವರಿಗೆ ಶಾಸಕ ತನ್ವೀರ್ ಸೇಠ್ ಕೋಳ ತೊಡಿಸುವ ಮೂಲಕ ಬಂಧನದ ಅಣಕು ಪ್ರದರ್ಶನ ನಡೆಸಿ ಗಮನ ಸೆಳೆದರು. ಇದೇ ವೇಳೆ ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ರಾಜ್ಯದ ಬಿಜೆಪಿ ಸರ್ಕಾರವನ್ನು ಭ್ರಷ್ಟ ಸರ್ಕಾರವೆಂದು ಜರಿದು ಧಿಕ್ಕಾರ ಕೂಗಿದರು. ಶೇ.40 ಕಮಿಷನ್ ಪಡೆಯುವ ಸರ್ಕಾರ ಎಂದು ಘೋಷಣೆಗಳನ್ನು ಕೂಗಿದರು. ಈಶ್ವರಪ್ಪ ಬಂಧಿಸುವಂತೆ ಆಗ್ರಹಿಸುವ ಪ್ಲೇಕಾರ್ಡ್‌ಗಳನ್ನು ಪ್ರದರ್ಶಿಸಿದರು. ಮೆರವಣಿಗೆಯಲ್ಲಿ ಕಾಂಗ್ರೆಸ್ ಬಾವುಟ ರಾರಾಜಿಸಿತು.

ಗಾಂಧಿ ವೃತ್ತದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಒಲಂಪಿಯಾ ವೃತ್ತ, ಚಿಕ್ಕಗಡಿಯಾರ ವೃತ್ತದ ಮಾರ್ಗವಾಗಿ ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಡಿಸಿ ಕಚೇರಿ ತಲುಪಿತು. ● 3ನೇ ಪುಟಕ್ಕೆ





ನೆಲಸಮ ವಿರೋಧಿಸಿ ದೇವರಾಜ ಮಾರುಕಟ್ಟೆ ವ್ಯಾಪಾರಿಗಳ ಪ್ರತಿಭಟನೆ

ಮಧ್ಯಾಹ್ನ 2 ಗಂಟೆವರೆಗೂ ಎಲ್ಲಾ ಅಂಗಡಿ–ಮುಂಗಟ್ಟುಗಳು ಬಂದ್

● ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬೆಂಬಲ ● ಮೆರವಣಿಗೆ ಮೂಲಕ ಡಿಸಿ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಕೆ ● ದಾರಿಯುದ್ದಕ್ಕೂ ಘೋಷಣೆ ಕೂಗಿ ಒಗ್ಗಟ್ಟು ಪ್ರದರ್ಶಿಸಿದ ವರ್ತಕರು





ದೇವರಾಜ ಮಾರುಕಟ್ಟೆ ಉಳಿಸಿ ಸಂರಕ್ಷಿಸುವಂತೆ ಆಗ್ರಹಿಸಿ ಮಾರುಕಟ್ಟೆ ವಹಿವಾಟು ಬಂದ್ ಮಾಡಿ ಮೈಸೂರಲ್ಲಿ ನಡೆದ ಬೃಹತ್ ಪ್ರತಿಭಟನಾ ಮೆರವಣಿಗೆಗೆ ರಾಜಮನೆತನದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಬಾಡಿಗೆದಾರರು, ವ್ಯಾಪಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಏ.20 (ಎಂಟಿವೈ)–ಪಾರಂಪರಿಕ ದೇವರಾಜ ಮಾರುಕಟ್ಟೆ ಕಟ್ಟಡ ನೆಲಸಮ ವಿರೋಧಿಸಿ ಮೈಸೂರಿನಲ್ಲಿ ದೇವರಾಜ ಮಾರುಕಟ್ಟೆ ಬಾಡಿಗೆದಾರರು ವಹಿವಾಟು ಬಂದ್ ಮಾಡಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪಾರಂಪರಿಕ ತಜ್ಞರ ಸಮಿತಿ ಮೈಸೂರಿನ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡವನ್ನು ನೆಲಸಮಗೊಳಿಸಿ ಪುನರ್ ನಿರ್ಮಾಣ ಮಾಡುವ ಸಂಬಂಧ ವರದಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಕಟ್ಟಡ ನೆಲಸಮ ಮಾಡಲು ಉದ್ದೇಶಿಸಿರುವ ಕ್ರಮವನ್ನು ವಿರೋಧಿಸಿ ಇಂದು ಬೆಳಗ್ಗೆ ಬೃಹತ್ ಪ್ರತಿಭಟನೆ ನಡೆಸಿದ ವರ್ತಕರು ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡ ನೆಲಸಮಗೊಳಿಸಲು ಬಿಡುವುದಿಲ್ಲ ಎಂದು ಘೋಷಣೆ ಕೂಗಿದರು.

ದೇವರಾಜ ಮಾರುಕಟ್ಟೆಯ ಹಣ್ಣು, ತರಕಾರಿ, ಹೂವು, ತೆಂಗಿನಕಾಯಿ ಹಾಗೂ ವಿವಿಧ ಮಳಿಗೆ ಇರುವ ಎಲ್ಲಾ ಬ್ಲಾಕ್‌ಗಳನ್ನು ಬಂದ್ ಮಾಡಿದ ವರ್ತಕರು ಸ್ವಯಂ ಪ್ರೇರಣೆಯಿಂದ ವಹಿವಾಟು ಸ್ಥಗಿತಗೊಳಿಸಿ ಚಿಕ್ಕಗಡಿಯಾರ ವೃತ್ತದ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ದೇವರಾಜ ಮಾರುಕಟ್ಟೆಯ ಬಾಡಿಗೆದಾರರ ಸಂಘ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಎಲ್ಲಾ ವ್ಯಾಪಾರಿಗಳು ಪಾಲ್ಗೊಂಡು ಒಗ್ಗಟ್ಟು ಪ್ರದರ್ಶಿಸಿದರು. ಪ್ರತಿಭಟನೆಯಲ್ಲಿ ಕೇವಲ ದೇವರಾಜ ಮಾರುಕಟ್ಟೆಯಲ್ಲಿರುವ ಮಳಿಗೆದಾರರು ಮಾತ್ರವಲ್ಲದೆ, ಸಂಯ್ಯಾಜಿರಾವ್ ರಸ್ತೆ ● 8ನೇ ಪುಟಕ್ಕೆ

ಪಾರಂಪರಿಕ ತಜ್ಞರ ಸಮಿತಿ ಪುನಃ ರಚನೆಗೆ ಯದುವೀರ್ ಒತ್ತಾಯ

100 ವರ್ಷ ದಾಟಿದೆ ಎಂದು ಅರಮನೆ ಕೆಡವಲು ಸಾಧ್ಯನಾ?

ಮೈಸೂರು: ಮೈಸೂರಿನ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡ ನೆಲಸಮಗೊಳಿಸಲು ವರದಿ ನೀಡಿರುವ ಪಾರಂಪರಿಕ ತಜ್ಞರ ಸಮಿತಿ ಅವೈಜ್ಞಾನಿಕವಾಗಿದ್ದು, ಅನುಭವವುಳ್ಳ ನೈಜ ತಜ್ಞರ ಒಳಗೊಂಡ ಸಮಿತಿಯನ್ನು ಪುನರ್ ರಚಿಸಬೇಕು ಎಂದು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡವನ್ನು ನೆಲಸಮ ಮಾಡಿ, ಪುನರ್ ನಿರ್ಮಾಣ ಮಾಡುವಂತೆ ಪಾರಂಪರಿಕ ಸಮಿತಿ ವರದಿ ನೀಡಿದೆ ಎಂದು ಸರ್ಕಾರದ ಕಡೆಯಿಂದ ಮಾಹಿತಿ ಲಭ್ಯವಾಗಿದೆ. ಆ ಸಮಿತಿಯಲ್ಲಿ ನಿಜವಾದ ಪಾರಂಪರಿಕ ತಜ್ಞರು ಇಲ್ಲದಿರುವುದು ನಮ್ಮ ಗಮನಕ್ಕೆ ಬಂದಿದೆ. ತಜ್ಞರ ಅನುಪಸ್ಥಿತಿಯಲ್ಲಿ ಕೈಗೊಂಡಿರುವ ತೀರ್ಮಾನವನ್ನು ಒಪ್ಪಲು ಸಾಧ್ಯವಿಲ್ಲ. ಮೈಸೂರಲ್ಲಿ ಪ್ರೊ.ರಂಗರಾಜು ಹಾಗೂ ಗುಂಡೂರಾವ್ ಇಬ್ಬರೇ ಪಾರಂಪರಿಕ ತಜ್ಞರು. ● 8ನೇ ಪುಟಕ್ಕೆ





ಕೆ.ಆರ್. ಕ್ಷೇತ್ರ 'ಅಪಘಾತ ಮುಕ್ತ, ಸುರಕ್ಷಿತ ರಸ್ತೆ' ಕ್ಷೇತ್ರವಾಗಿಸುವ ನಿರ್ಧಾರ

ಶಾಸಕ ರಾಮದಾಸರಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಮೈಸೂರು,ಏ.20(ಎಸ್‌ಬಿಡಿ)–ಕೃಷ್ಣರಾಜ ಕ್ಷೇತ್ರವನ್ನು 'ಅಪಘಾತ ಮುಕ್ತ ಮತ್ತು ಸುರಕ್ಷಿತ ರಸ್ತೆ' ಕ್ಷೇತ್ರವನ್ನಾಗಿಸುವ ನಿಟ್ಟಿನಲ್ಲಿ ಎಲ್ಲಾ ರಸ್ತೆಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ ಎಂದು ಶಾಸಕ ಎಸ್.ಎ. ರಾಮದಾಸ್ ತಿಳಿಸಿದರು.



ಕ್ಷೇತ್ರ ವ್ಯಾಪ್ತಿಯ 52, 60 ಹಾಗೂ 62ನೇ ವಾರ್ಡ್‌ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ, ಕ್ಷೇತ್ರವನ್ನು 'ಅಪಘಾತ ಮುಕ್ತ ಹಾಗೂ ಸುರಕ್ಷಿತ ರಸ್ತೆ' ಕ್ಷೇತ್ರವನ್ನಾಗಿ ರೂಪಿಸುವ ಉದ್ದೇಶದಿಂದ ಒಟ್ಟು 421 ಕಿ.ಮೀ. ರಸ್ತೆಯಲ್ಲಿ ಈಗಾಗಲೇ 250 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಹೇಳಿದರು.

ಕಾಮಗಾರಿಗೆ ಚಾಲನೆ: 62ನೇ ವಾರ್ಡ್ ವಿಶ್ವೇಶ್ವರನಗರದ ಜಾಕಿ ಫ್ಯಾಕ್ಟರಿ ಬಳಿಯಿಂದ ಗುರುಪಾದಸ್ವಾಮಿ ಮುಖ್ಯರಸ್ತೆ ಸಂಪರ್ಕಿಸುವ ರಸ್ತೆಗೆ ಡಾಂಬರೀಕರಣ, 60ನೇ ವಾರ್ಡ್ ಅಶೋಕಪುರಂನ ರಾಜೀವ್ ಗಾಂಧಿ ಕಾಲೋನಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಅಭಿವೃದ್ಧಿ ಕಾಮಗಾರಿ ಹಾಗೂ 52ನೇ ವಾರ್ಡ್ ಇಟ್ಟಿಗೆಗೂಡು ವ್ಯಾಪ್ತಿಯ ವೆಂಕಟಲಿಂಗಯ್ಯ ಬಡಾವಣೆಯಲ್ಲಿ ನೂತನ ಒಳಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಎ.ರಾಮದಾಸ್ ಚಾಲನೆ ನೀಡಿದರು.

ಈ ವೇಳೆ ನಗರ ಪಾಲಿಕೆ ಸದಸ್ಯರಾದ ಶಾಂತಮ್ಮ ವಡಿವೇಲು, ಛಾಯಾದೇವಿ ನವೀನ್, ನಾಮ ನಿರ್ದೇಶಿತ ಸದಸ್ಯ ಪಿ.ಟಿ.ಕೃಷ್ಣ, ಬಿಜೆಪಿ ಕೆ.ಆರ್ ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿ ನಾಗೇಂದ್ರ ಕುಮಾರ್, ಮೂರ್ತಿ, ಮಹದೇವ್, ಮಧು, ರವಿ, ರಾಜು, ರಾಜಣ್ಣ, ರಾಜೀವ, ಕುಮಾರ್, ನಾಗರತ್ನ, ನವೀನ್, ಹೊಯ್ಸಳ, ಜನಾರ್ಧನ್, ವಿನಯ್ ಪಾಂಚಜನ್ಯ, ವಿಜಯ್, ಶಿವರಾಜ್, ಕೃಷ್ಣ ಸೇರಿದಂತೆ ಅನೇಕ ಮುಖಂಡರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಏ.23ರಂದು ಶ್ರೀ ಬಸವೇಶ್ವರ, ಡಾ.ಶ್ರೀ ಶಿವಕುಮಾರ ಸ್ವಾಮೀಜಿ, ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜಯಂತಿ

ಮೈಸೂರು,ಏ.20(ಪಿಎಂ)–ವೀರಶೈವ ಲಿಂಗಾಯತ ಸೇವಾ ಸಮಿತಿ ಪೂರ್ವವಲಯ ಮೈಸೂರು ವತಿಯಿಂದ ಏ.23ರಂದು ಜಗಜ್ಯೋತಿ ಶ್ರೀ ಬಸವೇಶ್ವರ, ಡಾ.ಶ್ರೀಶಿವಕುಮಾರ ಸ್ವಾಮೀಜಿ ಹಾಗೂ ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜಯಂತಿ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಗೌರವಾಧ್ಯಕ್ಷ ಪ್ರೊ.ಸಿ.ಬಿ.ಬಸವರಾಜು ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6ಕ್ಕೆ ನಗರದ ಜೆಎಸ್‌ಎಸ್ ಬಡಾವಣೆಯ ಮೊದಲ ಹಂತದಲ್ಲಿರುವ ಜಿಲ್ಲಾ ಅಖಿಲ ಭಾರತ ವೀರಶೈವ ಮಹಾಸಭಾದ ನಿವೇಶನದಲ್ಲಿ ಆಯೋಜಿಸಿರುವ ಜಯಂತಿ ಮಹೋತ್ಸವವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸುವರು ಎಂದರು.

ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಮಹಾಂತ ಸ್ವಾಮೀಜಿ ಉಪಸ್ಥಿತಿ ವಹಿಸುವರು. ಮಲ್ಲನಮೂಲೆಯ ಶ್ರೀ ಗುರುಕಂಬಳೀಶ್ವರ ಮಠದ ಶ್ರೀ ಚೆನ್ನಬಸವ ಸ್ವಾಮೀಜಿ, ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ ಮತ್ತು ರಾಘವೇಂದ್ರ ನಗರ ಶ್ರೀ ಬಸವೇಶ್ವರ ಮಠದ ಶ್ರೀ ಶಿವಪ್ರಭು ಸ್ವಾಮೀಜಿ ಅವರು ಆಶೀರ್ವಚನ ನೀಡುವರು. ಶ್ರೀ ಕುಂದೂರು ಮಠದ ಡಾ.ಶ್ರೀ ಶರತ್‌ಚಂದ್ರ ಸ್ವಾಮೀಜಿ ನುಡಿನಮನ ಸಲ್ಲಿಸುವರು ಎಂದರು.

ಅಲ್ಲದೆ, ಅಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಸಾರ್ವಜನಿಕರಿಗೆ ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್ ಮಾಡಿಸುವ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಅಂದು ಸಂಜೆ 5ಕ್ಕೆ ಜ್ಞಾನ ಪ್ರಸೂನಾಂಭ ಮಹಿಳಾ ಭಜನಾ ತಂಡದಿಂದ ಭಜನೆ ಕಾರ್ಯಕ್ರಮ ಇರಲಿದೆ ಎಂದು ಹೇಳಿದರು. ಸಮಿತಿ ಮತ್ತೊಬ್ಬ ಗೌರವಾಧ್ಯಕ್ಷ ಟಿ.ಬಿ.ಮಹೇಶ, ಅಧ್ಯಕ್ಷ ಎನ್.ಶ್ರೀಕಂಠಮೂರ್ತಿ, ಪ್ರಧಾನ ಕಾರ್ಯದರ್ಶಿ ಬಸವರಾಜು, ಖಜಾಂಚಿ ಎಲ್.ಚೆನ್ನಬಸವರಾಜು, ನಿರ್ದೇಶಕ ಷಡಕ್ಷರಿ ಗೋಷ್ಠಿಯಲ್ಲಿದ್ದರು.

'ನಾಡೋಜ' ಪುರಸ್ಕೃತರಿಗೆ ಅಭಿನಂದನೆ



ಮೈಸೂರು,ಏ.20(ಪಿಎಂ)–ಹಂಪಿ ಕನ್ನಡ ವಿವಿಯಿಂದ 'ನಾಡೋಜ' ಗೌರವ ಪ್ರಶಸ್ತಿಗೆ ಭಾಜನರಾದ ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಮತ್ತು ಸಂಸ್ಕೃತ ಭಾಷಾ ವಿದ್ವಾಂಸ ಡಾ.ಭಾಷ್ಯಂ ಸ್ವಾಮೀಜಿಯವರನ್ನು ಬುಧವಾರ ಅಭಿನಂದಿಸಲಾಯಿತು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟದ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಇಬ್ಬರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಅಭಿನಂದನಾ ನುಡಿಗಳನ್ನಾಡಿದ ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ಬಹುಭಾಷಾ ತಜ್ಞರು. ಛಂದಸ್ಸು, ವ್ಯಾಕರಣ, ನಿಘಂಟು ಮತ್ತು ಸಂಶೋಧನೆಯಲ್ಲಿ ಅವರು ಮೈಲುಗಲ್ಲು ಸೃಷ್ಟಿಸಿದ್ದಾರೆ. ಅವರು ತಮ್ಮ ಬಹುಭಾಷಾ ಜ್ಞಾನದಿಂದ ವಿದೇಶಕ್ಕೆ ತೆರಳಿ, ಸಿರಿ–ಸಂಪತ್ತು ಗಳಿಸಬಹುದಿತ್ತು. ಆದರೆ ಅವರು ಅದಕ್ಕೆ ಆಸೆಪಟ್ಟವರಲ್ಲ. ಇವರ ಸಾಧನೆ ಕುರಿತು 10ಕ್ಕೂ ಹೆಚ್ಚು ಪಿಹೆಚ್.ಡಿ ಮಹಾಪ್ರಬಂಧ ಮಂಡಿಸಬಹುದು ಎಂದು ಅಭಿಮಾನ ಮೆರೆದರು.

ಶಾಸಕ ಎಲ್.ನಾಗೇಂದ್ರ ಮಾತನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ನಿವೃತ್ತ ಪ್ರಾಧ್ಯಾಪಕ ಡಾ.ಡಿ.ಕೆ.ರಾಜೇಂದ್ರ ಮತ್ತಿತರರು ಹಾಜರಿದ್ದರು.

ದ್ವಿತೀಯ ಪಿಯುಸಿ ಪರೀಕ್ಷೆ: ನಿಷೇಧಾಜ್ಞೆ ಜಾರಿ

ಮೈಸೂರು,ಏ.20–ನಗರದಲ್ಲಿ ಏ.22ರಿಂದ ಮೇ 18ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷೆ ಮುಗಿಯುವವರೆಗೆ ಮುಚ್ಚುವಂತೆ ಆದೇಶಿಸಿ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.


ನಿಧನ

ಟಿ.ರಾಮೇಗೌಡ



ಮೈಸೂರು,ಏ.20–ಮೈಸೂರಿನ ಮೇಟಗಳ್ಳಿ ನಿವಾಸಿ ಹಾಗೂ ಮಂಡಲ ಪಂಚಾಯತ್ ಮಾಜಿ ಸದಸ್ಯರಾಗಿದ್ದ ಟಿ.ರಾಮೇಗೌಡ (90) ಏ.19ರಂದು ನಿಧನರಾದರು. ಮೃತರು ಪಾಲಿಕೆ ಮಾಜಿ ಸದಸ್ಯ ದೇವರಾಜು ಸೇರಿದಂತೆ ಮೂವರು ಪುತ್ರರು ಮತ್ತು ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮೇಟಗಳ್ಳಿಯ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಶಾಸಕ ಎಲ್.ನಾಗೇಂದ್ರ, ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ. ಕೆ.ಎಸ್.ಸದಾನಂದ, ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್. ಕೆ. ರಾಮು, ಕೀಲಾರ ಜಯರಾಂ ಸೇರಿದಂತೆ ಅನೇಕ ಗಣ್ಯರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಸಿ.ಮಂಚಯ್ಯ



ಶ್ರೀರಂಗಪಟ್ಟಣ ತಾಲೂಕಿನ ಬಾಬುರಾಯನಕೊಪ್ಪಲಿನ ಸಿ.ಮಂಚಯ್ಯ (86) ಬುಧವಾರ ನಿಧನರಾದರು. ಮೃತರು ಪತ್ನಿ ನಿಂಗಮ್ಮ, ಪತ್ರಿಕಾ ಪ್ರತಿನಿಧಿ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿ ದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಏ.21) ಗುರುವಾರ ಬಾಬುರಾಯನ ಕೊಪ್ಪಲಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವ್



ಭಾರತ್‌ನಗರದ ನಿವಾಸಿ ಮಹದೇವ್ ಎನ್.(45) ಅವರು ಅನಾರೋಗ್ಯದಿಂದ ಬುಧವಾರ ನಿಧನರಾದರು. ಕಲಾಮಂದಿರದಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿದ್ದ ಮಹದೇವ್ ಅವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 2 ಗಂಟೆಗೆ ಬನ್ನಿಮಂಟಪ ಸಮೀಪದ ಜೋಡಿ ತೆಂಗಿನಮರ ರಸ್ತೆಯ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿಂದ ಹಾರಾಡುವ ವಿಮಾನಗಳ ಸೀಟು ಭರ್ತಿ

● ಮಾರ್ಚ್ ತಿಂಗಳಲ್ಲಿ 15,000 ಮಂದಿ ವಿಮಾನ ಪ್ರಯಾಣ ● ಮೇ 3ರಿಂದ ಮೈಸೂರಿಂದ ಹುಬ್ಬಳ್ಳಿಗೆ ವಿಮಾನ ಸೌಕರ್ಯ

ಮೈಸೂರು, ಏ.20(ಆರ್‌ಕೆ)– ಕೋವಿಡ್ ಸಂಕಷ್ಟ ಪರಿಸ್ಥಿತಿಯಿಂದಾಗಿ ಇಳಿಮುಖವಾಗಿದ್ದ ಮೈಸೂರು ವಿಮಾನ ನಿಲ್ದಾಣ ಚಟುವಟಿಕೆಗಳು ಇದೀಗ ಗರಿಗೆದರಿವೆ.

ಕೋವಿಡ್ ಪ್ರಕರಣಗಳು ಸಂಪೂರ್ಣವಾಗಿ ಕಡಿಮೆಯಾದ ನಂತರ ಸಾಲು ಸಾಲು ರಜೆಗಳು, ಬಹುತೇಕ ಪರೀಕ್ಷೆಗಳು ಮುಗಿದಿರುವ ಕಾರಣ ಪ್ರವಾಸ ಕೈಗೊಳ್ಳುತ್ತಿರುವವರು ಮೈಸೂರಿನಿಂದ ಪ್ರವಾಸಿ ಕೇಂದ್ರಗಳಿಗೆ ನೇರವಾಗಿ ವಿಮಾನದಲ್ಲಿ ಪ್ರಯಾಣಿಸಲಾರಂಭಿಸಿದ್ದಾರೆ.

ಪರಿಣಾಮ ಗೋವಾ, ಹೈದರಾಬಾದ್, ಚೆನ್ನೈ ಸೇರಿದಂತೆ ವಿವಿಧ ನಗರಗಳಿಗೆ ತೆರಳುವ ವಿಮಾನಗಳಿಗೆ ಭಾರೀ ಬೇಡಿಕೆ ಇದ್ದು, ಟಿಕೆಟ್‌ಗಳನ್ನು ಮುಂಗಡವಾಗಿ ಬುಕ್ ಮಾಡಲಾಗಿದೆ ಎಂದು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ನಿರ್ದೇಶಕ ಆರ್. ಮಂಜುನಾಥ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.



ಫೈಲ್ ಚಿತ್ರ

ಗೋವಾ, ಹೈದರಾಬಾದ್, ಚೆನ್ನೈನಂತಹ ನಗರಗಳಿಗೆ ಹೋಗಲು ಪ್ರವಾಸಿಗರಿಂದ ಭಾರೀ ಬೇಡಿಕೆ ಬರುತ್ತಿದ್ದು, ಹೆಚ್ಚುವರಿ ವಿಮಾನಗಳನ್ನು ವ್ಯವಸ್ಥೆ ಮಾಡಿ ಎಂದು ಒತ್ತಾಯ ಕೇಳಿಬರುತ್ತಿದೆ. ಈ ಸ್ಥಳಗಳು ಅತೀ ದೂರವಿರುವುದರಿಂದ ಕಾರಿನಲ್ಲಿ ಪ್ರಯಾಣಿಸಲು ಹೆಚ್ಚು ಸಮಯ ಹಾಗೂ ಆಯಾಸವಾಗುತ್ತದೆ. ಹಣ ಖರ್ಚಾದರೂ ಸರಿ ವಿಮಾನದಲ್ಲೇ ಪ್ರಯಾಣಿಸಬೇಕೆಂಬ ಒತ್ತಾಯ ಮಕ್ಕಳಿಂದಲೂ ಪೋಷಕರಿಗೆ ಬರುತ್ತಿರುವುದು ವಿಮಾನಗಳಲ್ಲಿ ಸೀಟುಗಳು ಭರ್ತಿಯಾಗಲು ಕಾರಣ ಎಂದು ತಿಳಿಸಿದರು.

ಕಳೆದ ತಿಂಗಳು 15,000 ಮಂದಿ ವಿಮಾನಗಳಲ್ಲಿ ಪ್ರಯಾಣಿಸಿದ್ದಾರೆ. ಈ ತಿಂಗಳು(ಏಪ್ರಿಲ್) ಸಹ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ವಿಶೇಷವಾಗಿ ಗೋವಾ, ಚೆನ್ನೈ, ಹೈದರಾಬಾದ್ ಹಾಗೂ ಬೆಂಗಳೂರಿಗೆ ಎಲ್ಲಾ ವಿಮಾನಗಳಲ್ಲೂ ಶೇ.100ರಷ್ಟು ಸೀಟುಗಳು ಭರ್ತಿಯಾಗುತ್ತಿರುವುದರಿಂದ ಮೈಸೂರು ವಿಮಾನ ನಿಲ್ದಾಣವು ದಿನಪೂರ್ತಿ ಚಟುವಟಿಕೆಯಿಂದ ಕೂಡಿದೆ. ನಿತ್ಯ 6 ಮಾರ್ಗಗಳಲ್ಲಿ ವಿಮಾನಗಳು ಹಾರಾಡುತ್ತಿದ್ದು, 12 ಟ್ರಿಪ್ ಮಾಡುತ್ತಿವೆ. ಬೆಂಗಳೂರು, ಕೊಚ್ಚಿ, ಚೆನ್ನೈ, ಹೈದರಾಬಾದ್, ಗೋವಾಕ್ಕೆ ನೇರ ಸಂಪರ್ಕವಿದೆ. ಹೈದರಾಬಾದ್, ಗೋವಾ ಮತ್ತು ಚೆನ್ನೈಗೆ ಅತೀ ಹೆಚ್ಚು ಬೇಡಿಕೆ ಇರುವುದರಿಂದ ಹೆಚ್ಚುವರಿ ವಿಮಾನಗಳ ಸಂಚಾರಕ್ಕೆ ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ಮಾತುಕತೆ ಮಾಡಲಾಗುತ್ತಿದೆ ಎಂದು ಮಂಜುನಾಥ್ ತಿಳಿಸಿದ್ದಾರೆ.

ಮೇ3ರಿಂದ ಹುಬ್ಬಳ್ಳಿಗೆ: ಮೈಸೂರು ಮತ್ತು ಹುಬ್ಬಳ್ಳಿ ನಡುವೆ ಮೇ 3ರಿಂದ ಇಂಡಿಗೋ ವಿಮಾನ ಸೇವೆ ಆರಂಭವಾಗಲಿದೆ. ವಾರದಲ್ಲಿ 3 ದಿನ (ಮಂಗಳವಾರ, ಗುರುವಾರ, ಶನಿವಾರ) ಹಾರಾಟ ನಡೆಸುವ ಇಂಡಿಗೋ ಹುಬ್ಬಳ್ಳಿಯಿಂದ ಸಂಜೆ 4.55ಗಂಟೆಗೆ ಹೊರಟು 6.05ಕ್ಕೆ ಮೈಸೂರು ತಲುಪಲಿದೆ. ಮೈಸೂರಿನಿಂದ ಸಂಜೆ 6.25ಕ್ಕೆ ಹೊರಟು ರಾತ್ರಿ 7.40ಕ್ಕೆ ಹುಬ್ಬಳ್ಳಿ ನಗರ ತಲುಪಲಿದೆ ಎಂದು ನಿರ್ದೇಶಕರು ತಿಳಿಸಿದರು.

ಮಂಗಳೂರು ಬೆಳಗಾವಿಗೆ: ಕೋವಿಡ್ ನಿರ್ಬಂಧದಿಂದಾಗಿ ಸ್ಥಗಿತಗೊಂಡಿದ್ದ ಬೆಳಗಾವಿ ಮತ್ತು ಮಂಗಳೂರಿಗೆ ಮೈಸೂರಿನಿಂದ ವಿಮಾನ ಸಂಚಾರವನ್ನು ಮತ್ತೆ ಆರಂಭಿಸಲಾಗುವುದು. ಈ ಸ್ಥಳಗಳಿಗೆ ಬೇಡಿಕೆ ಕೇಳಿ ಬರುತ್ತಿರುವುದರಿಂದ ಸ್ಟಾರ್ ಏರ್‌ವೇಸ್ ಸಂಸ್ಥೆಯೊಂದಿಗೆ ಮಾತನಾಡುತ್ತಿದ್ದೇವೆ. ಅದು ಸಾಕಾರಗೊಂಡಲ್ಲಿ ಗೋವಾಗೂ ಮತ್ತಷ್ಟು ಮಂದಿ ಪ್ರಯಾಣಿಸಬಹುದು ಎಂದರು. ಪ್ರತಿದಿನ ಸಂಚರಿಸುವ ವಿಮಾನಗಳಿಗೆ ಎಲ್ಲಾ ಟ್ರಿಪ್‌ಗಳಲ್ಲೂ ಶೇ.100ರಷ್ಟು ಸೀಟುಗಳು ಭರ್ತಿಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ರನ್‌ವೇ ವಿಸ್ತರಣೆಯಾದಲ್ಲಿ ಮತ್ತಷ್ಟು ದೊಡ್ಡ ದೊಡ್ಡ ವಿಮಾನಗಳೂ ದೇಶದ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸಲು ಅವಕಾಶವಿದೆ ಎಂದು ಮಂಜುನಾಥ ತಿಳಿಸಿದರು.

ಪ್ರವೇಶ ಪರೀಕ್ಷೆ

ಮೈಸೂರು, ಏ.20–ಜವಾಹರ ನವೋದಯ ವಿದ್ಯಾಲಯದ ವತಿಯಿಂದ ಈ ಸಾಲಿನ 6ನೇ ತರಗತಿಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, ಏ.30ರಂದು ಶನಿವಾರ ಪರೀಕ್ಷೆ ನಡೆಯಲಿದೆ. ಈಗಾಗಲೇ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಿರುವ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು www.navo daya.gov.in ಅಥವಾ https://navodaya.gov.in/nvs/nvs-school/MYSURU /en/contact-us/JNV ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು. ಪ್ರವೇಶ ಪತ್ರದಲ್ಲಿ ವಿದ್ಯಾರ್ಥಿಯು 5ನೇ ತರಗತಿಯಲ್ಲಿ ಓದಿದ ಮುಖ್ಯೋಪಾಧ್ಯಾಯರ ಸಹಿ ಮತ್ತು ಸೀಲ್ ಇರತಕ್ಕದ್ದು ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರು ತಿಳಿಸಿದ್ದಾರೆ.

ಬಿಜೆಪಿ ಯುವ ಮೋರ್ಚಾದಿಂದ ಮಾಜಿ ಯೋಧರಿಗೆ ಸನ್ಮಾನ

ಮೈಸೂರು,ಏ.20(ಪಿಎಂ)–ಬಿಜೆಪಿ ಯುವ ಮೋರ್ಚಾ ಮೈಸೂರು ನಗರ ವತಿಯಿಂದ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವ ಮತ್ತು ಸಾಮಾಜಿಕ ನ್ಯಾಯದ ಪಾಕ್ಷಿಕ ಕಾರ್ಯಕ್ರಮದ ಅಂಗವಾಗಿ ಬುಧವಾರ ನಿವೃತ್ತ ಯೋಧರನ್ನು ಸನ್ಮಾನಿಸಲಾಯಿತು.



ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾಜಿ ಯೋಧರಾದ ಹವಾಲ್ದಾರ್ ರವೀಂದ್ರಕುಮಾರ್ ಜಟ್ಟಿ, ಹವಾಲ್ದಾರ್ ಜಯರಾಮ್, ಉನ್ನಿ ಕೃಷ್ಣನ್, ಶಂಭುಲಿಂಗ ಮಠದ್ ಮತ್ತು ರವಿಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಮಾತನಾಡಿದ ಯುವ ಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್ ಗೌಡ, ಸ್ವಾತಂತ್ರ್ಯ ಸೇನಾನಿಗಳು ಹಾಗೂ ದೇಶದ ಯೋಧರನ್ನು ಸಮಾಜ ಗೌರವಿಸಿ, ಸ್ಮರಿಸಬೇಕು. ದೇಶದ ಎಲ್ಲಾ ಕ್ಷೇತ್ರದಲ್ಲಿನ ಸಾಧಕರು, ಹುತಾತ್ಮರನ್ನು ಸದಾ ಸ್ಮರಿಸುವ ಪಕ್ಷ ಬಿಜೆಪಿ. ನಮ್ಮ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಹಾಗೂ ದೇಶ ಕಾಯುವ ಸೈನಿಕರನ್ನು ಗೌರವಿಸಿ, ಆರಾಧಿಸುತ್ತಾರೆ ಎಂದರು. ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಜೈಶಂಕರ್, ಉಸ್ತುವಾರಿ ರಮೇಶ್, ನಗರ ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್, ಉಪಾಧ್ಯಕ್ಷರಾದ ಸಚಿನ್, ಮುಖಂಡರಾದ ಪುನೀತ್, ನಿಶಾಂತ್, ಹರ್ಷವರ್ಧನ್, ಕಿರಣ್‌ಕುಮಾರ್, ರಾಘವೇಂದ್ರ, ಮನುಶೈವ, ಮಧುಕುಮಾರ್, ಲೋಹಿತ್, ಸಚಿನ್‌ಗೌಡ ಮತ್ತಿತರರಿದ್ದರು.

ಏ.22ರಿಂದ 24ರವರೆಗೆ ಮೈಸೂರಲ್ಲಿ ಎಸ್‌ಎಫ್‌ಇ ಇಂಡಿಯಾದ 9ನೇ ಅಂತಾರಾಷ್ಟ್ರೀಯ ಸಮ್ಮೇಳನ

ಮೈಸೂರು,ಏ.20(ಪಿಎಂ)– 'ಜಾಗತಿಕ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಎಥ್ನೋಫಾರ್ಮಕಾಲಜಿ ಅನ್ನು ಮರು ವ್ಯಾಖ್ಯಾನಿಸುವುದು' ಶೀರ್ಷಿಕೆಯಡಿ ಏ.22ರಿಂದ 24ರವರೆಗೆ ಮೈಸೂರಿನಲ್ಲಿ ಸೊಸೈಟಿ ಫಾರ್ ಎಥ್ನೋ ಫಾರ್ಮಕಾಲಜಿ (ಎಸ್‌ಎಫ್‌ಇ) ಇಂಡಿಯಾದ 9ನೇ ಅಂತಾರಾಷ್ಟ್ರೀಯ ಸಮ್ಮೇಳನ ನಡೆಯಲಿದೆ.

SFEC 2022
22nd to 24th, April 2022

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಜೆಎಸ್‌ಎಸ್ ಫಾರ್ಮಸಿ ಕಾಲೇಜು ಆವರಣದಲ್ಲಿ ಸಮ್ಮೇಳನ ನಡೆಯಲಿದ್ದು, ಇದರ ಅಂಗವಾಗಿ ವಿಚಾರ ಮಂಡನೆ, ಗಿಡ ಮೂಲಿಕೆ ಔಷಧಗಳ ಪ್ರದರ್ಶನ ಸೇರಿದಂತೆ ನಾನಾ ಕಾರ್ಯಕ್ರಮಗಳು ಜರುಗಲಿವೆ. ಎಸ್‌ಎಫ್‌ಇ ಇಂಡಿಯಾ ಮೈಸೂರು ಘಟಕ, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಮತ್ತು ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ಸಂಯುಕ್ತಾಶ್ರಯದಲ್ಲಿ ಈ ಸಮ್ಮೇಳನ ಏರ್ಪಡಿಸಲಾಗಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಕೆ.ಮೃತ್ಯುಂಜಯ, 'ಇಂಟರ್‌ನ್ಯಾಷನಲ್ ಸೊಸೈಟಿ ಆಫ್ ಎಥ್ನೋಫಾರ್ಮಕಾಲಜಿ' ಅಧೀನದಲ್ಲಿ ಎಸ್‌ಎಫ್‌ಇ ಇಂಡಿಯಾ ಕಾರ್ಯನಿರ್ವಹಿಸುತ್ತಿದೆ. ಇದರ ವಾರ್ಷಿಕ 9ನೇ ಅಂತಾರಾಷ್ಟ್ರೀಯ ಸಮ್ಮೇಳನ ಈ ಬಾರಿ ಮೈಸೂರಿನಲ್ಲಿ ನಡೆಯಲಿದೆ. ಔಷಧ ಸಸ್ಯಗಳ ಮೇಲಿನ ವೈಜ್ಞಾನಿಕ ಅಧ್ಯಯನಕ್ಕೆ 'ಎಥ್ನೋಫಾರ್ಮಕಾಲಜಿ' ಎಂದು ಕರೆಯಲಾಗುತ್ತದೆ ಎಂದು ತಿಳಿಸಿದರು.

ಮೂರು ದಿನಗಳ ಈ ಸಮ್ಮೇಳನದಲ್ಲಿ 15 ದೇಶಗಳ 100 ಮಂದಿ ಶ್ರೇಷ್ಠ ವಿದ್ವಾಂಸರು ಹಾಗೂ ರಾಜ್ಯದ 50 ಮಂದಿ ಸೇರಿದಂತೆ ವಿವಿಧ ರಾಜ್ಯಗಳ 50 ಮಂದಿ ಪಾರಂಪರಿಕ ವೈದ್ಯರು (ನಾಟಿ ಔಷಧ ತಜ್ಞರು) ವಿಚಾರ ಮಂಡನೆ ಮಾಡಲಿದ್ದಾರೆ. ರಾಜ್ಯದಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಮೈಸೂರಿನಲ್ಲಿ ಎಸ್‌ಎಫ್‌ಇ ಇಂಡಿಯಾ ಅಂತಾರಾಷ್ಟ್ರೀಯ ಸಮ್ಮೇಳನ ನಡೆಯುತ್ತಿದೆ ಎಂದರು.

ಗಿಡ ಮೂಲಿಕೆ ಔಷಧ ಉಚಿತ ವಿತರಣೆ: ಸಮ್ಮೇಳನದ ಅಂಗವಾಗಿ 15ಕ್ಕೂ ಹೆಚ್ಚು ಮಳಿಗೆಗಳಲ್ಲಿ ಗಿಡ ಮೂಲಿಕೆ ಮತ್ತು ಆಯುರ್ವೇದ ಔಷಧ ಪ್ರದರ್ಶನ ಇರಲಿದೆ. ಕೆಲ ಅನಾರೋಗ್ಯಕ್ಕೆ ಉಚಿತವಾಗಿ ಗಿಡ ಮೂಲಿಕೆ ಔಷಧಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ನೀಡಲಾಗುವುದು. ನಮ್ಮ ಕಾಲೇಜಿನ ಆಯುರ್ವೇದ ವೈದ್ಯರು ಪರಿಶೀಲಿಸಿ, ಗಿಡ ಮೂಲಿಕೆ ಔಷಧಗಳನ್ನು ನೀಡಲಿದ್ದಾರೆ. ವೈದ್ಯರು, ಫಾರ್ಮಾಸಿಸ್ಟ್‌ಗಳು ಸೇರಿದಂತೆ 1,500ಕ್ಕೂ ಹೆಚ್ಚು ಮಂದಿ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಉದ್ಘಾಟನೆ: ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಏ.22ರಂದು ಬೆಳಗ್ಗೆ 10.30ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನಿಧ್ಯದಲ್ಲಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸಮ್ಮೇಳನ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್‌ಕುಮಾರ್, ಉಪಪ್ರಾಂಶುಪಾಲ ಡಾ. ಜಿ.ವಿ.ಪೂಜಾರ್, ಪ್ರಾಧ್ಯಾಪಕರಾದ ಡಾ.ಎಸ್.ಎನ್.ಮಂಜುಳಾ, ಡಾ.ಕೆ.ಎಲ್.ಕೃಷ್ಣ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪ್ರಸ್ತುತದ ಅನೇಕ ಸಮಸ್ಯೆಗೆ ಸುಭಾಷ್ ಚಂದ್ರ ಬೋಸ್ ಚಿಂತನೆಯಲ್ಲಿದೆ ಪರಿಹಾರ

● ನಿವೃತ್ತ ಅಧಿಕಾರಿ ಮೀನಾ ಮೈಸೂರು ಅಭಿಮತ

● ಎಐಎಂಎಸ್‌ಎಸ್‌ನಿಂದ ಬೋಸರ ಕುರಿತ ಕಿರುಕೃತಿ ಬಿಡುಗಡೆ

ಮೈಸೂರು,ಏ.20(ಪಿಎಂ)–ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಮಹಿಳೆಯರ ಘನತೆಯು ಚಾರಿತ್ರಿಕವಾಗಿ ದಾಖಲಾಗುವಂತೆ ನೇತಾಜಿ ಸುಭಾಷ್ ಚಂದ್ರ ಬೋಸ್ ಮಾಡಿದ್ದು, ಪ್ರಸ್ತುತ ದೇಶ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಅವರ ಚಿಂತನೆಗಳಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂದು ನಿವೃತ್ತ ವಾರ್ತಾಧಿಕಾರಿ ಮೀನಾ ಮೈಸೂರು ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ವತಿಯಿಂದ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 125ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಅವರ ಕೊಡುಗೆಗಳನ್ನು ಮಹಿಳಾ ಮತ್ತು ಯುವ ಸಮುದಾಯಕ್ಕೆ ಪರಿಚಯಿಸುವ ಸಲುವಾಗಿ ಹೊರತಂದಿರುವ 'ನೇತಾಜಿ ಸುಭಾಷ್ ಚಂದ್ರ ಬೋಸ್' ಶೀರ್ಷಿಕೆಯ ಕಿರುಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ನೇತಾಜಿಯವರು ಬ್ರಿಟಿಷರ ವಿರುದ್ಧ ಹೋರಾಡಲು ಇಂಡಿಯನ್ ನ್ಯಾಷನಲ್ ಆರ್ಮಿಯನ್ನು ಸದೃಢಗೊಳಿಸಿದ್ದರು. ಜೊತೆಗೆ ಮಹಿಳೆಯರೂ ಪುರುಷರಿಗೆ ಸರಿಸಮಾನರು ಎಂದು ಸಾಬೀತುಪಡಿಸುವ ದಿಕ್ಕಿನಲ್ಲಿ 'ರಾಣಿ ಝಾನ್ಸಿ ರೆಜಿಮೆಂಟ್' ಹೆಸರಿನಲ್ಲಿ ಮಹಿಳಾ ಯೋಧೆಯರ ಪಡೆಯೊಂದನ್ನೂ ಸ್ಥಾಪಿಸಿದ್ದರು ಎಂದು ಸ್ಮರಿಸಿದರು.

ವಿದೇಶದಲ್ಲಿ ಇದ್ದುಕೊಂಡು ಭಾರತೀಯ ಸೈನ್ಯ ಕಟ್ಟಿದ್ದರು. ಇದು ಸಾಮಾನ್ಯ ಸಂಗತಿಯಲ್ಲ. ಸ್ವಾತಂತ್ರ್ಯ ಗಳಿಸುವುದಷ್ಟೇ ಅಲ್ಲದೆ, ದೇಶದಲ್ಲಿ ಶೋಷಣೆ ರಹಿತ ಸಮಾಜ ಸ್ಥಾಪಿಸಬೇಕೆಂಬ ಕನಸು ಕಂಡಿದ್ದರು ಎಂದು ಹೇಳಿದರು. ಸಂಘಟನೆಯ ರಾಜ್ಯ ಕಾರ್ಯದರ್ಶಿ ಶೋಭಾ, ಜಿಲ್ಲಾ ಕಾರ್ಯದರ್ಶಿ ಜಿ.ಎಸ್.ಸೀಮಾ ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.04.2022 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ಪಂಚಮಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ :** ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 11ಕ್ಕೆ.

■ **ಆಯುಷ್ ಇಲಾಖೆ, ಆಹಾರ ಮತ್ತು ಪೋಷಣ ವಿಭಾಗ, ಮಹಾರಾಜ ಕಾಲೇಜು :** ವಿಶ್ವ ಆರೋಗ್ಯ ದಿನಾಚರಣೆ ಪ್ರಯುಕ್ತ ಸ್ವಾಸ್ಥ್ಯ–2022 ಉದ್ಘಾಟನಾ ಸಮಾರಂಭ, ಉಪಸ್ಥಿತರು : ಶ್ರೀ ಯೋಗಿ ಶ್ರೀನಿವಾಸ ಅರ್ಕ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಅಧ್ಯಕ್ಷತೆ : ಯುವರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಬಿ.ಎನ್. ಯಶೋಧ, ಮುಖ್ಯ ಅತಿಥಿಗಳು : ಆಯುರ್ವೇದ ವೈದ್ಯ ಡಾ.ಎ.ಎಸ್. ಚಂದ್ರಶೇಖರ್, ಸ್ಥಳ: ವಿಜ್ಞಾನ ಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಶ್ರೀಮದ್ಭಾಗವತ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್:** ನಿವೃತ್ತ ಜನರಲ್ ಮ್ಯಾನೇಜರ್ ಹೆಚ್.ಗುರುಪ್ರಸಾದ್‌ರಿಂದ ಕುದುರೆಮುಖ ಲಕ್ಯಾ ಅಣೆಕಟ್ಟಿನಲ್ಲಿ ಬಿಕ್ಕಟ್ಟು ನಿರ್ವಹಣೆ ಕುರಿತು ಉಪನ್ಯಾಸ, ಗೌರವ ಅತಿಥಿಗಳು: ಫೈರ್ ಸೇಫ್ಟಿ ರೀಸರ್ಚ್ ಫೌಂಡೇಷನ್ ನಿರ್ದೇಶಕ ಡಾ.ಎನ್.ಸುರೇಶ್, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ.

ಅಳಗಂಚಿ, ನಂಜನಗೂಡು ತಾಲೂಕು

■ **ಜೆಎಸ್‌ಎಸ್ ಡಿಇಡಿ ಕಾಲೇಜು ಸುತ್ತೂರು:** ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ವಾರ್ಷಿಕ ಶಿಬಿರ ಅಧ್ಯಕ್ಷತೆ: ನಂಜನಗೂಡು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಕೆ.ಜಿ. ಮಹೇಶ್, ಸರಗೂರು ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಮಹಮ್ಮದ್ ಅಂಜುಂ ಪಾಷ ಅವರಿಂದ ವಚನ ಸಾಹಿತ್ಯ ಕುರಿತು ಉಪನ್ಯಾಸ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ ಅಳಗಂಚಿ, ಸಮಯ ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ 'ಒಂದೇ ಕಥೆ' ವಿವಿಧ ಮುಖ–ಬಾನುಲಿ ಸರಣಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಎಸ್.ಸಂಗೀತಾ, ಜಯಂತಿ ವಿ. ಭಟ್, ವ್ಯಾಖ್ಯಾನ– ಡಾಹೆಚ್.ಎನ್.ಮಂಜುರಾಜ್, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಮೈಸೂರು ಎಂ.ನಾಗರಾಜ್–ವಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಡಾ.ಆರ್.ಎನ್.ಶ್ರೀಲತಾ, ಮುದ್ದುಮೋಹನ್, 12.45ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ್ ಮತ್ತು ಕೆ.ಬಿ.ಮೀನಾ, 1.20 ಭಾವಗೀತೆ, 4.00ಹಳ್ಳಿ ಹಾಡು–ಜಯಲಕ್ಷ್ಮಮ್ಮ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ, ಬಹು ಬೆಳೆ ಪದ್ಧತಿ ಹಾಗೂ ಫಲವತ್ತತೆ ಕುರಿತು ಆರ್.ರೋಹಿತ್ ಅವರೊಂದಿಗೆ ಸಂದರ್ಶನ, 9.30 ಯುವವಾಣಿ–ಹಲೋ ಯುವವಾಣಿ 'ಅಮೃತ ಸ್ವಾತಂತ್ರ್ಯ' ಮಾಲಿಕೆಯಲ್ಲಿ ವಿಶೇಷ ರಸಪ್ರಶ್ನೆ ಕಾರ್ಯಕ್ರಮ. ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 10.00 ನಾಟಕ 'ಅಮೃತದ ಅನ್ವೇಷಣೆಯಲ್ಲಿ' ನಥೇನಿಯ ಹಾಥಾರ್ನ್ ಅವರ ಸಣ್ಣಕಥೆ ಆಧಾರಿತ, ರಚನೆ– ಡಾ.ಸಿ.ನಾಗಣ್ಣ, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ

ಕೀಳನಪುರ, ಮೈಸೂರು ತಾಲೂಕು

■ **ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಶ್ರೀಮಹದೇಶ್ವರ ಬೆಟ್ಟ :** ಶ್ರೀ ಬಸವೇಶ್ವರ, ಶ್ರೀ ಕಾಳಮ್ಮ, ಶ್ರೀ ಮಾರಮ್ಮ ಮತ್ತು ಶ್ರೀ ಸಿದ್ದಪ್ಪಾಜಿ ದೇವಾಲಯಗಳ ಜೀರ್ಣೋದ್ಧಾರ, ಉದ್ಘಾಟನೆ, ಕಲಶ ಸ್ಥಾಪನೆ ಹಾಗೂ ಧಾರ್ಮಿಕ ಸಭೆ, ಬೆಳಗ್ಗೆ 8.30ಕ್ಕೆ ಷಟ್‌ಸ್ಥಲ ಧ್ವಜಾ ರೋಹಣ : ಶ್ರೀ ಚಿದಾನಂದ ಸ್ವಾಮಿಗಳು, ಬೆಳಗ್ಗೆ 10ಕ್ಕೆ ಕಲಶಾರೋಹಣ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಸವ ಭವನ ಉದ್ಘಾಟನೆ : ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಬೆಳಗ್ಗೆ 10.30ಕ್ಕೆ ಧಾರ್ಮಿಕ ಸಭೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ : ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷತೆ : ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ.

ವಿವಿಧೆಡೆ ಶ್ರೀ ರಾಮನವಮಿ



■ **ಶ್ರೀ ರಾಮ ಸೇವಾ ಮಂಡಲಿ :** ಶ್ರೀ ರಾಮೋತ್ಸವ ಕಾರ್ಯಕ್ರಮ, ಶ್ರೀ ರಾಮಚಂದ್ರಸ್ವಾಮಿಗೆ ಶಯನೋತ್ಸವದ ಅಲಂಕಾರ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, 4ನೇ ಮೇನ್ 9ನೇ ಕ್ರಾಸ್, ಸಂಜೆ 7ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀರಾಮ ಪಟ್ಟಾಭಿಷೇಕ, ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಸಂಜೆ 6.30 ರಿಂದ.

ದೊಡ್ಡಹುಂಡಿ, ಮೈಸೂರು ತಾಲೂಕು

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಮುದಾಯ ಜೀವನ ಶಿಬಿರ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಮಹಾವಿದ್ಯಾಲಯ ಶೈಕ್ಷಣಿಕ ಸಂಯೋಜಕ ಡಾ. ಎಂ.ಆರ್. ಜಯಪ್ರಕಾಶ್, ಮುಖ್ಯ ಅತಿಥಿಗಳು : ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲ ಜಯಕುಮಾರ್, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ಸ್ಥಳ: ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮಧ್ಯಾಹ್ನ 3ಕ್ಕೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರದಿಂದ ಮಿತಿ ಮೀರಿದ ಭ್ರಷ್ಟಾಚಾರ

- ಮೈಸೂರು ಪ್ರತಿಭಟನಾ ಸಭೆಯಲ್ಲಿ ಸಿದ್ದರಾಮಯ್ಯ ಆರೋಪ
- ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುತ್ತಿರುವ ಪ್ರಧಾನಿ ನರೇಂದ್ರ ಮೋದಿ



ಮೈಸೂರು, ಏ.20(ಎಂಟಿವೈ)– ದೇಶದ ಇತಿಹಾಸದಲ್ಲಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುತ್ತಿರುವ ಏಕೈಕ ಪ್ರಧಾನಿ ಎಂಬ ಬಿರುದಿಗೆ ಮೋದಿ ಪಾತ್ರರಾಗಿದ್ದು, ಇದರಿಂದಲೇ ರಾಜ್ಯದ ಬಿಜೆಪಿ ಸರ್ಕಾರವೂ ಮಿತಿ ಮೀರಿದ ಪ್ರಮಾಣದಲ್ಲಿ ರಾಜಾರೋಷವಾಗಿ ಭ್ರಷ್ಟಾಚಾರ ನಡೆಸುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಹಾಗೂ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ಮೈಸೂರಿನ ಮಹಾತ್ಮ ಗಾಂಧಿ ವೃತ್ತದಲ್ಲಿ ಬುಧವಾರ ಆಯೋಜಿಸಿದ್ದ ಕಾಂಗ್ರೆಸ್ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ 'ನಾನು ತಿನ್ನುವುದಿಲ್ಲ. ತಿನ್ನಲು ಬಿಡುವುದಿಲ್ಲ' ಎಂದಿದ್ದರು. ಅದು ಮಾತಿಗೆ ಮಾತ್ರ ಸೀಮಿತವಾಗಿದೆ. ಬಿಜೆಪಿ ಸರ್ಕಾರವೇ ಭ್ರಷ್ಟಾಚಾರದಲ್ಲಿ ಮುಳುಗಿದೆ. ಸಚಿವರು, ಶಾಸಕರಾದಿಯಾಗಿ ಸುಲಿಗೆಯಲ್ಲಿ ತೊಡಗಿದ್ದಾರೆ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಬಿಜೆಪಿ ಸರ್ಕಾರದ ಸಚಿವರು ಕಾಮಗಾರಿಗೆ ಶೇ.40ರಷ್ಟು ಕಮಿಷನ್ ಕೇಳುತ್ತ ರಕ್ತ ಹೀರುತ್ತಿದ್ದಾರೆ ಎಂದು 8 ತಿಂಗಳ ಹಿಂದೆಯೇ ಆರೋಪಿಸಿದ್ದಾರೆ. ಆದರೆ, ಇದುವರೆಗೂ ಯಾಕೇ ಮೌನವಾಗಿದ್ದಾರೆ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರದ ಅನ್ಯಾಯ, ಅಕ್ರಮಗಳ ವಿರುದ್ಧ ರಾಜ್ಯದ ಜನರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ನಾವು ಐದು ದಿನಗಳ ಕಾಲ ಮೊದಲ ಹಂತವಾಗಿ ಎಲ್ಲ ಜಿಲ್ಲಾ ಕೇಂದ್ರಗಳಿಗೂ ಪ್ರವಾಸ ಮಾಡಿ ಸಭೆ ನಡೆಸುತ್ತಿದ್ದೇವೆ. 2ನೇ ಹಂತದಲ್ಲಿ ಪ್ರತಿ ವಿಧಾನಸಭಾ ಕೇಂದ್ರದಲ್ಲೂ ಜನಜಾಗೃತಿ ಸಭೆ ಏರ್ಪಡಿಸಿ, ಈ ಸರ್ಕಾರದ ಇಂಚಿಂಚೂ ಅಕ್ರಮಗಳನ್ನು ಬಯಲು ಮಾಡುತ್ತೇವೆ. ಸ್ವಾತಂತ್ರ್ಯ ನಂತರದಲ್ಲಿ ಗುತ್ತಿಗೆದಾರರ ಸಂಘದ ಅಧ್ಯಕ್ಷರೊಬ್ಬರು ಪ್ರಧಾನಿಗೆ ಪತ್ರ ಬರೆದು ಶೇ.40 ಪರ್ಸೆಂಟ್ ಕಮಿಷನ್ ಕೇಳುತ್ತಿದ್ದಾರೆ ಎಂದು ಆರೋಪಿಸಿರುವುದು ಇದೇ ಪ್ರಥಮ ಎಂದು ಟೀಕಿಸಿದರು.

ಈಶ್ವರಪ್ಪ ಕೊಲೆಗಡುಕ: ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಈಶ್ವರಪ್ಪ ಅವರನ್ನು ಯಾಕೆ ಬಂಧಿಸಬೇಕೆಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸುತ್ತಾರೆ. ಹಾಗಾದರೆ ಇನ್ಯಾರನ್ನು ಬಂಧಿಸಬೇಕು, ನಿಮ್ಮನ್ನೇ ಬಂಧಿಸಬೇಕೆ? ಎಂದು ಪ್ರಶ್ನಿಸಿದರಲ್ಲದೆ, ಶೇ.40ರಷ್ಟು ಕಮಿಷನ್ ಕೇಳಿ ಗುತ್ತಿಗೆದಾರನ ಸಾವಿಗೆ ಕಾರಣರಾಗಿರುವ ಈಶ್ವರಪ್ಪ ಕೊಲೆಗಡುಕ. ಆತನಿಗೆ ಮಾನ ಮರ್ಯಾದೆ ಇಲ್ಲ. ಓರ್ವನ ಸಾವಿಗೆ ಕಾರಣನಾದ ವ್ಯಕ್ತಿ ಸಾರ್ವಜನಿಕ ಜೀವನದಲ್ಲಿ ಮುಂದುವರೆಯಬೇಕೆ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಬಿಜೆಪಿಯಿಂದ ದೇಶಪ್ರೇಮ ಕಲಿಯಬೇಕಾಗಿಲ್ಲ: ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲ ಧರ್ಮದವರ ಪಾತ್ರ ಇದೆ. ಕೇವಲ ಒಂದು ಧರ್ಮದವರು ಹೋರಾಟ ಮಾಡಲಿಲ್ಲ. ಸಂಘ ಪರಿವಾರದ ಯಾರಾದರೂ ದೇಶಕ್ಕೆ ಪ್ರಾಣತೆತ್ತ ಉದಾಹರಣೆ ಇದೆಯೇ? ದೇಶಭಕ್ತಿಯನ್ನು ಇವರಿಂದ ಕಲಿಯಬೇಕೆ?. ಸ್ವಾತಂತ್ರ್ಯ ಹೋರಾಟಕ್ಕೆ ಆಸ್ತಿ ತ್ಯಾಗ ಬಲಿದಾನ ಕೊಟ್ಟಿದ್ದು ಕಾಂಗ್ರೆಸ್ ಎಂದರು.

13 ಅಥವಾ 14 ಸ್ಥಾನ ಗೆಲ್ಲುವ ಗುರಿ: ಬಿಜೆಪಿ ಸರ್ಕಾರದ ಮಿತಿ ಮೀರಿದ ಭ್ರಷ್ಟಾಚಾರದಿಂದಾಗಿ ರಾಜ್ಯದಲ್ಲಿ ಜನತೆ ತತ್ತರಿಸಿದ್ದಾರೆ. ಅಧಿಕಾರ ದುರ್ಬಳಕೆ ಮಾಡಿಕೊಂಡು ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಇಂತಹ ಭ್ರಷ್ಟ ಸರ್ಕಾರವನ್ನು ತೊಡೆದು ಹಾಕಿ ರಾಜ್ಯವನ್ನು ಉಳಿಸಬೇಕಾಗಿದೆ. ಸಂವಿಧಾನ ಉಳಿಸಬೇಕಾದರೆ ಸಣ್ಣಪುಟ್ಟ ಭಿನ್ನಾಭಿಪ್ರಾಯ ಮರೆತು ಜಾತಿ ನೋಡದೇ ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯುವ ಸಂಕಲ್ಪ ಮಾಡಬೇಕು. ಮೈಸೂರು–ಚಾಮರಾಜನಗರದಲ್ಲಿ 15 ಸ್ಥಾನಗಳಲ್ಲಿ 13ರಿಂದ 14 ಸ್ಥಾನ ಗೆಲ್ಲಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಅಶಾಂತಿ ಮೂಡಿಸುತ್ತಿದೆ: ಶಾಸಕ ತನ್ವೀರ್ ಸೇಠ್ ಮಾತನಾಡಿ, ಬಿಜೆಪಿ ತನ್ನ ಅಂಗ ಸಂಸ್ಥೆಗಳ ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸುತ್ತಿದೆ. ರಾಜ್ಯ ಸರ್ಕಾರ ಶೇ.40 ಕಮಿಷನ್ ಪಡೆಯುತ್ತಿದೆ ಎಂದು ಗುತ್ತಿಗೆದಾರ ಸಂಘ ಅನೇಕ ಬಾರಿ ರಾಜ್ಯಪಾಲರಿಗೆ ಹಾಗೂ ಪ್ರಧಾನಿಗೆ ದೂರು ನೀಡಿದರೂ ಪ್ರಯೋಜನ ಆಗಿಲ್ಲ. ಇದೇ ಕಾರಣಕ್ಕೆ ಕಾಂಗ್ರೆಸ್ ಪಕ್ಷ ಬೆಳಗಾವಿ ಅಧಿವೇಶನದಿಂದ ಬಜೆಟ್ ಅಧಿವೇಶನದವರೆಗೂ ವಿಧಾನಸೌಧದ ಒಳಗೆ ಮತ್ತು ಹೊರಗೆ ಹೋರಾಟ ಮಾಡಿದೆ. ಗುತ್ತಿಗೆದಾರ ಸಂತೋಷ್‌ಗೆ ಕಾರಣರಾದ ಈಶ್ವರಪ್ಪ ಅವರನ್ನು ಬಂಧಿಸಬೇಕು. ಈ ಬಗ್ಗೆ ಸೂಕ್ತ ರೀತಿಯ ತನಿಖೆ ಆಗಬೇಕು ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಈಶ್ವರಪ್ಪರನ್ನು ಬಂಧಿಸಬೇಕು. ಸಂತೋಷ್ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕು. ಅವರ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಪ್ರತಿಭಟನೆ ಮಾಡುತ್ತಿದ್ದೇವೆ ಎಂದರು.

PUBLIC NOTICE

This is to notify to the General Public that my client had entered into a sale agreement dated 18.04.2022 with Smt. Sharthala P Wife of Sri. Lokesha R, Aged about 31 Years, Residing at # 4868, 3rd Cross, K.N.Pura, Mysore, Udayagiri, Mysuru - 570 019, to purchase the schedule property mentioned below. If anyone is having any right, title or interest or charge over the said schedule propery, they may file their written objection before the under signed within 7days failing which our client will proceed further in getting the sale deed executed in respect of the schedule property in their favor.

SCHEDULE

All that piece and parcel of the landed property bearing Sy.No.33/2 measuring 1-24Guntas, situated at Kiralu Village, Varuna Hobli, Mysuru Taluk and bound on:East by :Road and Land belongs to Poornachandra. West by: Land belongs to Shambulingappa. North by : Government Land South by: Land belongs to Madappa S/o.Malamma.

sd/-
Sri. P.K Ponnaiah,
Sri. B.P.Vignesh
Sri. Naveen Ponnaiah
Advocates
No.1662/1A, First floor Radha madhav Conrect ,Narayana Shastry Road,Beside Vathsalya Nursing Home,(Old Seetharanga Hospital) Mysore -4.
Place: Mysore Ph.9448773611
Date: 19.04.2022

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಸಾಮಾಜಿಕ ಅರಣ್ಯ ವಿಭಾಗ, ಮೈಸೂರು
"ಅರಣ್ಯ ಭವನ", ಅಶೋಕಪುರಂ, ಮೈಸೂರು.
ಕಛೇರಿ ಮತ್ತು ಫ್ಯಾಕ್ಸ್ :0821 –2484606
ಇ–ಮೇಲ್ : dcfsfmys@yahoo.com
ಕ್ರಸಂ: ಬಿ1/ಬಿಯುಡಿ/ಅ.ಕಾ.ಟೆಂಡರ್/ಸಿಆರ್./2022–23 ದಿ: 12.4.2022

ಇ–ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೈಸೂರು ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯ ಮೈಸೂರು/ಹುಣಸೂರು/ಟಿ.ನರಸಿಪುರ/ಹೆಚ್.ಡಿ.ಕೋಟೆ/ಪಿರಿಯಾಪಟ್ಟಣ/ಕೆ.ಆರ್.ನಗರ ಮತ್ತು ನಂಜನಗೂಡು ಸಾಮಾಜಿಕ ಅರಣ್ಯ ವಲಯಗಳಲ್ಲಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:ಬಿ1/ಬಿಯುಡಿ/ಸಿಆರ್.11/2020–21 ದಿನಾಂಕ: 25.03.2021 ಮತ್ತು ಮಾನ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವೃತ್ತ, ಮೈಸೂರುರವರ ನಿರ್ದೇಶನದ ಮೇರೆಗೆ 2022–23 ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ನೆಡುತೋಪುಗಳ ವಿವಿಧ ಮಾದರಿಯ ಅರಣ್ಯೀಕರಣ ಕಾಮಗಾರಿಗಳಾದ 2022–23ನೇ ಸಾಲಿನ ಮುಂಗಾರು ನೆಡುತೋಪು, ಮುಂದುವರೆದ ಕಾಮಗಾರಿಗಳಾದ ನೆಡುತೋಪು ನಿರ್ವಹಣೆ ಹಾಗೂ ಪೋಷಣೆ, ಸಸಿಗಳ ಉತ್ಪಾದನೆ ಮತ್ತು ಪೋಷಣೆ ಇತ್ಯಾದಿ ಕಾಮಗಾರಿಗಳು ಹಾಗೂ ಈ ಮೇಲ್ಕಂಡ ಮಾದರಿಯ ಎಲ್ಲಾ ನೆಡುತೋಪುಗಳನ್ನು ಮುಂದಿನ ಐದು ವರ್ಷಗಳವರೆಗೆ ನಿರ್ವಹಣೆ ಮಾಡುವುದು ಸೇರಿದಂತೆ ನೊಂದಾಯಿತ ಗುತ್ತಿಗೆದಾರರಿಂದ ಇ–ಟೆಂಡರನ್ನು ಆಹ್ವಾನಿಸಲಾಗಿದೆ 2022–23 ನೇ ಸಾಲಿನ ಆರ್ಥಿಕ ವರ್ಷದಲ್ಲಿಯೇ ಕಾಮಗಾರಿ ಪೂರ್ಣಗೊಳಿಸಬೇಕಾದ್ದರಿಂದ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಂಬಂಧ ನಿಬಂಧನೆಗಳನ್ನೊಳಗೊಂಡಂತೆ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ಸ್ವೀಕರಿಸಲು ಮೊದಲನೇ ದಿ: 30.4.2022ರ ಸಂಜೆ 4.00 ಘಂಟೆಯವರಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಇ–ಟೆಂಡರನ್ನು ದಿ: 2.5.2022 ರಂದು ಬೆಳಗ್ಗೆ 11.00 ಘಂಟೆಗೆ ತೆರೆಯಲಾಗುವುದು. ಮೇಲ್ಕಂಡ ದಿನದಂದು ಸದರಿ ಇ–ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಮೇಲ್ಕಂಡ ಕಾಮಗಾರಿಗಳಿಗೆ ಎರಡನೇ ಬಾರಿಗೆ ಇ–ಟೆಂಡರ್ ಸ್ವೀಕರಿಸಲು ದಿ: 9.5.2022ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಟೆಂಡರನ್ನು ದಿ: 10.5.2022 ರಂದು ಅಪರಾಹ್ನ 4.15 ಘಂಟೆಗೆ ತೆರೆಯಲಾಗುವುದು. ಮರು ಟೆಂಡರ್ ಸಂಬಂಧ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಇತರೆ ಹೆಚ್ಚಿನ ಮಾಹಿತಿಗಳನ್ನು https://www.eproc.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಸದರಿ ಕಛೇರಿಯಿಂದ ಕರ್ತವ್ಯ ದಿನಗಳಂದು ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಮೈಸೂರು
DIPR/DDMYS/MCA/25/2022-23

ಶ್ರದ್ಧಾಂಜಲಿ



ಇವರು ದಿ.20.04.2022 ರಂದು ದೈವಾಧೀನರಾಗಿದ್ದು ಮೃತರ ಅಂತ್ಯ ಕ್ರಿಯೆಯನ್ನು ದಿ.21.04.2022 ಗುರುವಾರ ಬೆಳಗ್ಗೆ 11.30ಕ್ಕೆ ಕೆ.ಜಿ. ಕೊಪ್ಪಲಿನ (ಕಾವೇರಿ ಶಾಲೆ ಹತ್ತಿರ) ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು: ಬೋಪಣ್ಣ ಮತ್ತು ಕುಟುಂಬವರ್ಗದವರು
ಎಸ್. ಜಯಮ್ಮ
(w/o) ಲೇಟ್ ರಾಮೇಗೌಡ

ಸಿದ್ದರಾಮಯ್ಯರ ನೇತೃತ್ವದಲ್ಲಿ ಭಾರೀ ಪ್ರತಿಭಟನೆ

ಒಂದನೇ ಪುಟದಿಂದ

ಮೆರವಣಿಗೆಯುದ್ದಕ್ಕೂ ಪಕ್ಷದ ಪರವಾಗಿ ಜೈಕಾರ ಮೊಳಗಿತು.

ಕಾಲ್ನಡಿಗೆಯಲ್ಲೇ ಬಂದ ಸಿದ್ದರಾಮಯ್ಯ: ಈ ಹಿಂದೆ ಹಲವಾರು ಪಾದಯಾತ್ರೆಯಲ್ಲಿ ಪಾಲ್ಗೊಂಡು ಗಮನ ಸೆಳೆದಿದ್ದ ಮಾಜಿ ಸಿಎಂ ಸಿದ್ದರಾಮಯ್ಯ ಇಂದು ಮಧ್ಯಾಹ್ನ ಉರಿ ಬಿಸಿಲಿನಲ್ಲೂ ಪಾದಯಾತ್ರೆಯ ಮುಂಚೂಣಿಯಲ್ಲಿ ಹೆಜ್ಜೆ ಹಾಕಿದರು. ಮಹಾತ್ಮ ಗಾಂಧಿ ವೃತ್ತದಿಂದ ಆರಂಭವಾದ ಮೆರವಣಿಗೆಯಲ್ಲಿ ಸಾಗಿದ ಸಿದ್ದರಾಮಯ್ಯ ದಾರಿಯುದ್ದಕ್ಕೂ ಪಕ್ಷದ ಮುಖಂಡರು ಹಾಗೂ ಶಾಸಕರೊಂದಿಗೆ ಮಾತನಾಡುತ್ತಲೇ ಸಾಗಿದರು. ಎಲ್ಲಿಯೂ ಬಸವಳಿದಂತೆ ಕಾಣಲಿಲ್ಲ. ಸಿದ್ದರಾಮಯ್ಯ ಅವರ ಹುಮ್ಮಸ್ಸನ್ನು ಕಂಡ ಕಾರ್ಯಕರ್ತರು ಸಹ ಮೆರವಣಿಗೆ ಪೂರ್ಣಗೊಳ್ಳುವವರೆಗೂ ಪಾಲ್ಗೊಂಡಿದ್ದರು. ಬಳಿಕ ಸಿದ್ದರಾಮಯ್ಯ ನೇತೃತ್ವದಲ್ಲಿ ಜಿಲ್ಲೆಯ ಶಾಸಕರು, ಮಾಜಿ ಶಾಸಕರು ಹಾಗೂ ಮುಂಚೂಣಿ ಮುಖಂಡರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಕಾರ್ಯದರ್ಶಿ ಚಂದ್ರಮೌಳಿ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮಾಜಿ ಶಾಸಕರಾದ ವಾಸು, ಪಿ.ಎಂ.ನರೇಂದ್ರಸ್ವಾಮಿ, ಕೆ.ವೆಂಕಟೇಶ್, ಕಳಲೆ ಕೇಶವಮೂರ್ತಿ, ಎಂ.ಕೆ.ಸೋಮಶೇಖರ್, ಆರ್.ಧರ್ಮಸೇನ, ಮುಖಂಡರಾದ ಎಂ.ಲಕ್ಷ್ಮಣ್, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಮಂಜುಳಾ ಮಾನಸ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಜಿ.ಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಮಾಜಿ ಮೇಯರ್‌ಗಳಾದ ಆರೀಫ್ ಹುಸೇನ್, ಅಯೂಬ್ ಖಾನ್, ಮುಖಂಡರಾದ ಎಂ.ಶಿವಣ್ಣ, ಪ್ರಶಾಂತ್‌ಗೌಡ, ಸುನಿಲ್ ಬೋಸ್, ಪುಷ್ಪಾಲತಾ ಚಿಕ್ಕಣ್ಣ, ಲತಾ ಸಿದ್ದಶೆಟ್ಟಿ, ಕೆಪಿಸಿಸಿ ಲೀಗಲ್ ಸೆಲ್ ಕಾರ್ಯದರ್ಶಿ ಕವಿತಾ ಕಾಳೆ, ವೀಣಾ, ಎಂ.ಎ.ಕಮಲಾ ಅನಂತರಾಮು, ರಘು, ಮಂಜುಳಾ ರಾಜ್, ಮಂಜುಳಾ ಮಂಜುನಾಥ್ ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

ಒಂದನೇ ವರ್ಷದ ಚಿರಸ್ಮರಣೆ



ನಮ್ಮೆಲ್ಲರನ್ನೂ ಪ್ರೀತಿಯಿಂದ ತಿದ್ದಿ, ತೀಡಿ ಬೆಳೆಸಿದ ಅಮ್ಮ ನೀನು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು, ಸದಾಕಾಲ ನಿಮ್ಮ ನೆನಪು ಹಾಗು ಮಾರ್ಗದರ್ಶನದಲ್ಲೇ ಇರುವೆವು
ದುಃಖತಪ್ತರು: ಕುಟುಂಬವರ್ಗದವರು
ದೂರವಾಣಿ: 9535375958
ಎಂ.ಕೆ.ಸರಸ್ವತಿ(ವಾಣಿ)
(ನಿವೃತ್ತ ಉಪನ್ಯಾಸಕಿ)

50 ಕೋಟಿಗಿಂತ ಹೆಚ್ಚಿನ ಮೌಲ್ಯದ ಟೆಂಡರ್ ಪರಿಶೀಲನೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ

ಬೆಂಗಳೂರು,ಏ.20(ಕೆಎಂಶಿ)–50 ಕೋಟಿ ರೂ.ಗಿಂತ ಹೆಚ್ಚಿನ ಮೊತ್ತದ ಟೆಂಡರ್‌ಗಳ ಪರಿಶೀಲನೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳು, ಆರ್ಥಿಕ ತಜ್ಞರು ಮತ್ತು ಸಂಬಂಧಪಟ್ಟ ಇಲಾಖೆ ತಾಂತ್ರಿಕ ತಜ್ಞರನ್ನು ಒಳಗೊಂಡಿರುವ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಪ್ರಕಟಿಸಿದ್ದಾರೆ.

ಶೇ.40ರಷ್ಟು ಕಮಿಷನ್ ವಿಚಾರ ಇಡೀ ರಾಜ್ಯದಲ್ಲಿ ಚರ್ಚೆಗೆ ಗ್ರಾಸವಾಗಿ ಇದೇ ಆರೋಪದ ಮೇಲೆ ಸಚಿವ ಸ್ಥಾನವನ್ನು ಕಳೆದುಕೊಂಡರು. ಸರ್ಕಾರದ ಮೇಲೆ ಬರುತ್ತಿರುವ ಆರೋಪವನ್ನು ಹೋಗಲಾಡಿಸಲು ಮುಖ್ಯಮಂತ್ರಿಯವರು ಈ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ. ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಬೊಮ್ಮಾಯಿ, ಉನ್ನತ ಮಟ್ಟದ ಸಮಿತಿಯನ್ನು ಕೆಟಿಟಿಪಿ ಕಾಯ್ದೆಯನ್ವಯ ರಚಿಸಲಾಗಿದೆ. ಸಮಿತಿಯು ಕಾಮಗಾರಿಯ ಅಂದಾಜು ಮೊತ್ತ, ಕೆಟಿಟಿಪಿ ಕಾಯ್ದೆಯನ್ವಯ ಟೆಂಡರ್ ನಿಯಮಗಳು ಇವುಗಳನ್ನು ಪರಿಶೀಲಿಸಿದ ನಂತರವೇ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಬೇಕು. ಈ ಸಮಿತಿಯು ಕೆಲವೇ ದಿನಗಳಲ್ಲಿ ಕಾರ್ಯಾರಂಭ ಮಾಡಲಿದೆ. ಸರ್ಕಾರದ ಎಲ್ಲಾ ಇಲಾಖೆಗಳ 50 ಕೋಟಿ ರೂ. ಮೀರಿದ ಟೆಂಡರ್‌ಗಳಿಗೂ ಈ ನಿಯಮ ಜಾರಿಯಾಗುತ್ತದೆ. ಟೆಂಡರ್‌ಗಳು ಹೆಚ್ಚಾದ ಸಂದರ್ಭದಲ್ಲಿ ಶೀಘ್ರ ಟೆಂಡರ್ ಪರಿಶೀಲನೆಗೆ ಅನುಕೂಲವಾಗುವಂತೆ ಪರ್ಯಾಯ ಸಮಿತಿಯೊಂದನ್ನೂ ರಚಿಸಲಾಗುವುದು ಎಂದರು. ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳ ಕಾಮಗಾರಿಗಳು ಮೌಖಿಕ ಆದೇಶಗಳ ಮೇಲೆ ಮಾಡಬಾರದು ಎಂದು ಸೂಚನೆ ನೀಡಲಾಗಿದೆ. ಆದರೂ ಈ ರೀತಿ ನಡೆದರೆ ಸಂಬಂಧಪಟ್ಟ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್, ಎಇಇ, ಶಾಖಾಧಿಕಾರಿಗಳು ಜವಾಬ್ದಾರರಾಗುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಪಿಡಿಓ ಮತ್ತು ಇಓಗಳು ಜವಾಬ್ದಾರರಾಗುತ್ತಾರೆ ಎಂದು ಸ್ಪಷ್ಟವಾದ ಲಿಖಿತ ಸೂಚನೆ ನೀಡಲಾಗುವುದು ಎಂದರು. ಟೆಂಡರ್ ಪ್ರಕ್ರಿಯೆ ಹಾಗೂ ಪರ್ಸಂಟೇಜ್ ರಹಿತ ವ್ಯವಸ್ಥೆಗೆ ಸರ್ಕಾರ ಕ್ರಮ ಕೈಗೊಂಡಿದೆಯೇ, ಸಂತೋಷ್ ಪಾಟೀಲ್ ಆತ್ಮಹತ್ಯೆ ಒಂದು ಪಾಠವಾಗಿ ಇವೆಲ್ಲಕ್ಕೆ ಒಂದು ತಾತ್ವಿಕ ಅಂತ್ಯ ಕಾಣಬೇಕು ಎಂಬುದಕ್ಕೆ ಪ್ರತಿಕ್ರಿಯಿಸಿ ಪರ್ಸಂಟೇಜ್ ಅನ್ನುವಂಥದ್ದು ವ್ಯಾಪಕವಾಗಿ ಮಾತನಾಡುವಂತಹ ವಿಚಾರ. ಇದನ್ನು ನಿಯಂತ್ರಿಸುವುದು ಬಹಳ ಮುಖ್ಯ. ಸಂತೋಷ್ ಪಾಟೀಲ್ ಪ್ರಕರಣ ಪ್ರತ್ಯೇಕವಾದುದು. ಇದರಲ್ಲಿ ಕಾರ್ಯಾದೇಶವಿಲ್ಲದೇ ಕೆಲಸ ಮಾಡಿ ಬಿಲ್ ಕ್ಲೇಮು ಮಾಡಿರುವುದು ಆದ್ದರಿಂದ ಈ ಬಗ್ಗೆ ಆರ್‌ಡಿಪಿಆರ್ ನಿಂದ ಹಿಡಿದು ಪೊಲೀಸ್ ಇಲಾಖೆವರೆಗೆ ತನಿಖೆ ನಡೆಯುತ್ತಿದೆ.

ಶ್ರದ್ಧಾಂಜಲಿ



ಇವರು ದಿನಾಂಕ 19.04.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ, ಇವರ ಆತ್ಮಕ್ಕೆ ಶಾಂತಿ ಕೋರುವವರು
KPCL Employees Welfare Association Mysore
ಸಿ.ಎನ್.ರಂಗನಾಥ್
ಎಇಇ ಕೆಪಿಸಿಎಲ್

ಬ್ಯಾಂಕ್‌ನಲ್ಲಿ ಕೆಲಸ ಕೊಡಿಸುವುದಾಗಿ 6.5 ಲಕ್ಷ ವಂಚನೆ: ಒಬ್ಬನ ಬಂಧನ

ಮೈಸೂರು, ಏ.20(ಜಿಎ)– ಬ್ಯಾಂಕ್‌ನಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ 6.5 ಲಕ್ಷ ರೂ. ವಂಚಿಸಿದ್ದ ಆರೋಪಿಯನ್ನು ಜಿಲ್ಲಾ ಸೆನ್ ಕ್ರೈಂ ಪೊಲೀಸ್ ಠಾಣೆ ಸಿಬ್ಬಂದಿ ಬಂಧಿಸಿದ್ದಾರೆ. ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದ ನಗರದ ಚೇತನ್‌ಕುಮಾರ್ ಎಂಬುವರಿಗೆ ಆರೋಪಿಯು ಬ್ಯಾಂಕ್‌ನಲ್ಲಿ ಅಕೌಂಟೆಂಟ್ ಕೆಲಸ ಕೊಡಿಸುತ್ತೇನೆ ಎಂದು ನಂಬಿಸಿ ವಿವಿಧ ನಾಲ್ಕು ಬ್ಯಾಂಕ್ ಖಾತೆಗಳಿಗೆ ಒಟ್ಟು 6.50 ಲಕ್ಷ ರೂ. ಹಣವನ್ನು ಹಾಕಿಸಿಕೊಂಡು ಮೋಸ ಮಾಡಿದ್ದ. ಈ ಕುರಿತು 2021ರ ಅ.6ರಂದು ಚೇತನ್ ಸೆನ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಸೆನ್ ಕ್ರೈಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಿಬ್ಬಂದಿ ಎಸ್.ಮಂಜುನಾಥ್, ಬಿ.ವಿ.ಮಂಜುನಾಥ್, ಹೆಚ್.ವಿ.ರಂಗಸ್ವಾಮಿ ನೇತೃತ್ವದ ತಂಡ ಆರೋಪಿ ಉಪಯೋಗಿಸುತ್ತಿದ್ದ ಸಿಮ್ ಹಾಗೂ ಮೊಬೈಲ್‌ಗಳ ಟ್ರ್ಯಾಕ್ ಮಾಡಿ ಆರೋಪಿಯನ್ನು ಏ.15ರಂದು ಶಿವಮೊಗ್ಗದಲ್ಲಿ ಬಂಧಿಸಿದ್ದಾರೆ. ಆರೋಪಿಯು ಈ ಹಿಂದೆ ಹಾವೇರಿಯ ಸೆನ್ ಕ್ರೈಂ ಪೊಲೀಸ್ ಠಾಣೆಯ ಸೈಬರ್ ಅಪರಾಧ ಪ್ರಕರಣದಲ್ಲಿ ಬಂಧಿತನಾಗಿ ಜಾಮೀನು ಮೇಲೆ ಬಿಡುಗಡೆಯಾಗಿದ್ದ ಎಂಬುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ. ಆರೋಪಿಯಿಂದ 1.40 ಲಕ್ಷ ರೂ. ನಗದು, ಮೊಬೈಲ್, 13.15 ಗ್ರಾಂ ತೂಕದ ಚಿನ್ನದ ಓಲೆ, 13.40 ಗ್ರಾಂ ಚಿನ್ನದ ಸರ ಹಾಗೂ ವಿವಿಧ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಶ್ರೀಮತಿ ಮಂಚಮ್ಮ ಕೋಂ ಲೇಟ್ ಚಿಕ್ಕ ರಂಗಯ್ಯ ಮತ್ತು ಶ್ರೀಮತಿ ವಿಜಯ ಕೋಂ ಲೇಟ್ ಪಾಪಯ್ಯ ಮತ್ತು ಇತರರು, ಕ್ರಮವಾಗಿ ಈ ಕೆಳಗೆ ನಮೂದಿಸಿರುವ ಸ್ವತ್ತಿನ ಮಾಲೀಕರಾಗಿದ್ದು, ಉಭಯತ್ರರರು ಸದರಿ ಸ್ವತ್ತುಗಳನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿಯ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಚಟ್ನಹಳ್ಳಿ ಗ್ರಾಮದಲ್ಲಿರುವ ಖುಷ್ಕಿ ಜಮೀನಿನ ಒಟ್ಟು ವಿಸ್ತೀರ್ಣ 03 ಎಕರೆ 9. 12 ಗುಂಟೆ ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿಯ ವಿವರ ಈ ಕೆಳಕಂಡಂತಿದೆ:

ಸರ್ವೇ ನಂ.	ವಿಸ್ತೀರ್ಣ ಎ	ವಿಸ್ತೀರ್ಣ ಗು	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
151/2	01	20	ಸರ್ವೆ ನಂ. 150	ಸರ್ವೆ ನಂ. 152	ಸರ್ವೆ ನಂ. 211 & ರಸ್ತೆ	ಸರ್ವೆ ನಂ. 151/1
151/3	00	22.8	ಸರ್ವೆ ನಂ. 150	ಸರ್ವೆ ನಂ. 152	ಸರ್ವೆ ನಂ. 151/1	ಸರ್ವೆ ನಂ. 151/4
ಮಾಲೀಕರು: ಮಂಚಮ್ಮ						
151/4	01	7.4	ಸರ್ವೆ ನಂ. 150	ಸರ್ವೆ ನಂ. 152	ಸರ್ವೆ ನಂ. 151/3	ಸರ್ವೆ ನಂ. 151/5
ಮಾಲೀಕರು: ವಿಜಯ ಮತ್ತು ಇತರರು						
ಒಟ್ಟು – 3 ಎ 9.12 ಗು						

ಸಹಿ/– **ಶ್ರೀಲತಾ ದೀಕ್ಷಿತ್**, ವಕೀಲರು, ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಸಮೀಪ, ಮೈಸೂರು., ಮೊ:9844640641, Email: sldlawfirm2021@gmail.com

ಕರ್ನಾಟಕ ಗೃಹ ಮಂಡಳಿ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–10/2022–23 ದಿನಾಂಕ: 20–04–2022

ಮೈಸೂರು ಜಿಲ್ಲೆ, ದೊಡ್ಡ ಹುಣಸೂರು 2ನೇ ಹಂತ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳ ಹಂಚಿಕೆಗೆ ಇ–ಲಾಟರಿ ವೇಳಾಪಟ್ಟಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಮೆ॥ ಉಪಕಾರ್ ಡೆವಲಪರ್ಸ್, ಬೆಂಗಳೂರು ಇವರ ಜಂಟಿ ಸಹಭಾಗಿತ್ವ ಯೋಜನೆಯಡಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು , ಕಸಬಾ ಹೋಬಳಿ, ದೊಡ್ಡ ಹುಣಸೂರು 2ನೇ ಹಂತ ಬಡಾವಣೆಯಲ್ಲಿ ಸಾರ್ವಜನಿಕ ಸೌಲಭ್ಯಗಳೊಂದಿಗೆ ನಿವೇಶನಗಳನ್ನು ಅಭಿವೃದ್ಧಿಪಡಿಸಿದ್ದು, ಸದರಿ ನಿವೇಶನಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ ದಿನಾಂಕ: 21–03–2022 ರಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು. ಸದರಿ ಪ್ರಕಟಣೆಗೆ ಅನುಗುಣವಾಗಿ ಆರಂಭಿಕ ಠೇವಣಿಯೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ರೆಗ್ಯುಲೇಶನ್ಸ್–1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಇ–ಲಾಟರಿ ಮುಖಾಂತರ ಹಂಚಿಕೆ ಮಾಡಲು ಈ ಕೆಳಕಂಡ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ	ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಇ–ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ ಹಾಗೂ ಸಮಯ
ಮೈಸೂರು ಜಿಲ್ಲೆ ದೊಡ್ಡ ಹುಣಸೂರು 2ನೇ ಹಂತ	21–04–2022	25–04–2022	26–04–2022	ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಬೆಂಗಳೂರು. ದಿನಾಂಕ: 28–04–2022. ಸಮಯ:– ಬೆಳಗ್ಗೆ– 11.00 ಗಂಟೆಗೆ
	ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಮೈಸೂರು ಮತ್ತು ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಕಾವೇರಿ ಭವನ, ಬೆಂಗಳೂರು			

ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಮೈಸೂರು ಜಿಲ್ಲಾ ಯೋಜನಾ ಕಛೇರಿ ಇವರನ್ನು ಮೊಬೈಲ್ ನಂ.8310045887 ಅಥವಾ ಉಪ ಪ್ರಧಾನ ವ್ಯವಸ್ಥಾಪಕರು (ಗ್ರಾ.ಸೇ)/ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ, ಕಛೇರಿ ದೂರವಾಣಿ ಸಂಖ್ಯೆ: 080–22273511 ext. 335/307 ಗೆ ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/226/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಕ್ಕರೆ ಅದೇ ಸ್ವರ್ಗ

ಆತ : "ಏನಯ್ಯ, ನೀನೆ ಅದೃಷ್ಟವಂತ ಕಣಯ್ಯ! ನಿನ್ನ ಹೆಂಡ್ತಿ ನೀನೇನು ಮಾಡಿದರೂ ಬೇಡ ಅನ್ನಲ್ಲ"

ಈತ : "ಹೌದು ಕಣಯ್ಯ, ಅಡುಗೆ ಮಾಡ್ತೀನಿ ಬೇಡ ಅನ್ನಲ್ಲ.. ಬಟ್ಟೆ ಬರೆ ಒಗೀತೀನಿ ಬೇಡ ಅನ್ನಲ್ಲ, ಮುಸುರೆನಲ್ಲಾ ನಾನೇ ತೊಳೀತೀನಿ ಬೇಡ ಅನ್ನಲ್ಲ!"

ಮೈಸೂರು ಮಿತ್ರ

ಗುರುವಾರ, 21 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿ:!! ನಹಿ ಸತ್ಯಾತ್ಪರೋ ಧರ್ಮ:!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಯಾವನೊಬ್ಬನನ್ನಾಗಲೀ ಯಶದ ಹಾದಿಗೆ ಒಯ್ಯುವ ಮೂರು ಮುಖ್ಯ ಅಂಶಗಳೆಂದರೆ ಆತ್ಮವಿಶ್ವಾಸ, ನಿಶ್ಚಿತಗುರಿ ಮತ್ತು ಸಂಯಮ –ಟೆನಿಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಂಡರೆ ಸೇರದವನಿಗೆ ಉಂಡರೆ ಸೇರೀತೆ?

ನಿಮ್ಮ ಪತ್ರಗಳು

ನಗರ ಪಾಲಿಕೆ, ಮುಡಾ ಆಯ್ತು ಈಗ ಮೈಸೂರು ವಿವಿ ಜಾಗದಲ್ಲೂ ದಂಧೆ

ಮಾನ್ಯರೆ,



ಮೈಸೂರು ನಗರದಾದ್ಯಂತ ಕಾರ್ಪೋರೇಟರ್‌ಗಳು, ಶಾಸಕರು, ಸಚಿವರು, ಆಡಳಿತಾರೂಢ ಪಕ್ಷದ ಮುಖಂಡರು ತಮ್ಮ ತಮ್ಮ ಕಡೆಯವರಿಗೆ ಅವರವರ ವ್ಯಾಪ್ತಿಯಲ್ಲಿ ಖಾಲಿ ಇರುವ ನಗರ ಪಾಲಿಕೆ, ಮುಡಾಗೆ ಸೇರಿದ ಜಾಗಗಳನ್ನು ಅಧಿಕಾರಿಗಳಿಗೆ ಪ್ರಭಾವ ಬೀರಿ ಇಲ್ಲವೇ ಧಮ್ಕಿ ಹಾಕಿ ಕಬಳಿಸಿ, ಅಲ್ಲಿ ತಮ್ಮ ಬಂಧು–ಬಾಂಧವರು, ಬೆಂಬಲಿಗರಿಗೆ ಯಾವುದಾದರೂ ವಾಣಿಜ್ಯ ಚಟುವಟಿಕೆಗೆ ಮಳಿಗೆ ನಿರ್ಮಾಣ ಮಾಡಿ ಒಂದು ರೀತಿ ದಂಧೆ ನಡೆಸುತ್ತಿದ್ದಾರೆ. ಮೈಸೂರು ನಗರವನ್ನು ಒಂದು ಸುತ್ತು ಹಾಕಿದರೆ ನೂರಾರು ಇಂತಹ ಮಳಿಗೆಗಳು ಕಂಡು ಬರುತ್ತವೆ. ಅಧಿಕಾರಿಗಳು ನಿಸ್ಸಹಾಯಕರಾಗಿದ್ದಾರೆ. ಅವರಿಗೆ ಧಮ್ಕಿ ಹಾಕಿ ಇಲ್ಲವೆ ಬ್ಲಾಕ್‌ಮೇಲ್ ಮಾಡಿ ತಮ್ಮ ಕಾರ್ಯಸಾಧಿಸಿಕೊಂಡಿದ್ದಾರೆ. ಈಗ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಜಾಗದಲ್ಲೂ ಮಳಿಗೆಗಳು ತಲೆಯೆತ್ತುತ್ತಿವೆ. ಕುಕ್ಕರಹಳ್ಳಿ ಕೆರೆಯನ್ನು ಸ್ವಚ್ಛಂದವಾಗಿಡಬೇಕು ಎಂಬುದು ಪ್ರತಿ ಮೈಸೂರಿಗನ ಬಯಕೆ. ಆದರೆ ಅದರ ಸುತ್ತಮುತ್ತಲು ಈಗ ಹಾಲು, ಮೀನು, ಬೀಡಿ–ಸಿಗರೇಟು, ಇನ್ನಿತರೆ ಮಳಿಗೆ, ಗೂಡಂಗಡಿಗಳು ತಲೆಯೆತ್ತಿವೆ. ಅಚ್ಚರಿ ಸಂಗತಿಯೆಂದರೆ ಮೈಸೂರು ವಿವಿ ಕುಲಸಚಿವರ ಮೇಲೆ 'ಪ್ರಭಾವ' ಬೀರಿ ಕುಕ್ಕರಹಳ್ಳಿ ಕೆರೆ ಪ್ರವೇಶ ದ್ವಾರದಲ್ಲಿ ಮಳಿಗೆ ನಿರ್ಮಿಸಲಾಗಿದೆ. ಮೈಸೂರಿನ ಬಗ್ಗೆ ಕಳಕಳಿಯುಳ್ಳ ನಾಗರಿಕರು ಎಚ್ಚರಗೊಳ್ಳದಿದ್ದರೆ ಮೈಸೂರು ಕೊಂಪೆ ಆಗುವುದರಲ್ಲಿ ಅಚ್ಚರಿ ಇಲ್ಲ.

–ರಾಮಚಂದ್ರ, ಸರಸ್ವತಿಪುರಂ, ಮೈಸೂರು.

ಕನ್ನಡ ಚಿತ್ರರಂಗದ ದಿಕ್ಕು ಬದಲಿಸಿದ ಕೆಜಿಎಫ್

ಮಾನ್ಯರೆ,

ಕನ್ನಡ ಚಿತ್ರರಂಗ ಭಾರತದ ಚಲನಚಿತ್ರ ರಂಗ ತನ್ನದೇ ಆದ ಇತಿಹಾಸವನ್ನು ಹೊಂದಿದೆ. 1934ರಲ್ಲಿ ತೆರೆಕಂಡ 'ಸತಿ ಸುಲೋಚನ' ಕನ್ನಡದ ಮೊಟ್ಟ ಮೊದಲ ವಾಕ್ಚಿತ್ರವಾಗಿದೆ. ನಂತರ ಡಾ.ರಾಜ್‌ಕುಮಾರ್ ಕನ್ನಡ ಚಲನಚಿತ್ರರಂಗಕ್ಕೆ ಹೊಸ ರೂಪಕೊಟ್ಟರು.

1954ರಲ್ಲಿ ತೆರೆಕಂಡ ಬೇಡರ ಕಣ್ಣಪ್ಪ ಚಿತ್ರದಿಂದ ಕನ್ನಡ ಚಿತ್ರಗಳು ದೇಶದಲ್ಲಿ ಜನಪ್ರಿಯವಾಗತೊಡಗಿತು. ದಶಾವತಾರ, ಮೇಯರ್ ಮುತ್ತಣ್ಣ, ನಾ ನಿನ್ನ ಮರೆಯಲಾರೆ, ಬಡವರ ಬಂಧು, ಬಂಗಾರದ ಮನುಷ್ಯ, ಗಂಧದಗುಡಿ ಹೀಗೆ ಡಾ.ರಾಜ್‌ಕುಮಾರ್ ಚಿತ್ರಗಳು ಕನ್ನಡ ಚಿತ್ರಗಳ ಮಾರುಕಟ್ಟೆಯನ್ನು ವಿಸ್ತರಿಸಿದವು.

ನಂತರ ದಿನಗಳಲ್ಲಿ ಡಾ.ವಿಷ್ಣುವರ್ಧನರ ನಾಗರಹಾವು, ಸಾಹಸಸಿಂಹ, ಮುತ್ತಿನಹಾರ ಇನ್ನೂ ಹಲವು ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸು ಗಳಿಸಿದವು. ಸಮಯದ ಬದಲಾವಣೆಯಾದಂತೆ ರೆಬಲ್ ಸ್ಟಾರ್ ಅಂಬರೀಶ್, ಟೈಗರ ಪ್ರಭಾಕರ್, ಉದಯ ಕುಮಾರ್, ಕಲ್ಯಾಣ ಕುಮಾರ್, ಶಂಕರ್‌ನಾಗ್, ಅನಂತ್‌ನಾಗ್, ನಂತರದ ಯುವ ನಟರಾಗಿ ಕ್ರೇಜಿಸ್ಟಾರ್ ರವಿಚಂದ್ರನ್, ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಕನ್ನಡ ಚಿತ್ರಗಳ ಮಾರುಕಟ್ಟೆಯನ್ನು ವಿಸ್ತರಿಸಿದರು. ಪ್ರಸ್ತುತ ಇಂದಿನ ದಿನಗಳಲ್ಲಿ ಸುದೀಪ್, ದರ್ಶನ್, ಪುನೀತ್ ರಾಜ್‌ಕುಮಾರ್ ಕನ್ನಡ ಚಿತ್ರಗಳ ಕಂಪನ್ನು ಹೊರ ರಾಜ್ಯಗಳಿಗೆ ಪಸರಿಸಿದರು. ಆದರೆ ಯಶ್ ಅಭಿನಯದ "ಕೆಜಿಎಫ್ ಚಾಪ್ಟರ್–1" ಮತ್ತು "ಕೆಜಿಎಫ್ ಚಾಪ್ಟರ್–2" ಕನ್ನಡ ಚಲನ ಚಿತ್ರರಂಗವನ್ನು ವಿಶ್ವ ಮಟ್ಟದಲ್ಲಿ ಗುರುತಿಸುವಂತೆ ಮಾಡಿದೆ ಎಂದರೆ ತಪ್ಪಾಗಲಾರದು.

ಕೆಜಿಎಫ್ ಚಾಪ್ಟರ್–2 ಬಿಡುಗಡೆಯಾದ ನಾಲ್ಕು ದಿನಗಳಲ್ಲಿ ಪ್ರಪಂಚದಾದ್ಯಂತ 550 ಕೋಟಿ ಗಳಿಸಿ 1000 ಕೋಟಿ ಕ್ಲಬ್ ಸೇರಲು ಮುನ್ನುಗ್ಗುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಒಂದು ದಶಕದ ಹಿಂದೆ ಕರ್ನಾಟಕ ಬಿಟ್ಟು ಕನ್ನಡ ಚಿತ್ರಗಳು ಹೊರರಾಜ್ಯಗಳಲ್ಲಿ ಯಶಸ್ಸು ಗಳಿಸಿದ್ದು ಕಡಿಮೆ.

ಪ್ರಸ್ತುತ ಕೆಜಿಎಫ್ ಚಿತ್ರದಿಂದ ದೇಶ ವಿದೇಶಗಳಲ್ಲಿನ ಪ್ರೇಕ್ಷಕರು ಕನ್ನಡ ಚಿತ್ರವನ್ನು ನೋಡುವಂತಾಗಿದೆ. ನಮ್ಮ ಕನ್ನಡ ಚಲನಚಿತ್ರ ರಂಗದ ಹಿರಿಯರು ಕಂಡ ಕನಸನ್ನು ಕೆಜಿಎಫ್ ಚಿತ್ರ ತಂಡ ಪೂರ್ಣಗೊಳಿಸಿದೆಯೆಂದರೆ ಉತ್ಪ್ರೇಕ್ಷೆಯಾಗಲಾರದು. ಕೆಜಿಎಫ್ ಚಿತ್ರ ವಿಶ್ವದಲ್ಲಿ ಕನ್ನಡ ಚಿತ್ರಗಳಿಗೆ ಮಾರುಕಟ್ಟೆ ಕಲ್ಪಿಸಿಕೊಟ್ಟಿದ್ದು ಅದನ್ನು ಉಳಿಸಿಕೊಂಡು ಹೋಗುವುದು ಮುಂದಿನ ತಲೆಮಾರಿನ ನಟರುಗಳ ಜವಾಬ್ದಾರಿಯಾಗಿದೆ. ರಾಕಿಂಗ್ ಸ್ಟಾರ್ ಯಶ್ ಬಾಲಿವುಡ್‌ನ ಸ್ಟಾರ್‌ಗಳಿಗೆ ಸರಿಸಮನಾಗಿ ಬೆಳೆದಿರುವುದು ಕನ್ನಡಿಗರಾದ ನಮಗೆಲ್ಲಾ ಹೆಮ್ಮೆ."

–ರಾ.ಸುಮಾಭಟ್, ಚಿಕ್ಕಮಗಳೂರು.

ಸಂಗೀತ ಕಾರಂಜಿ, ಜಲಪಾತವನ್ನು ಮತ್ತೆ ಪ್ರಾರಂಭಿಸಿ



ಮಾನ್ಯರೆ,

ಮೈಸೂರಿನ ಮೊದಲ ರೇಡಿಯೋ ಪಾರ್ಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ವಿದ್ಯಾರಣ್ಯಪುರಂ ನಾಲ್ಕನೇ ಮುಖ್ಯ ರಸ್ತೆ, ಮೂರು ಮತ್ತು ನಾಲ್ಕನೇ ಕ್ರಾಸ್ ಮಧ್ಯದಲ್ಲಿರುವ ಸ್ನೇಕ್ ಪಾರ್ಕ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣಕ್ಕಾಗಿ ವಾರದ ಕೊನೆಯ ರಜಾ ದಿನಗಳ ಸಂಜೆಯ ವೇಳೆಯಲ್ಲಿ ಮನರಂಜಿಸುವ ಆಕರ್ಷಣೆಯ ಸಂಗೀತ ಕಾರಂಜಿ, ಶಿವನ ಮೂರ್ತಿಯಿಂದ ಸುರಿಯುವ ನೀರಿನ ಜಲಪಾತವನ್ನು ಸ್ಥಗಿತಗೊಳಿಸಲಾಗಿದೆ. ಈ ವೈವಿಧ್ಯಮಯ ಬಣ್ಣಗಳ ಸಂಗೀತ ಕಾರಂಜಿಯು ಸುತ್ತಮುತ್ತಲಿನ ನಿವಾಸಿಗಳ ಮಕ್ಕಳು ಮತ್ತು ಎಲ್ಲಾ ವಯೋಮಾನದ ಜನರನ್ನು ತನ್ನತ್ತ ಆಕರ್ಷಿಸಿ ಮನಸ್ಸಿಗೆ ಮುದ ನೀಡಿ, ಆಯಾಸವನ್ನು ನಿವಾರಿಸಿ ಕಣ್ಮನ ಸೆಳೆಯುತ್ತಿತ್ತು ಮಕ್ಕಳ ಹರ್ಷಕ್ಕೆ ಪಾರವೇ ಇರಲಿಲ್ಲ. ಕೋವಿಡ್ ಸಾಂಕ್ರಾಮಿಕ ರೋಗ ಕಡಿಮೆಯಾಗಿರುವುದರಿಂದ ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ಸಂಗೀತ ಕಾರಂಜಿ ಮತ್ತು ಜಲಪಾತವನ್ನು ಮತ್ತೆ ಪ್ರಾರಂಭಿಸಬೇಕೆಂಬುದು ಸಾರ್ವಜನಿಕರ ಮಹದಾಸೆಯಾಗಿರುತ್ತದೆ. ಸುತ್ತಮುತ್ತಲಿನ ನಿವಾಸಿಗಳ ಮಕ್ಕಳಿಗೆ ಬೇಸಿಗೆ ರಜೆ ಇರುವುದರಿಂದ ಈ ದಿನಗಳಲ್ಲಿ ಪೋಷಕರೊಟ್ಟಿಗೆ ಪುಟಾಣಿಗಳು ಆಗಮಿಸಿ ಈ ಸೌಂದರ್ಯವನ್ನು ಅನುಭವಿಸಿ ಸಂಭ್ರಮ –ಸಡಗರ ಸಂತೋಷದಿಂದ ಕುಣಿದು ನಲಿಯಲು ಅವಕಾಶ ಮಾಡಿಕೊಡಬೇಕೆಂದು ಸಂಬಂಧಪಟ್ಟವರಲ್ಲಿ ಕಳಕಳಿಯ ಮನವಿ.

–ಪುರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಹವಾಮಾನ ಬದಲಾವಣೆ: ಪ್ರಾಕೃತಿಕ, ಸಾಮಾಜಿಕ ವಿಪತ್ತುಗಳತ್ತ ಸಾಗುತ್ತಿದೆ ನಮ್ಮ ಬದುಕು



ನಮ್ಮ ಕಾಲಘಟ್ಟದ ಅತ್ಯಂತ ಅಪಾಯಕಾರಿ ಸವಾಲುಗಳಲ್ಲಿ ಒಂದು ಜಾಗತಿಕ ತಾಪಮಾನದಲ್ಲಿ ಸಂಭವಿಸುತ್ತಿರುವ ಏರುಪೇರುಗಳು. ಹವಾಮಾನ ಬದಲಾಗುವುದು ಪ್ರಕೃತಿಯಲ್ಲಿ ಕಂಡು ಬರುವ ಒಂದು ಸಹಜ ಪ್ರಕ್ರಿಯೆ, ಅದನ್ನು ಅತಿಯಾಗಿ ವೈಭವೀಕರಿಸುವುದು ಅನಗತ್ಯ, ಅಷ್ಟಕ್ಕೂ ನೇರವಾಗಿ ಅದು ನಮ್ಮನ್ನು ತಟ್ಟುತ್ತಿಲ್ಲವಾದ್ದರಿಂದ ಹವಾಮಾನ ಬದಲಾವಣೆಯನ್ನು ನಿಯಂತ್ರಿಸುವಲ್ಲಿ ನಮ್ಮ ಪಾತ್ರ ತಾನೇ ಏನಿದೆ ಎಂದು ವಾದ ಮಾಡುವವರೂ, ಪ್ರಕೃತಿಯಲ್ಲಿ ಸಂಭವಿಸುತ್ತಿರುವ ಬದಲಾವಣೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ತಾಳಿರುವವರೂ ನಮ್ಮಲ್ಲಿ ಅಧಿಕ ಸಂಖ್ಯೆಯಲ್ಲಿ ಇರುವುದರಿಂದಲೇ ನಮ್ಮ ಬದುಕು ನಿಧಾನವಾಗಿ ಅವನತಿಯತ್ತ ಸಾಗುತ್ತಿದೆ.

ಹವಾಮಾನ ಬದಲಾವಣೆ ಎಂದರೇನು? ಅದು ವ್ಯಕ್ತವಾಗುವುದು ಹೇಗೆ?–ಈ ಎರಡು ಪ್ರಶ್ನೆಗಳಿಗೆ ಉತ್ತರವನ್ನು ನೀಡಿದಾಗಲೇ ಅದು ನಮ್ಮ ಬದುಕನ್ನು ಹೇಗೆ ಆತಂಕಕಾರಿ ಭವಿಷ್ಯದತ್ತ ಕೊಂಡೊಯ್ಯುತ್ತಿದೆ ಎಂಬುದು ವೇದ್ಯವಾಗುವುದು. ಹವಾಮಾನ ಬದಲಾವಣೆ ಮೂಲಭೂತವಾಗಿ ವ್ಯಕ್ತವಾಗುವುದು ತಾಪಮಾನದಲ್ಲಿ ಉಂಟಾಗುವ ದೀರ್ಘಕಾಲಿಕ ಪರಿವರ್ತನೆಗಳು ಮತ್ತು ಹವಾಮಾನದ ಸ್ವರೂಪದಲ್ಲಿ ಗೋಚರವಾಗುವ ಬದಲಾವಣೆಗಳಿಂದ.

ಈ ಬದಲಾವಣೆಗಳು ಪ್ರಾಕೃತಿಕವೇ ಆದರೂ ಸುಮಾರು ಮೂರು ಶತಮಾನಗಳಿಂದ ನಡೆಯುತ್ತಿರುವ ಮಾನವ ಚಟುವಟಿಕೆಗಳು, ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯ ಮೇಲಾಗುತ್ತಿರುವ ನಿರಂತರ ಗದಾಪ್ರಹಾರ, ಗಣಿಗಾರಿಕೆ, ಅನಿಲಗಳ ಹೊರಸೂಸುವಿಕೆ ಮುಂತಾದ ಪರಿಸರ ನಾಶಕ ಚಟುವಟಿಕೆಗಳಿಂದ ಹವಾಮಾನದಲ್ಲಿ ಅನಿರೀಕ್ಷಿತ ಬದಲಾವಣೆಗಳು ಉಂಟಾಗುತ್ತಿವೆ. ಹವಾಮಾನ ಬದಲಾವಣೆ ಯಾವ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಿದೆಯೆಂಬುದು ಎರಡನೆಯ ಮುಖ್ಯ ಪ್ರಶ್ನೆ. ಪ್ರಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಭಯ ಹುಟ್ಟಿಸುವ ರೀತಿಯಲ್ಲಿ ಪರ್ವತಗಳ ಹಿಮರಾಶಿ ಕುಗ್ಗುತ್ತಿದೆ; ಮಂಜುಗಡ್ಡೆಗಳು ಕರಗುತ್ತಿವೆ; ಚಂಡಮಾರುತಗಳು ಜೀವಗಳನ್ನು–ಜೀವನಾಧಾರಗಳನ್ನು ಧ್ವಂಸ ಮಾಡುತ್ತಿವೆ; ಭೂಕುಸಿತ ಜೀವರಾಶಿಗಳನ್ನು ಅಲುಗಾಡಿಸುತ್ತಿದೆ; ಪ್ರವಾಹಗಳು ಸಮುದಾಯಗಳನ್ನೇ ಕೊಚ್ಚಿಕೊಂಡು ಹೋಗುತ್ತಿವೆ ಹಾಗೂ ಧಾರಾಕಾರ ಸುರಿಯುವ ಮಳೆ ಜಲ ಪ್ರಳಯವನ್ನೇ ಸೃಷ್ಟಿಸುತ್ತಿದೆ.

ಹಸಿರುಮನೆ ಪರಿಣಾಮದಿಂದ ಭೂಮಿಯ ಶಾಖ ಹೆಚ್ಚುತ್ತಿದ್ದು ಅದರಿಂದಾಗುವ ಪರಿಣಾಮಗಳು ತರುವ ಸಂಕಷ್ಟಗಳನ್ನು ಪ್ರಕೃತಿ ಮತ್ತು ಮಾನವ ಸಮಾಜ–ಇವೆರಡೂ ಈಗಾಗಲೇ ಎದುರಿಸುತ್ತಿವೆ. ಆಗಿಂದಾಗ್ಗೆ ನಾವು ಕೇಳುತ್ತಿರುವ, ಕಾಣುತ್ತಿರುವ ಅಥವಾ ನೇರವಾಗಿ ಅನುಭವಿಸುತ್ತಿರುವ ಪರಿಣಾಮಗಳೆಂದರೆ ಸಸ್ಯಗಳು ಮತ್ತು ಪುಷ್ಪಗಳ ಬೆಳವಣಿಗೆಯ ಪರಿಯಲ್ಲಿಯೇ ಉಂಟಾಗುತ್ತಿರುವ ಪರಿವರ್ತನೆಗಳು, ಉಲ್ಬಣಗೊಳ್ಳುತ್ತಿರುವ ಬರ ಪರಿಸ್ಥಿತಿ, ಕಳೆದೆರಡು ದಶಕಗಳಲ್ಲೇ ನಮ್ಮ ದೇಶದಲ್ಲೇ ಸಂಭವಿಸಿದ ಹತ್ತಕ್ಕೂ ಹೆಚ್ಚು ಚಂಡಮಾರುತಗಳು ಅಥವಾ ವಾಯುಭಾರ ಕುಸಿತ, ಹಿಮಪಾತಗಳು ಹಾಗೂ ಮರಳುಗಾಡುಗಳ ವಿಸ್ತರಣೆ. ಹಸಿರು ಅನಿಲ ಹೊರಸೂಸುವಿಕೆಯನ್ನೇನಾದರೂ ನಿಯಂತ್ರಣಕ್ಕೆ ತೆಗೆದುಕೊಳ್ಳದೇ ಹೋದರೆ ಈ ಶತಮಾನ ಅಂತ್ಯಗೊಳ್ಳುವ ವೇಳೆಗೆ ತಾಪಮಾನ 10.6 ಡಿಗ್ರಿಗಳಷ್ಟು ಏರಿಕೆಯಾಗುವ ಸಾಧ್ಯತೆಗಳಿವೆ ಎಂದು ಪರಿಸರ ತಜ್ಞರು ಎಚ್ಚರಿಸಿದ್ದಾರೆ.

1990 ರಿಂದ 2019ರವರೆಗೆ ಮಾನವ ಪ್ರೇರಿತವಾದ ಹಸಿರು ಅನಿಲ ಸೋರಿಕೆಯಿಂದ ಜಾಗತಿಕ ತಾಪಮಾನ ಏರಿಕೆ ಶೇಕಡಾ 45 ರಷ್ಟು ಹೆಚ್ಚಾಯಿತು ಎಂಬುದು ಒಂದು ಅಂದಾಜು. ಇದರಲ್ಲಿ ಇಂಗಾಲದ ಡೈ ಆಕ್ಸೈಡ್‌ನಿಂದ ಆದ ಹೆಚ್ಚಳವೇ ಶೇಕಡಾ 35 ರಷ್ಟು ಕಲ್ಲಿದ್ದಲು ಮತ್ತು ಪಳೆಯುಳಿಕೆ ಇಂಧನವನ್ನು ಸುಡುವುದು, ಸಿಮೆಂಟ್ ಉತ್ಪಾದನೆ ಮತ್ತು ಅರಣ್ಯಗಳ ನಾಶ–ಇವೇ ಮುಂತಾದ ಮಾನವ ಚಟುವಟಿಕೆಗಳು ಇಂಗಾಲದ ಡೈ ಆಕ್ಸೈಡ್ ಸೃಷ್ಟಿಸಿ ತಾಪಮಾನ ಏರಿಕೆಗೆ ಕಾರಣವಾಗುತ್ತವೆ.

ಬ್ರಿಟಿಷ್ ಮಿಟಿರಿಯಲಾಜಿಕಲ್ ಕಚೇರಿಯ ಒಂದು ವರದಿಯ ಪ್ರಕಾರ 2050ರ ವೇಳೆಗೆ ಹವಾಮಾನ ಬದಲಾವಣೆಯಿಂದ ಭೂಮಿ ಮತ್ತು ಇತರ ಆಹಾರ ಮೂಲಗಳಿಗೆ ಸಂಭವಿಸುವ ಅಪಾಯದಿಂದ 50 ಮಿಲಿಯನ್‌ಗಿಂತ ಹೆಚ್ಚಿನ ಸಂಖ್ಯೆಯ ಜನರು ಹಸಿವಿನಿಂದ ಬಳಲಲಿದ್ದಾರೆ. ನಮ್ಮ ಭೂಮಿಯ ತಾಪಮಾನ ಹೆಚ್ಚುತ್ತಾ ಹೋದ ಹಾಗೆಲ್ಲ ಆಹಾರ ಮತ್ತು ನೀರು–ಇವೆರಡರ ಕೊರತೆ ಹೆಚ್ಚಾಗಲಿದ್ದು 2020 ರಿಂದಲೇ ಈ ಪರಿಸ್ಥಿತಿ ಕೋಟ್ಯಾಂತರ ಜನರ ಬದುಕನ್ನು ಅಲುಗಾಡಿಸಲು ಆರಂಭಿಸಿದೆ.

ಹವಾಮಾನ ಬದಲಾವಣೆಗೂ ಹಸಿವು ನೀರಡಿಕೆಗಳು ಹೆಚ್ಚಾಗುವುದಕ್ಕೂ ಸಂಬಂಧವೇನು ಎಂದು ತಿಳಿಯುವುದು ಬಹು ಮುಖ್ಯ. ಮೊದಲಿಗೆ ಕೃಷಿ ಚಟುವಟಿಕೆಗಳ ಸ್ವರೂಪವೇ ಬದಲಾಗುತ್ತಿದೆ. ಪ್ರಾಕೃತಿಕ ವಿಪತ್ತುಗಳ ಪರಿಣಾಮದಿಂದಾಗಿ ಬೆಳೆಗಳು ನಾಶವಾಗುತ್ತಿವೆ, ಒಂದೆಡೆ ಜಲಾವೃತವಾಗಿರುವ ಪ್ರದೇಶಗಳು, ಮತ್ತೊಂದೆಡೆ ಒಣಗಿ ಹೋಗುತ್ತಿರುವ ಭೂಮಿ–ಇವೆರಡು ಪರಿಸ್ಥಿತಿಗಳಿಂದ ಆಹಾರದ ಉತ್ಪಾದನೆಯೇ ಏರುಪೇರಾಗಿದೆ. 2005 ರಿಂದ ಸುಮಾರು ಹತ್ತು ವರ್ಷಗಳ ಕಾಲ ಜಾಗತಿಕ ಅಪೌಷ್ಟಿಕತೆ ಇಳಿಮುಖವಾಗಿತ್ತು, ಆದರೆ ಕ್ರಮೇಣ ಇಡೀ ಜಗತ್ತಿನಲ್ಲಿ ಹಸಿವಿನ ಪ್ರಮಾಣ ತೀವ್ರವಾಗತೊಡಗಿತು. ಕುಟುಂಬದ ಮಟ್ಟದಲ್ಲಿ ಆರಂಭವಾದ ಆಹಾರ ಕೊರತೆ ಇಡೀ ಸಮುದಾಯಗಳಿಗೆ ಹರಡತೊಡಗಿ ಆಹಾರದ ಅನ್ವೇಷಣೆಯಲ್ಲಿ ಅನೇಕರು, ಅದರಲ್ಲೂ ವಿಶೇಷವಾಗಿ ಸಮಾಜದ ಅಂಚಿನಲ್ಲಿರುವ ವರ್ಗಗಳು ವಲಸೆ ಹೋಗಲಾರಂಭಿಸಿದರು.

> "ಬ್ರಿಟಿಷ್ ಮಿಟಿರಿಯಲಾಜಿಕಲ್ ಕಚೇರಿಯ ಒಂದು ವರದಿಯ ಪ್ರಕಾರ 2050ರ ವೇಳೆಗೆ ಹವಾಮಾನ ಬದಲಾವಣೆಯಿಂದ ಭೂಮಿ ಮತ್ತು ಇತರ ಆಹಾರ ಮೂಲಗಳಿಗೆ ಸಂಭವಿಸುವ ಅಪಾಯದಿಂದ 50 ಮಿಲಿಯನ್‌ಗಿಂತ ಹೆಚ್ಚಿನ ಸಂಖ್ಯೆಯ ಜನರು ಹಸಿವಿನಿಂದ ಬಳಲಲಿದ್ದಾರೆ. ನಮ್ಮ ಭೂಮಿಯ ತಾಪಮಾನ ಹೆಚ್ಚುತ್ತಾ ಹೋದ ಹಾಗೆಲ್ಲ ಆಹಾರ ಮತ್ತು ನೀರು-ಇವೆರಡರ ಕೊರತೆ ಹೆಚ್ಚಾಗಲಿದ್ದು 2020ರಿಂದಲೇ ಈ ಪರಿಸ್ಥಿತಿ ಕೋಟ್ಯಾಂತರ ಜನರ ಬದುಕನ್ನು ಅಲುಗಾಡಿಸಲು ಆರಂಭಿಸಿದೆ.

ಈ ಪರಿಸ್ಥಿತಿ ದಕ್ಷಿಣ ಅಮೆರಿಕ, ಮಧ್ಯ ಏಷ್ಯಾ ಹಾಗೂ ಆಫ್ರಿಕಾದ ಬಹುತೇಕ ಪ್ರದೇಶಗಳಲ್ಲಿ ದಿನೇ ದಿನೆ ಬಿಗಡಾಯಿಸುತ್ತಿದೆ. ಸಂತಾನೋತ್ಪತ್ತಿಯ ವಯೋಗುಂಪಿನಲ್ಲಿರುವ ಮಹಿಳೆಯರಲ್ಲಿ ರಕ್ತಹೀನತೆ ಹೆಚ್ಚುತ್ತಿದ್ದು ಅವರು ಮತ್ತು ಮುಂಬರುವ ತಲೆಮಾರು ಗಂಭೀರವಾದ ಸವಾಲುಗಳನ್ನು ಎದುರಿಸುತ್ತದೆ ಎಂದು ಅಧ್ಯಯನಗಳು ಸೂಚಿಸುತ್ತಿವೆ. ಹವಾಮಾನ ಬದಲಾವಣೆಯಿಂದ ಆಹಾರ ಪದಾರ್ಥಗಳ ಬೆಲೆ ಏರುತ್ತಿದೆ, ಗ್ರಾಮೀಣ ಹಾಗೂ ನಗರ ಬಡವರಿಬ್ಬರೂ ಆಹಾರವನ್ನು ಕೊಳ್ಳಲು ತಮ್ಮ ಗಳಿಕೆಯ ಬಹು ಭಾಗವನ್ನು ಖರ್ಚು ಮಾಡಬೇಕಾಗಿದೆ.

ವಿಶೇಷವಾಗಿ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸುವ ಮತ್ತೊಂದು ಗುಂಪೆಂದರೆ ಹಿರಿಯ ನಾಗರಿಕರು. ವಯಸ್ಸಾಗುವ ಪ್ರಕ್ರಿಯೆ ತರುವ ಮಾನಸಿಕ ಒತ್ತಡಗಳು ಮತ್ತು ದೈಹಿಕ ಬದಲಾವಣೆಗಳಿಂದ, ಪ್ರಾಕೃತಿಕ ವಿಕೋಪಗಳು ಎದುರಾದಾಗ ಹಿರಿಯರು ಹೆಚ್ಚಿನ ತೊಂದರೆಗಳನ್ನು ಅನುಭವಿಸುತ್ತಾರೆ. ಆದಾಯ ಗಳಿಕೆಯ ಮಟ್ಟ ಕಡಿಮೆ ಇರುವ ದೇಶಗಳಲ್ಲಿ ಜೀವನಾವಶ್ಯಕತೆಗಳಿಂದ ವಂಚಿತವಾದ ಪರಿಸರಗಳಲ್ಲಿ ವಾಸಿಸುವ ಹಿರಿಯರು ಪರಿಸರ ಮಾಲಿನ್ಯ, ಆಹಾರ ಅಭದ್ರತೆ, ಅತಿಯಾದ ತಾಪ, ಪ್ರವಾಹ ಪರಿಸ್ಥಿತಿ, ವಾಸಸ್ಥಾನಗಳ ನಾಶ ಹಾಗೂ ಆರೋಗ್ಯ ರಕ್ಷಕ ಸೇವೆಗಳಿಂದ ವಂಚಿತರಾಗುವುದು–ಇವೇ ಮುಂತಾದ ಆಪತ್ತುಗಳನ್ನು ಎದುರಿಸಬೇಕಾದ್ದರಿಂದ ಅವರಲ್ಲಿ ಮರಣ ಪ್ರಮಾಣವೂ ಹೆಚ್ಚಾಯಿತು ಎಂಬುದನ್ನು ಕೆಲ ಅಧ್ಯಯನಗಳು ತಿಳಿಸಿವೆ.

ಹವಾಮಾನ ಬದಲಾಗುತ್ತಾ ಹೋದ ಹಾಗೆಲ್ಲ ಬಡತನದ ಪ್ರಮಾಣವೂ ಹೆಚ್ಚುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಮುಂದಿನ 10 ವರ್ಷಗಳಲ್ಲಿ 130 ಮಿಲಿಯನ್ ಜನರು ಬಡತನದ ಸ್ಥಿತಿಗೆ ಜಾರಲಿದ್ದಾರೆ. ಇದುವರೆಗೂ ಸಾಧಿಸಿದ ಅಭಿವೃದ್ಧಿಯ ಪರಿಣಾಮಗಳನ್ನು ಬುಡಮೇಲು ಮಾಡುವಂಥ ಸ್ಥಿತಿ ಬರಲಿದ್ದು, 2050 ರ ವೇಳೆಗೆ 200 ಮಿಲಿಯನ್ ಜನರು ಬದುಕಿನ ನೆಲೆಗಳನ್ನು ಅರಸಿ ತಮ್ಮ ದೇಶಗಳಲ್ಲಿಯೇ ಒಳ–ವಲಸೆ ಹೋಗಬೇಕಾದಂತಹ ಪರಿಸ್ಥಿತಿ ಸೃಷ್ಟಿಯಾಗುತ್ತದೆ ಎಂದು ಹೇಳಲಾಗುತ್ತಿದೆ.

ಇಂದು ಜಗತ್ತಿನ ಜನಸಂಖ್ಯೆಯ ಮೂರನೇ ಒಂದು ಭಾಗ ಬಡತನ ಅಥವಾ ಹೆಚ್ಚು–ಕಡಿಮೆ ಬಡತನ ಎಂದು ಗುರುತಿಸಬಹುದಾದ ಪರಿಸ್ಥಿತಿಯಲ್ಲಿ ಇದ್ದಾರೆ. ಅವರ ಜೀವನದ ನೆಲೆಗಳು ಕುಸಿಯುತ್ತಿರುವುದು ಒಂದೆಡೆಯಾದರೆ ಹವಾಮಾನ ಬದಲಾವಣೆ ಏರುತ್ತಿರುವ ಆಘಾತಗಳು ಮತ್ತೊಂದೆಡೆ ಅವರನ್ನು ಸೀಮಾಂತೀಕರಣದ ಸ್ಥಿತಿಯತ್ತ ತಳ್ಳುತ್ತಿವೆ. ಹವಾಮಾನ ಬದಲಾವಣೆಯಿಂದ 2030ರ ವೇಳೆಗೆ 100 ಮಿಲಿಯನ್‌ಗೂ ಹೆಚ್ಚು ಜನರು ತೀವ್ರ ಬಡತನವನ್ನು ಎದುರಿಸುತ್ತಾರೆ ಎಂದು ಅಂದಾಜು ಮಾಡಲಾಗುತ್ತಿದೆ. ಹವಾಮಾನ ಬದಲಾವಣೆಯಿಂದ ಸಂಭವಿಸುವ ಪ್ರಾಕೃತಿಕ ವಿಪತ್ತುಗಳ ಕಾರಣದಿಂದಾಗಿ 200 ಮಿಲಿಯನ್ ಜನರು ಸ್ಥಳಾಂತರಗೊಳ್ಳುತ್ತಾರೆ ಎಂದು ಕೂಡ ಹೇಳಲಾಗುತ್ತಿದೆ.

ಹವಾಮಾನ ಬದಲಾವಣೆ ನಮ್ಮ ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲಗಳಿಗೆ ತರುತ್ತಿರುವ ವಿಪತ್ತುಗಳಿಂದ ಪಾರಾಗಲು ನಾವು ವಹಿಸಬೇಕಾದ ಎಚ್ಚರಗಳೇನು? ತೀರಾ ಸರಳವೆನಿಸುವ ಜೀವನ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಹವಾಮಾನ ಬದಲಾವಣೆಯ ಪ್ರಖರತೆಯನ್ನು ಕಡಿಮೆ ಮಾಡಲು ನಾವು ಪ್ರಯತ್ನಿಸಬಹುದು. ಹಸಿರು ಮನೆ ಅನಿಲಗಳನ್ನು ಹೊರಸೂಸುವ ವಾಹನಗಳ ಬಳಕೆಯನ್ನು ಕಡಿಮೆ ಮಾಡಿ ಪರಿಸರ ಶುದ್ಧತೆಯನ್ನು ಕಾಪಾಡುವುದು ಒಂದು ಮಾರ್ಗ. ಇಂಧನದ ಬಳಕೆಯಲ್ಲಿ ಎಚ್ಚರ ವಹಿಸುವುದು ಕೂಡ ಅಷ್ಟೇ ಮುಖ್ಯ. ಸದಾ ಕಾಲ ವಿದ್ಯುತ್ ಶಕ್ತಿಯ ಬಳಕೆ ತಾಪಮಾನವನ್ನು ಹೆಚ್ಚಿಸುವುದರಿಂದ ಅದನ್ನು ಕಡಿಮೆ ಮಾಡುವುದು ನಾವು ಮಾಡಬಹುದಾದ ಮತ್ತೊಂದು ಪ್ರಯತ್ನ.

ಮರಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ಕಡಿಯುವುದನ್ನು ಪ್ರತಿಭಟಿಸುವುದು, ಅರಣ್ಯ ಸಂಪತ್ತಿನ ನಾಶವನ್ನು ನಿಲ್ಲಿಸುವುದು, ಸಸ್ಯ ಮತ್ತು ಪ್ರಾಣಿ ಸಂಕುಲಗಳ ರಕ್ಷಣೆ, ಸೌರ ಶಕ್ತಿಯ ಬಳಕೆ –ಇಂಥ ಪರಿಸರ ಸೂಕ್ಷ್ಮ ಕೆಲಸಗಳನ್ನು ಮಾಡಲು ಸಾರ್ವಜನಿಕ ಸಹಭಾಗಿತ್ವದ ಅಗತ್ಯವಿದೆ. ಮೊದಲೇ ಕೋವಿಡ್ ತಂದಿಟ್ಟ ಸವಾಲುಗಳನ್ನು ಎದುರಿಸಲು ನಮ್ಮ ಸಮಾಜ ಕಷ್ಟಪಡುತ್ತಿರುವುದರ ಜೊತೆಗೆ ಹವಾಮಾನ ಬದಲಾವಣೆಯನ್ನು ತಡೆಗಟ್ಟಲು ಮನೆಗಳಲ್ಲಿ, ಬೀದಿಗಳಲ್ಲಿ, ಉದ್ಯೋಗ ಸ್ಥಳಗಳಲ್ಲಿ, ಸಮುದಾಯದ ಮಟ್ಟದಲ್ಲಿ ಪ್ರಯತ್ನಗಳು ನಡೆಯದಿದ್ದರೆ ಸುಸ್ಥಿರ ಅಭಿವೃದ್ಧಿ ಗುರಿಗಳ ಆಶಯ 2030 ರ ವೇಳೆಗೆ ಸಾಕಾರವಾಗುವುದು ಅನುಮಾನವೇ ಸರಿ.

'ರೋಟರಿ–ಸಿಲಿಕಾನ್ ಪತ್ರಿಕೋದ್ಯಮ ಪ್ರಶಸ್ತಿ' ಪ್ರದಾನ

ಮುದ್ರಣ ಮಾಧ್ಯಮದಲ್ಲಿ ಪತ್ರಕರ್ತರು ಪ್ರಶಸ್ತಿ ಬಂದಾಗಲೇ ಜನರ ಮಧ್ಯೆ ಕಾಣಿಸುವುದು: ಕೆ.ಜಿ.ವಿಕ್ರಂ ಮುತ್ತಣ್ಣ

ಮೈಸೂರು, ಏ.20(ಎಂಕೆ)– ರೋಟರಿ ಮೈಸೂರು ಮಿಡ್‌ಟೌನ್ ಹಾಗೂ ಸಿಲಿಕಾನ್ ಕಂಟ್ರೋಲ್(ಇಂಡಿಯಾ) ಪ್ರೈವೇಟ್ ಲಿಮಿಟೆಡ್ ವತಿಯಿಂದ ಪ್ರತಿಕೋದ್ಯಮದಲ್ಲಿನ ಶ್ರೇಷ್ಠತೆಗಾಗಿ ನೀಡುವ 'ರೋಟರಿ–ಸಿಲಿಕಾನ್ ಪತ್ರಿಕೋದ್ಯಮ ಪ್ರಶಸ್ತಿ'ಯನ್ನು ಡೆಕ್ಕನ್ ಹೆರಾಲ್ಡ್ ಮೈಸೂರು ಬ್ಯುರೋ ಮುಖ್ಯಸ್ಥ ಟಿ.ಆರ್.ಸತೀಶ್ ಕುಮಾರ್, ಆಂದೋಲನ ದಿನಪತ್ರಿಕೆ ಛಾಯಾಗ್ರಾಹಕ ಗವಿಮಠ ರವಿ ಅವರಿಗೆ ಪ್ರದಾನ ಮಾಡಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಂ ಮುತ್ತಣ್ಣ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ಹೋಟೆಲ್‌ಗಳಲ್ಲಿ ರುಚಿಯಾದ ಊಟ ಮಾಡುತ್ತೇವೆ. ಆದರೆ ಅದನ್ನು ಸಿದ್ಧಪಡಿಸಿದ ಅಡುಗೆ ಭಟ್ಟರನ್ನು ನೋಡಲು ಸಾಧ್ಯವಿಲ್ಲ. ಅದರಂತೆ ಪತ್ರಕರ್ತರು, ಅದರಲ್ಲೂ ಮುದ್ರಾ ಮಾಧ್ಯಮದಲ್ಲಿ ಕೆಲಸ ಮಾಡುವ ಪತ್ರಕರ್ತರು ತಮಗೆ ಪ್ರಶಸ್ತಿಗಳು ಬಂದಾಗಲೇ ಜನರ ಮಧ್ಯೆ ಕಾಣಿಸುವುದು. ರೋಟರಿ ಮೈಸೂರು ಮಿಡ್‌ಟೌನ್ ಹಾಗೂ ಸಿಲಿಕಾನ್ ಕಂಟ್ರೋಲ್(ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಪತ್ರಕರ್ತರ ಪರಿಶ್ರಮವನ್ನು ಗುರ್ತಿಸಿ ಅವರನ್ನು ಅಭಿನಂದಿಸಿ, ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. ಪ್ರಶಸ್ತಿ ಪಡೆದ ಇಬ್ಬರು ಸಾಧಕರು ಮತ್ತಷ್ಟು ಸಾಧನೆ ಮಾಡಲಿ ಎಂದು ಶುಭಕೋರಿದರು.

ಓದುಗರ ಕೈಯ್ಯಲ್ಲಿರುವ 12 ಪುಟಗಳ ಪತ್ರಿಕೆಯ ಹಿಂದೆ ಪತ್ರಕರ್ತರು, ಮುದ್ರಣ ವಿಭಾಗದವರು, ಪತ್ರಿಕಾ ವಿತರಕರ ಪರಿಶ್ರಮವಿರುತ್ತದೆ. ದೇಶದಲ್ಲಿ ವೇಗವಾಗಿ ಗ್ರಾಹಕರನ್ನು ತಲುಪುವ ವಸ್ತುಗಳಲ್ಲಿ ಪತ್ರಿಕೆಯೂ ಒಂದಾಗಿದ್ದು, ಈಗಂತೂ ನಷ್ಟದಲ್ಲಿಯೇ ನಡೆಯುತ್ತಿದೆ. 12 ಪುಟಗಳ ಪತ್ರಿಕೆಯೊಂದನ್ನು ಹೊರತರಬೇಕಾದರೆ ಸುಮಾರು 14 ರೂ. ಖರ್ಚಾಗುತ್ತದೆ. ಆದರೆ ನಾವು–ನೀವುಗಳು ಕೇವಲ 4 ರೂ.ಗೆ ಕೊಂಡುಕೊಳ್ಳುತ್ತೇವೆ. ಅದರಲ್ಲಿ ಪತ್ರಿಕೆಗೆ 1 ರೂ. ಕೊಟ್ಟರೆ, ಅದನ್ನು ಓದಿ, ನಂತರ ಏನಾದರೂ ಪ್ಯಾಕಿಂಗ್ ಮಾಡಲು ಬಳಸಿಕೊಂಡು ಕಡೆಗೆ ವಾಪಸ್ ಮಾರಾಟ ಮಾಡಿದರೂ 50 ಪೈಸೆ ಸಿಗುತ್ತದೆ. ಆದರೆ ಇಂಟರ್‌ನೆಟ್‌ನಲ್ಲಿ ಒಮ್ಮೆ ಹಣ ಕೊಟ್ಟು ನೋಡಿದರೆ ಮುಗಿತು, ಪುನರ್ ಬಳಕೆ ಸಾಧ್ಯವಿಲ್ಲ. ಅದರ ಬದಲು ಪತ್ರಿಕೆಗಳನ್ನು ಕೊಂಡುಕೊಂಡರೆ ಓದಲು ಇಷ್ಟವಿಲ್ಲದಿದ್ದರೂ ಪ್ಯಾಕಿಂಗ್‌ಗಾದರೂ ಬಳಸಿಕೊಳ್ಳಬಹುದು ಎಂದು ಹೇಳಿದ ಅವರು, ಪತ್ರಿಕೆಗಳ ಉಪಯುಕ್ತತೆ ಕುರಿತು ವಿವರಿಸಿದರು.

ಮುದ್ರಣ ಮಾಧ್ಯಮಗಳು ಸಂಕಷ್ಟ ಪರಿಸ್ಥಿತಿಯಲ್ಲಿವೆ, ಹಲವು ದೇಶಗಳಲ್ಲಿ ಪತ್ರಿಕೆಗಳನ್ನೇ ಓದುತ್ತಿಲ್ಲ ಹಾಗೂ ಇಂಟರ್‌ನೆಟ್ ಬಂದ ಬಳಿಕ ಜಾಹೀರಾತು ಕಡಿಮೆಯಾಗಬಹುದು ಎಂಬ ಮಾತುಗಳು ಕೇಳಿ ಬಂದಿದ್ದವು. ಆದರೆ ಭಾರತದಲ್ಲಿ ಪತ್ರಿಕೆ ಓದುಗರು ಹೆಚ್ಚಾಗಿದ್ದು, ಹಾಗಾಗಿಯೇ ಜಾಹೀರಾತುಗಳು ಹೆಚ್ಚಾಗುತ್ತಿವೆ. ಯಾವುದೇ ವಸ್ತುವಿನ ಮೌಲ್ಯ ಹೆಚ್ಚಾಗಲು ಪತ್ರಿಕೆಗಳಲ್ಲಿ ನೀಡುವ ಜಾಹೀರಾತು ಮುಖ್ಯವಾಗುತ್ತದೆ ಎಂದು ಹೇಳಿದರು.

ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಡಾ.ರವೀಂದ್ರನಾಥ್ ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಕರೆಯುವ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಪತ್ರಕರ್ತರನ್ನು ಗುರ್ತಿಸಿ 'ರೋಟರಿ–ಸಿಲಿಕಾನ್ ಪತ್ರಿಕೋದ್ಯಮ ಪ್ರಶಸ್ತಿ' ನೀಡಲಾಗುತ್ತಿದೆ ಎಂದರು.

ರೋಟರಿ ಮೈಸೂರು ಮಿಡ್‌ಟೌನ್ ಕಾರ್ಯದರ್ಶಿ ಡಿ.ಶ್ರೀನಿವಾಸನ್, ಸಿಲಿಕಾನ್ ಕಂಟ್ರೋಲ್(ಇಂಡಿಯಾ) ಪ್ರೈವೇಟ್ ಲಿಮಿಟೆಡ್ ನಿರ್ದೇಶಕರಾದ ಎಸ್.ರಾಘವೇಂದ್ರ, ಎಂ.ಎಸ್.ನವೀನ್ ಚಂದ್ರ, ರೋಟರಿ ಮೈಸೂರು ಮಿಡ್‌ಟೌನ್ ಮಾಜಿ ಅಧ್ಯಕ್ಷ ಡಾ.ಭೀಮೇಶ್ ಮತ್ತಿತರರು ಉಪಸ್ಥಿತರಿದ್ದರು.



ಡೆಕ್ಕನ್ ಹೆರಾಲ್ಡ್ ಮೈಸೂರು ಬ್ಯುರೋ ಮುಖ್ಯಸ್ಥ ಟಿ.ಆರ್.ಸತೀಶ್ ಕುಮಾರ್, ಆಂದೋಲನ ದಿನಪತ್ರಿಕೆ ಛಾಯಾಗ್ರಾಹಕ ಗವಿಮಠ ರವಿ ಅವರಿಗೆ 'ರೋಟರಿ–ಸಿಲಿಕಾನ್ ಪತ್ರಿಕೋದ್ಯಮ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ರೋಟರಿ ಮೈಸೂರು ಮಿಡ್‌ಟೌನ್ ಮಾಜಿ ಅಧ್ಯಕ್ಷ ಡಾ.ಭೀಮೇಶ್, ಅಧ್ಯಕ್ಷ ಡಾ.ರವೀಂದ್ರನಾಥ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಂ ಮುತ್ತಣ್ಣ, ಸಿಲಿಕಾನ್ ಕಂಟ್ರೋಲ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಎಸ್.ರಾಘವೇಂದ್ರ, ರೋಟರಿ ಮೈಸೂರು ಮಿಡ್‌ಟೌನ್ ಕಾರ್ಯದರ್ಶಿ ಡಿ.ಶ್ರೀನಿವಾಸನ್ ಹಾಗೂ ಸಿಲಿಕಾನ್ ಕಂಟ್ರೋಲ್ಸ್(ಇಂಡಿಯಾ) ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಎಂ.ಎಸ್.ನವೀನ್ ಚಂದ್ರ ಉಪಸ್ಥಿತರಿದ್ದರು.

ಶ್ರೀರಂಗಪಟ್ಟಣ–ಚನ್ನರಾಯಪಟ್ಟಣ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ: ಗಡ್ಕರಿ ಭರವಸೆ

ಬೆಂಗಳೂರು, ಏ.20(ಕೆಎಂಶಿ)– ಶ್ರೀರಂಗ ಪಟ್ಟಣ – ಚನ್ನರಾಯಪಟ್ಟಣ ರಾಜ್ಯ ಹೆದ್ದಾರಿ ಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಅಭಿವೃದ್ಧಿಗೆ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ರೇಷ್ಮೆ ಮತ್ತು ಕ್ರೀಡಾ ಸಚಿವ ಡಾ. ನಾರಾಯಣಗೌಡ ಅವರು ಇಂದು ಕೇಂದ್ರ ಭೂಸಾರಿಗೆ ಸಚಿವರನ್ನು ಭೇಟಿ ಮಾಡಿ ಶ್ರೀರಂಗಪಟ್ಟಣ– ಕೆಆರ್ ಪೇಟೆ– ಚನ್ನರಾಯಪಟ್ಟಣ– ಅರಸೀಕೆರೆ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಉನ್ನತೀಕರಿಸಲು ಮನವಿ ಮಾಡಿದರು. ಈ ರಸ್ತೆ ಶಿವಮೊಗ್ಗ, ಮೈಸೂರು ನಗರಗಳಿಗೆ ಸಂಪರ್ಕ ಕಲ್ಪಿಸಲಿದ್ದು ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ.

ಹೀಗಾಗಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸಿದರೆ, ಎರಡು ಬೃಹತ್ ನಗರಗಳ ನಡುವೆ ಸಂಪರ್ಕ ಕಲ್ಪಿಸಿ, ವಾಣಿಜ್ಯ ವಹಿವಾಟು ಮತ್ತು ಇತರ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ ಎಂದು ಮನವಿ ಮಾಡಿದ್ದರು. ಕೇಂದ್ರ ಸಚಿವರು ಭಾರತ್ ಮಾಲಾ –2 ಯೋಜನೆಯಡಿ ಇದನ್ನು ಪರಿಗಣಿಸುವುದಾಗಿ ತಿಳಿಸಿದ್ದಾರೆ. ಇದರಿಂದ ಮಂಡ್ಯ, ಹಾಸನ, ಶಿವಮೊಗ್ಗ, ಮೈಸೂರು, ಚಿಕ್ಕಮಗಳೂರು ಜಿಲ್ಲೆಗಳ ಲಕ್ಷಾಂತರ ಜನರಿಗೆ ಅನುಕೂಲವಾಗಲಿದೆ ಎಂದರು.

ಬೇಸಿಗೆಯಲ್ಲಿ ವಿದ್ಯುತ್ ಕೊರತೆ ಇಲ್ಲ

ಬೆಂಗಳೂರು, ಏ.20– ರಾಜ್ಯದಲ್ಲಿ ಕಲ್ಲಿದ್ದಲು ಕೊರತೆ ಉಂಟಾಗಿದೆ, ವಿದ್ಯುತ್ ಕ್ಷಾಮವಿದೆ ಎಂದು ಕಾಂಗ್ರೆಸ್ ವಿನಾ ಕಾರಣ ಹುಯಿಲೆಬ್ಬಿಸುತ್ತಿದ್ದು, ವಾಸ್ತವ ವಿಚಾರವನ್ನು ಮರೆಮಾಚುವ ವ್ಯವಸ್ಥಿತ ಷಡ್ಯಂತ್ರ ನಡೆಸಲಾಗುತ್ತಿದೆ ಎಂದು ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಕಳೆದ ಕೆಲ ದಿನಗಳಿಂದ ಉತ್ತಮ ಮಳೆಯಾಗುತ್ತಿದೆ. ಇದರಿಂದಾಗಿ ಕೃಷಿ ಪಂಪ್‌ಸೆಟ್‌ಗಳಿಗೆ ಅಗತ್ಯವಾದ ವಿದ್ಯುತ್ ಬೇಡಿಕೆ ಪ್ರಮಾಣ ಕುಗ್ಗಿದೆ. ಬೇಡಿಕೆ ಕಡಿಮೆಯಾಗಿದೆ ಎಂಬ ಕಾರಣಕ್ಕೆ ಬಳ್ಳಾರಿ ಹಾಗೂ ರಾಯಚೂರು ಶಾಖೋತ್ಪನ್ನ ಘಟಕದ ಉತ್ಪಾದನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದೇವೆಯೇ ಹೊರತು ಕಲ್ಲಿದ್ದಲು ಕೊರತೆಗಾಗಿ ಅಲ್ಲ. ರಾಜ್ಯದಲ್ಲಿ ಪ್ರತಿನಿತ್ಯ 7000 ಮೆಗಾ ವ್ಯಾಟ್ ಸೋಲಾರ್ ಹಾಗೂ ಪವನ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಬೇಸಿಗೆಯಲ್ಲಿ ವಿದ್ಯುತ್ ಕೊರತೆಯ ಪ್ರಶ್ನೆಯೇ ಉದ್ಭವಿಸದು ಎಂದು ಅಭಿಪ್ರಾಯಪಟ್ಟಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಪಾರ್ಟ್ ಟೈಂ ಕೆಲಸ ಇದೆ
ರೆಡಿಮೇಡ್ ಅಂಗಡಿಗೆ ಹೆಲ್ಪರ್, ಸೇಲ್ಸ್‌ಗರ್ಲ್ ಮಾತ್ರ 30 ವರ್ಷ ಒಳಗೆ
9.30 am to 3pm - 1 Post
2.30 pm to 8pm - 1 Post
4.00 pm to 8.30pm - 1 Post
ಅನುಭವ ವಿದ್ಯಾರ್ಹತೆ ಬೇಕಿಲ್ಲ, ಅಗ್ರಹಾರ, ಬಸವೇಶ್ವರ ರಸ್ತೆ, 5ನೇ ಕ್ರಾಸ್
9591327746

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ 14000ದಿಂದ 16000, (ESI, PF,ಸೌಲಭ್ಯ ಇರುತ್ತದೆ)
8050699742

ತಕ್ಷಣ ಬೇಕಾಗಿದ್ದಾರೆ
ಮೈಸೂರು, ಬೆಂಗಳೂರು ಭಾಗಗಳಲ್ಲಿ ಕಂಪನಿ, ಶೋರೂಂ, ಫ್ಯಾಕ್ಟರಿ ಕೆಲಸಕ್ಕೆ ಯುವತಿ, ಯುವಕರು, ಸಂಬಳ, ವಸತಿಯೊಟದೊಂದಿಗೆ 18,000/– ದಿಂದ 26000/– ವಿದ್ಯಾರ್ಹತೆ ಅನುಭವ ಬೇಕಿಲ್ಲ.
9353497350

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

WANTED
ACCOUNTS EXECUTIVE
Freshers / Experienced
Tally Knowledge Must
Ph No.: 9035000016
Email: epowerele@gmail.com
www.epowerelectricals.com

SHOP FOR SALE
Plumbing, Electrical, Hardware Ready Shop for sale at prime location of Hebbal.
Total 16,00,00/- including 3,00,00/- of advance
8884073366

YOUNG MIND TUTORIALS
New Batches Starts
Coaching for Banking NEET/KSET
6360679934/8746952515

ಸುವರ್ಣ ಯಾತ್ರ
24/05/22 6 ದಿನಗಳ ಕಾಶಿ ಪ್ರವಾಸ, ಪ್ರಯಾಗ್‌ರಾಜ್, ಗಯಾ ಬುದ್ಧಗಯಾ, ಶ್ರೀ ಬಾಬಾ ವೈದ್ಯನಾಥ್ 28/05/22 9 ದಿನಗಳ ಪುರಿ ಜಗನ್ನಾಥ ಹಾಗೂ ವಿಶಾಖಪಟ್ಟಣ ಪ್ರವಾಸ, ಭುವನೇಶ್ವರ, ಕೊಣಾರ್ಕ ಸೂರ್ಯ ದೇವಾಸ್ಥಾನ, ಅರಕುವ್ಯಾಲಿ, ಬೊರ್ರ ಕೇವ್ಸ್ 02/6/22 4 ಜ್ಯೋತಿರ್ಲಿಂಗದೊಂದಿಗೆ ಮಧ್ಯಪ್ರದೇಶ ಹಾಗೂ ಗುಜರಾತ್ ಪ್ರವಾಸ 9ದಿನಗಳು
9019462508
9008381022

ನಿಮ್ಮ ಮನೆಯಲ್ಲಿ ನಲ್ಲಿ ಕೆಲಸ,
ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸ ತೊಂದರೆ ಇದ್ದರೆ... ಕರೆ ಮಾಡಿ
9035012579
8151035074

ಜಮೀನು ಮಾರಾಟಕ್ಕಿದೆ
17.04 ಗುಂಟೆ ಜಮೀನು ಮಾರಾಟಕ್ಕಿದೆ. ahad ಸಿಟಿ ಪಕ್ಕ ಫೋರಮ್ ಮಾಲ್ ನಿಂದ 8.3 ಕಿ.ಮೀ
7892565278

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ಓವೆನ್, LED, LCD, AC Sales & Service
Contact: Srinivas
9379699229

WANTED
Security Field Officer
Professional Experience Security Field Officer (5 years) for Nanjangud & Kadakola Industrial Area.
Interested candidates may
Contact:
9108100117 / 9035269781

REKHA'S SALON & MAKEUP STUDIO
Required Ladies Saloon Service Person
Min 1 to 2 yrs experience, Quick Joining, will get great benefits
J.P. Nagar, Goblimara Stop,
Timing 10.30 to 7pm.
Contact: 9900745780
Great Opportunity, Don't Miss It

HIRING MONTESORI TEACHERS
Good in English, any Degree, Freshers can also apply. Female Candidates only,
ABC Montesori
Vijayanagar 4th Stage, Mysore
Ph: 8904783107 / 8884970282
ALSO NEED AYA, nearby Hinkal, Mysore

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ KRS Road ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಸ್ಟೋರ್ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ಸಂಬಳ: 16,000/-(8 Hours), ಮೊಬೈಲ್: 45 ವರ್ಷದ ಒಳಗೆ, ಸಂದರ್ಶನಕ್ಕಾಗಿ ಸಂಪರ್ಕಿಸಿ:
9620667819 / 9880727819

WANTED TEACHERS
JNANAJYOTHI IDYALAYA.HPS. Beerihundi.Mysore.
ENGLISH MEDIUM.
Academic co-ordinator, English, NST, PT Teachers wanted. contact:
9845390377
8197057626

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಯೊಂದಕ್ಕೆ ತಕ್ಷಣ ಮಹಿಳಾ ಕಾರ್ಮಿಕರು ಬೇಕಾಗಿದ್ದಾರೆ. ಮಹಿಳೆಯರಿಗೆ 18 ರಿಂದ 40 ವರ್ಷ ವಯೋಮಿತಿ. ವಿದ್ಯಾರ್ಹತೆ - ಕನಿಷ್ಠ ಓದಲು/ಬರೆಯಲು ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5300
ಸ್ವಂತದ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುವುದು. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ಗಳಲ್ಲಿ ಗಿರವಿಯಿಟ್ಟ ಚಿನ್ನ ... ಉಳಿದ ಹಣವನ್ನು ತಕ್ಷಣ ನೀಡಲಾಗುವುದು ...
(T&C) ಸಂಪರ್ಕಿಸಿ– S.M ಗೋಲ್ಡ್ ಫೈನಾನ್ಸ್
8050518881

URGENTLY REQUIRED
MARKETING EXECUTIVES
10 Nos (Male)
TELECALLING EXECUTIVES
10 Nos (Female)
Attractive Salary+Incentives +other benefits
Contact: 7019012892

ತಕ್ಷಣ ಬೇಕಾಗಿದ್ದಾರೆ
1) ಸೂಪರ್ ವೈಸರ್ – ಬಿ.ಬಿ.ಎ / ಬಿಕಾಂ ಆಫೀಸ್ ಮತ್ತು ಫ್ಯಾಕ್ಟರಿಗಾಗಿ
2) ಡ್ರೈವರ್ – (ಹೆ ಗೂಡ್ಸ್ ವಾಹನ ಲೈಸೆನ್ಸ್ ಹೊಂದಿರಬೇಕು). ಆಕರ್ಷಕ ಸಂಬಳ
STAR Al-Hamza Group
ಎಸ್.ಎಮ್ ಸ್ಟಾರ್ ಫೀಡ್ಸ್ ಪ್ರೈಲಿ, ನಾಗಮಂಗಲ
9663001850 / 9739525293

WANTED
10th or PUC passed 18 to 26 years Girls as HELPERS for a cake making shop in Gokulam.
7259757637

ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಯುವಕರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 35 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ವಸತಿ ನೀಡಲಾಗುವುದು. ESI ಮತ್ತು PF ಸೌಲಭ್ಯವಿರುತ್ತದೆ. (ಯಾವುದೇ ಶುಲ್ಕವಿರುವುದಿಲ್ಲ) ಸಂಪರ್ಕಿಸಿ:
8277047300

ಮೈಸೂರಿನಲ್ಲಿ ಉದ್ಯೋಗ
(Consultancy ಅಲ್ಲ) ಕುವೆಂಪುನಗರದಲ್ಲಿರುವ AW Group of ಕಂಪನಿಗೆ ಗ್ರಾಮೀಣ + ನಗರದ 328 ಅಭ್ಯರ್ಥಿಗಳು ಬೇಕಾಗಿದ್ದಾರೆ. (Freshers ಗೆ ಹೆಚ್ಚಿನ ಆದ್ಯತೆ). ಕೂಡಲೇ ಕರೆ ಮಾಡಿ. ವಿದ್ಯಾರ್ಹತೆ: SSLC (Pass), PUC, ITI, Any Degree, JOC, Dip, MBA etc. ತಿಂಗಳಿಗೆ 27,500–35,400+ಉಚಿತ ವಸತಿ, ವಯೋಮಿತಿ: 18–35 Years
ಸ್ಥಳ:ಗೋಲ್ಡ್ 9663481922
7349699460

ಮನೆ ಮತ್ತು ನಿವೇಶನ ಮಾರಾಟಕ್ಕಿದೆ
ವಾಸ್ತುಪ್ರಕಾರ ನಿರ್ಮಿಸಿರುವ 35x15 ಅಳತೆಯ 3 ಅಂತಸ್ತಿನ ಮನೆ, 17 ವರ್ಷ 34 ಸಾವಿರ ಬಾಡಿಗೆ ಬರುತ್ತದೆ ಸ್ಥಳ: NIE ಕಾಲೇಜ್ ಹತ್ತಿರ, ವಿದ್ಯಾರಣ್ಯಪುರಂ, ಮೈಸೂರು. ಮತ್ತು 30X40 ಅಳತೆಯ 2 ನಿವೇಶನ, ಸ್ಥಳ: ನಾಡನಹಳ್ಳಿ ಪಕ್ಕ, ಜೆ.ಪಿ.ನಗರ, ಮೈಸೂರು. ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ ಕೊಳ್ಳುವವರು ಮಾತ್ರ ಸಂಪರ್ಕಿಸಿ:
9900299714

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಬೇಕಾಗಿದ್ದಾರೆ
Contact:
9741666701
8884837174

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ಜೊತೆಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

CHANGE OF NAME
I, Smt. M.B. Vijayalakshmi, W/o T. Raghunath aged, 67 years, residing at # 2937, 4th Main, V.V. Mohalla, Mysuru-570002, after my marriage I have changed my name from M.B. Vijayalakshmi to VIJAYALAKSHMI RAGHUNATH on my own free will vide affidavit sworn before Notary Vasudeva on 16.04.2022.
Sd/- Vijayalakshmi Raghunath

CHANGE OF NAME
I, MAYURI NALAMANGALAM ADITHYA, (new name) wife of Sri. Adithya Nagaraj N.R., aged about 27 years, residing at No. 10/2, Temple Road, V.V. Puram, Mysuru, Karnataka-570002, renounce and abandon the use of my former name of GAMPA MAYURI / MAYURI GAMPA, out of my own free will and desire, I hereby declare that, henceforth my name shall be MAYURI NALAMANGALAM ADITHYA, vide Notarized Affidavit dated 19-04-2022 before Notary Smt. Geetha R., Reg. No. 5579, Mysuru.
Sd/- MAYURI NALAMANGALAM ADITHYA
Date : 19-04-2022

ಹೌಸಿಂಗ್ ಲೋನ್ (ಮನೆ ಸಾಲ)
5 ಲಕ್ಷದಿಂದ 5 ಕೋಟಿವರೆಗೆ 9 & 11A, 11B, ಗ್ರಾಮಠಾಣ, ಪುರಸಭೆ, ಕಾರ್ಪೋರೇಷನ್, ಮುಡಾ ನಿವೇಶನಗಳ ಮೇಲೆ ಶೀಘ್ರ ಮತ್ತು ಆರ್.ಟಿ.ಸಿ ಮನೆ ಕಟ್ಟಲು ಸಾಲ, ಮನೆ ಮೇಲೆ ಸಾಲ (LAP), ಮನೆ ನವೀಕರಣ ಸಾಲ ದೊರೆಯುತ್ತದೆ. ಸಂಪರ್ಕಿಸಿ:
ಮಂಜುನಾಥ್: 7204646444
ಮಹೇಶ್: 9686062014

ಮನೆಯಿಂದಲೇ ಕೆಲಸ
(ಟಾರ್ಗೆಟ್ ಇರುವುದಿಲ್ಲ) ಕನ್ನಡ, ಇಂಗ್ಲೀಷ್ ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡೆಟಾ ಎಂಟ್ರಿ ಕೆಲಸಗಳು ಗಳಿಸಿ ತಿಂಗಳಿಗೆ 15000 ದಿಂದ 24000/- ಗೃಹಿಣಿಯರು, ವಿದ್ಯಾರ್ಥಿಗಳು ನಿವೃತ್ತರು
ದಿವ್ಯ ಎಂಟರ್‌ಪ್ರೈಸಸ್
8904253623

SDJ JEWELERS
ಪುರುಷರು ಮತ್ತು ಮಹಿಳೆಯರು
Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

30X40 SITE
AVAILABLE in TRIMURTHY NAGARA. WELL DEVELOPING AREA NEAR BRAHMA KUMARI, HUNSUR ROAD.-20 LAKHS
LOAN AVAILABLE
CONTACT
9886697052

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www.imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಕೆಲಸ ಮಾಡಲು
1. ಮ್ಯಾನೇಜರ್
2. ಸ್ಟಿವರ್ಡ್ (ಹುಡುಗರು/ಹುಡುಗಿಯರು)
3. ಕ್ಯಾಪ್ಟನ್
4. ಲೇಡಿ ಕ್ಯಾಷಿಯರ್
5. ಕ್ಲೀನಿಂಗ್‌ಗೆ ಹುಡುಗರು
ಅರ್ಬನ್ ಹೋಟೆಲ್ ಲೋಟೋಸ್ ಕಿಚನ್
9845111678

SITES FOR SALE
20 x 30 - 13.20 Lakhs
30 x 40 - 26.40 Lakhs
Bank Loan upto 75%, Ready for Registration, near Gurur Bus Stop, Ramabainagar Mysore
DTCP approved (Corporation limits)
1.5 Kms from JP Nagar Ring Road
8660105902

ವೃದ್ಧಾಶ್ರಮ
ಕುಟುಂಬ ವಿಭಜನೆ, ಮಲಗಲು ಉತ್ತಮ ಹಾಸಿಗೆ ಮಂಚ, ಬಿಸಿನೀರಿನ ಸ್ನಾನ ದಿನಕ್ಕೆ 3 ಬಾರಿ ಊಟ, 2 ಬಾರಿ ಕಾಫಿ, ನೋಡಲು ಟಿ.ವಿ. ಹಾಗೂ ಉತ್ತಮ ಪರಿಸರವುಳ್ಳ ವೃದ್ಧಾಶ್ರಮಕ್ಕೆ ಆರ್ ವಯೋವೃದ್ಧರನ್ನು ಸೇರಿಸಿಕೊಳ್ಳಲಾಗುತ್ತದೆ. (ಷರತ್ತುಗಳು ಅನ್ವಯ) ಮತ್ತು ಅಡುಗೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ:
8197804473

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

SRI VINAYAKA CENTRAL SCHOOL, TARIPURA
WANTED TEACHERS
Trained & experienced graduate teachers required for all subjects, including computer, Arts & Craft & NST for Primary and High School. Free transport facility available. Hostel facility available from 7th to 10th Std. for boys.
8971577685 / 9980631121
Send your resume through SMS

ಮೊಬೈಲ್‌ನಲ್ಲಿ ಕೆಲಸ
ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮೂಡಾ ನಿವೇಶನ ಮಾರಾಟಕ್ಕಿದೆ
30x40, E/F
ವಸಂತನಗರ
(Title Deed) ಹೊಂದಿದೆ
ಮೊ: 9448369421

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಮಾರಾಟಕ್ಕಿದೆ
ನಾಲ್ಕು ಎಕರೆ ಜಮೀನು ಸಿಂಗಾನಲ್ಲೂರು ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.
7676983686
9611966064

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
SSLC ಪಾಸ್ / ಫೇಲ್, ITI any Trade ಹುಡುಗರು ಬೇಕಾಗಿದ್ದಾರೆ. ಹೂಟಗಳ್ಳಿ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
Salary ಸಂಬಳ: 14000 ರಿಂದ 18000 ಸಾವಿರ ಇರುತ್ತದೆ. ಸೌಲಭ್ಯತೆ: PF & ESI, Canteen ಸೌಲಭ್ಯವಿರುತ್ತದೆ, ಸಂಪರ್ಕಿಸಿ:
9591977540 / 7019380847

WANTED
Receptionist (Male/Female), Room Boys, Supervisor, Cashier (Male/Female)
Full time & Part time
Attractive Salary, PF & ESI with food and accommodation
Contact: Parklane Hotel
2720, Harsha Road, Mysore - 01


ಬೇಕಾಗಿದ್ದಾರೆ
ಗೋಲ್ಡ್ ಕಂಪನಿಗೆ
Tele Callers ಬೇಕಾಗಿದ್ದಾರೆ
(ಹುಡುಗಿಯರು ಮತ್ತು ಮಹಿಳೆಯರಿಗೆ ಮಾತ್ರ)
ಯಾವುದೇ ವಿದ್ಯಾರ್ಹತೆ ಅಗತ್ಯವಿಲ್ಲ
8792140484

ಬತ್ತಿಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬತ್ತಿಲು ಸಾಂಬ್ರಾಣಿಯನ್ನು ತಯಾರಿಸಿ ಮನೆಯಲ್ಲೇ ಮರಳಿಸಿ, ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ, ತರಬೇತಿ ಉಚಿತ.
7406375196
9880548596

WANTED
- Computer Operator
- Office Boy

9008027304
9008027300

ಮಂಟಪ ಮನೆ



ನಮ್ಮಲ್ಲಿ ಬೀಟೆ, ಹಲಸು, ಸಾಗ್ವಾನಿ ಮರಗಳಿಂದ ತಯಾರಾದ ಮಂದಾಸನ, ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಶ್ರೀನಗರ, ಮೈಸೂರು
9448207634 / 9036742526

ಮನೆ ಮಾರಾಟಕ್ಕಿದೆ
(16x60) 16x30, 16x30, 16x30, 16x30 ನಲ್ಲಿ ಕಟ್ಟಿರುವ ನಾಲ್ಕು ಮನೆಗಳು (1st Floor & Ground Floor ನಲ್ಲಿ) Bookers welcome.
Borewell & Solar available
9880496212
9591614440

ಛತ್ರ ಖಾಲಿ ಇದೆ
ದಿನಾಂಕ: 11–05–2022 ಮತ್ತು 12–05–2022 ರಂದು ಶಿವಶಕ್ತಿ ಛತ್ರ ಖಾಲಿ ಇರುತ್ತದೆ. ಬಂಬೂ ಬಜಾರ್, ಮೈಸೂರು
9448390647

HOME LOAN
11B, 9/11A ಕಾರ್ಪೊರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

ಟೈಲರ್‌ಗಳು ಬೇಕಾಗಿದ್ದಾರೆ
ವೇತನ ರೂ.15,000/– ರವರೆಗೆ ಸಂಪರ್ಕಿಸಿ:
9342118153

TEACHERS REQUIRED
SUBHODA HIGHER PRIMARY SCHOOL
No. 670, 'M' Block, Kuvempunagar, Mysore. (English Medium)
English, Maths, Science, Montessori. Contact:
8904040406/9611673845
Please drop your resume

WANTED
Security Field Officer
(Male Candidate)
Freshers & Ex-Serviceman can also apply with good communication skill. Interested candidates send your CV to:
Email: nimishpvtltd@gmail.com
Contact No.: 9513999755

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಫೈನಾನ್ಸ್ ಲಿಮಿಟೆಡ್, ಅಲನಹಳ್ಳಿ ಗೋಡೌನ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಸೆಕ್ಯೂರಿಟಿ ಗಾರ್ಡ್ಸ್ – (ಪುರುಷರು),
Education: SSLC / PUC, Age-below 45 years, ESI & EPF ಸೌಲಭ್ಯವಿರುತ್ತದೆ. ಸಂಪರ್ಕಿಸಿ.
9739166772 / 9739199355
9844235981

ಮೈತ್ರಿ ಅಸೋಸಿಯೇಟ್ಸ್
ಪರ್ಸನಲ್ ಲೋನ್, ಬಿಸಿನೆಸ್ ಲೋನ್, ಆಸ್ತಿ ಮೇಲೆ ಸಾಲ, ಗೃಹ ನಿರ್ಮಾಣ ಸಾಲ, ವಾಹನಗಳ ಮೇಲೆ ಸಾಲ, ಸೈಟ್ ಖರೀದಿಸುವುದಕ್ಕೆ, ಮನೆ ಖರೀದಿಸುವುದಕ್ಕೆ ಇನ್ನು ಮುಂತಾದ ಸಾಲಗಳನ್ನು ಅಧಿಕೃತ ಬ್ಯಾಂಕುಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಕೊಡಿಸಲಾಗುವುದು.
7353853281 / 9845418798

ಭಾವನಾ ವೃದ್ಧಾಶ್ರಮ
ಕುಟುಂಬ ವಿಭಜನೆ, ಮಲಗಲು ಉತ್ತಮ ಹಾಸಿಗೆ, ಮಂಚ, ಬಿಸಿನೀರಿನ ಸ್ನಾನ ದಿನಕ್ಕೆ 3 ಬಾರಿ ಊಟ, 2 ಬಾರಿ ಕಾಫಿ, ನೋಡಲು ಟಿ.ವಿ. ಹಾಗೂ ಉತ್ತಮ ಪರಿಸರವುಳ್ಳ ಭಾವನಾ ವೃದ್ಧಾಶ್ರಮಕ್ಕೆ ಅರ್ಹ ವಯೋವೃದ್ಧರನ್ನು ಸೇರಿಸಿಕೊಳ್ಳಲಾಗುತ್ತದೆ. (ಷರತ್ತುಗಳು ಅನ್ವಯ) ಸಂಪರ್ಕಿಸಿ:
9632831897 / 9448483338
9448193338

30x40 ಸೈಟು ಮಾರಾಟಕ್ಕಿದೆ
ವಿಜಯನಗರ 4ನೇ ಹಂತ ಹತ್ತಿರ, ಪ್ರೀತಿ ಬಡಾವಣೆ ಪಕ್ಕ, ಬೋಗಾದಿ ಪಟ್ಟಣ ಪಂಚಾಯಿತಿ ನಮೂನೆ – 3
9620563026

ಮೈಸೂರು ಮ್ಯಾರೇಜ್ ಲಿಂಕ್ಸ್
1) ಬ್ರಾಹ್ಮಣ 36 MA, B.Ed ಲೆಕ್ಚರರ್ ಕನ್ಯೆಬೇಕಾಗಿದ್ದಾರೆ
2) ಲಿಂಗಾಯತ 48 MBB & MS ವಿಧುರ
3) ಲಿಂಗಾಯತ 50 BE ಅಮೇರಿಕ ಡೈವರ್ಸ್
4) ಅರಸ್‌ನಾಯಕ 50 MA ಕನ್ಯೆಬೇಕಾಗಿದೆ
5) ಒಕ್ಕಲಿಗ 50 ಕನ್ಯೆಬೇಕಾಗಿದ್ದಾರೆ ವಿಧುರ
ಸುಂದರ ಶ್ರೀಮಂತ ಕನ್ಯೆಬೇಕಾಗಿದ್ದಾರೆ ವರಗಳಿಗೆ ವಧು, ವಿಧವೆ, ವಿಚ್ಛೇದಿತರು ನೇರ ಸಂಪರ್ಕಿಸಿ, ಜಾತಿ ಅಭ್ಯಂತರವಿಲ್ಲ ಜಾಗರೂಕರಾಗಿ ಮೈಸೂರು
6361740552

SNS ENTERPRISES COMPUTER COURSE
SUMMER OFFER
Basic, Tally, DTP Only 2999/-
C,C++, Java Only 2999/-
Saraswathipuram, Mysore
9538483399

ಸೈಟ್ ಮಾರಾಟಕ್ಕಿದೆ
ಭೂಮಿಕಾ ಲೇಔಟ್, ಮೈದನ ಹಳ್ಳಿ, ಇಲವಾಲ ಹೋಬಳಿ, ಕಾರ್ನರ್ ಸೈಟ್:
30X40 ಮಾರಾಟಕ್ಕಿದೆ.
ಮೊ: 8088008009

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಕೆಲಸ ಮಾಡಲು ನಾರ್ತ್ ಇಂಡಿಯನ್ ಹಾಗೂ ಚೈನೀಸ್ ಭಟ್ಟರು ಮತ್ತು ಕೌಂಟರ್‌ಗೆ ಹುಡುಗರು ಬೇಕಾಗಿದ್ದಾರೆ.
7406666506

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿ ಕೊಡಲಾಗುತ್ತದೆ.
ಒಂದು ಚದರಕ್ಕೆ 180000/– ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361 / 9380885787

2 SITES FOR SALE
(30x50) @ Gomatagiri (Near Manuganahalli) Mysore - Yelwala Road, DTCP Approved 7.5 Lakhs
9538839926

PUBLIC NOTICE
That I, Priya Palachanda, W/o Sri. Madappa Palachanda, aged about 50 years, residing at Door No. 177, Gayathripuram, 2nd Stage, Udayagiri, Mysuru-570019, has sworn to an affidavit on 08-10-2021 before Smt. P. Geetha, Notary Public, Govt. of India, Mysuru regarding my name that I am also known as Priya Umesh. Priya Palachanda and Priya Umesh is none other than me only. Hence forth I am known as Priya Palachanda and Priya Umesh. This is for the notice of the general public.
Mysuru. Date: 19-04-2022.
Sd/- PRIYA PALACHANDA & ALSO PRIYA UMESH

WANTED PIGMY AGENTS
Attractive interest Rate on FD upto 11.50% PA
SHARES are opened for more details contact
MOB: 9036967266
SAI MULTISTATE CREDIT CO-OPERATIVE SOCIETY
3rd Main, 5th Cross, Jayanagar, Mysore

TO-LET
2 BHK HOUSE
CH-12, 6th Main Road, 3rd Cross, Saraswathipuram
MOB: 9880084149
9845105620

WE ARE HIRING
For the Post of
Sales Manager
Sri Sai Ram Furniture & Interior
Authorized Distributor of OKRA Furnitures,
Vijayanagar 2nd Stage, Mysore
Experience: 2 to 3 years.
9844111347 / 0821-4286890

ಮೈಸೂರಿನ ಹೆಸರಾಂತ ಕಾರ್ಖಾನೆಗಳಲ್ಲಿ
ಕೆಲಸ ಮಾಡಲು (SSLC, PUC Pass/Fail, ITI Fitters, Mechanical Maintenance, CNC and VMC Operators, Quality Inspector ತಕ್ಷಣ ಬೇಕಾಗಿದ್ದಾರೆ. ESI, PF and Canteen ಸೌಲಭ್ಯವಿರುತ್ತದೆ.
ಸಂಪರ್ಕಿಸಿ: 8553934317 / 8660196479 / 8970775753

ಪ್ರಮಾಣ ಪತ್ರ
ಚುಂಚಯ್ಯ ಸಿ.ಎಂ (Chunchaiah C.M.) ಆದ ನಾನು ನಂ. 176, ಇಮ್ಮಾವು ಗ್ರಾಮ, ಕಡಕೊಳ ಅಂಚೆ, ಮೈಸೂರು ... ನನ್ನ ಮಗನ ಹೆಸರನ್ನು ಲಿಖಿತ್ ಸಿ. (Likhith.C) ಎಂದು ಲಿಖಿತ್ ರಾಮ್ ಸಿ. (Likhith Ram.C) ಎಂದು ನೋಟರಿ ಸಿ.ಆರ್. ... ದಿನಾಂಕ 11.02.2022ರಂದು ಬದಲಾಯಿಸಿ ಪ್ರಮಾಣೀಕರಿಸುತ್ತೇನೆ. ಸಹಿ/– ಚುಂಚಯ್ಯ ಸಿ.ಎಂ

WORK FROM HOME
ಮನೆಯಲ್ಲಿ ಕುಳಿತು ಕೆಲಸ ನೋ ಟಾರ್ಗೆಟ್, ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ, ವಾರಕ್ಕೆ ಗಳಿಸಿ 3,000 ರಿಂದ 5,000 (ಕೊರಿಯರ್ ಸೌಲಭ್ಯವಿದೆ)
9535248054 / 7353369458

ಕಳೆದಿದೆ
ದಿನಾಂಕ:10–04–22 ರಂದು ನೇತ್ರಾವತಿ ಕೆ.ಜಿ ಆದ ನಾನು ಚಿನಕುರಳಿಯಿಂದ ಮೈಸೂರಿಗೆ ಪ್ರಯಾಣಿಸುವಾಗ ಬಸ್ಸಿನಲ್ಲಿ ನನ್ನ ಮನೆಯ ಬೇಲಾಡು ಗ್ರಾಮದ ಸರ್ವೆ ನಂ.364 ರ ನಿವೇಶನ ಸುಮಾರು 3ರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮನೆ ಕಂದಾಯ ಪತ್ರ ಕಳೆದಿರುತ್ತದೆ. ಸಿಕ್ಕಿದವರು ನನ್ನ ಮೊಬೈಲ್ ನಂಬರ್ ಸಂಪರ್ಕಿಸಿ ಕೊಡಬೇಕಾಗಿ ವಿನಂತಿ. ನೇತ್ರಾವತಿ ಕೆ.ಜಿ.
9686474730

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಹಿ ಮಾಂತ್ರಿಕರು ಪಂ.ವಿಶ್ವನಾಥಸ್ವಾಮಿ
ಮೊ: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ವಿದ್ಯೆ, ವ್ಯಾಪಾರ, ಉದ್ಯೋಗ, ಮದುವೆ ... ಪರಿಹಾರ ...
Smart) ಹತ್ತಿರ, ATM ಪಕ್ಕ, (Reliance ... (KSRTC) ಸಬರ್ಬನ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ ವಿಶ್ವಾಸಾರ್ಹತೆಯ ಬಗ್ಗೆ ಓದುಗರು ಅವುಗಳಿಗೆ ಹಣ, ಮನೆ ಮಾಡುವ ... ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ನೀರಿಗಾಗಿ ಕಾಂಗ್ರೆಸ್ ಮಾಡಿದ ಹೋರಾಟ ಜನರಿಗೆ ಗೊತ್ತಿದೆ

ಜನತಾ ಜಲಧಾರೆ ಕಾರ್ಯಕ್ರಮ ಉದ್ಘಾಟಿಸಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ



ಮಂಡ್ಯ, ಏ.20(ಮೋಹನ್‌ರಾಜ್)– ನೀರಿಗಾಗಿ ಕಾಂಗ್ರೆಸ್ ಮಾಡುತ್ತಿರುವ ಹೋರಾಟದ ಬಗ್ಗೆ ಜನರಿಗೆ ಗೊತ್ತಿದೆ. ಕಾವೇರಿ, ಮಹದಾಯಿ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿರುವುದು ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೇ. ಇದೀಗ ಅಧಿಕಾರ ಹಿಡಿಯಲು ಕಾಂಗ್ರೆಸ್ ಮೇಕೆದಾಟು ಪಾದಯಾತ್ರೆ ಮಾಡುತ್ತಿರುವುದು ರಾಜ್ಯದ ಜನತೆಗೆ ಗೊತ್ತಿರದ ವಿಚಾರವೇನಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಕೈ ನಾಯಕರನ್ನು ಕುಟುಕಿದರು.

ಬುಧವಾರ ನಗರದ ಖಾಸಗಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಜನತಾ ಜಲಧಾರೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯಕ್ಕೆ ನೀರಿನ ವಿಚಾರದಲ್ಲಿ ಅನ್ಯಾಯವಾದಾಗ ಜನರ ಪರ ನಿಂತಿದ್ದು, ಪ್ರಾದೇಶಿಕ ಪಕ್ಷ ಜೆಡಿಎಸ್. ನಾನು ಸಂಸತ್‌ನಲ್ಲಿ ನೀರಿನ ಬಗ್ಗೆ ಹೋರಾಟ ಮಾಡಿದರೆ, ನಮ್ಮ ಪಕ್ಷದ ಮುಖಂಡರು ಬೀದಿಗಿಳಿದು ಹೋರಾಡಿದ್ದಾರೆ. ಸಂಸತ್‌ನಲ್ಲಿ ರಾಜ್ಯದ ಜನರಿಗೆ ನ್ಯಾಯ ಒದಗಿಸಲು ಶಕ್ತಿ ಮೀರಿ ಹೋರಾಡಿದ್ದೇನೆ ಎಂದು ಹೇಳಿದರು.

ಕಾವೇರಿ, ಮಹದಾಯಿ, ಕೃಷ್ಣಾ ಸೇರಿದಂತೆ ನದಿ ನೀರು ಹಂಚಿಕೆ ವಿಚಾರ ಬಂದಾಗ ಹಿಂದಿ ನಿಂದಲೂ ರಾಜ್ಯಕ್ಕೆ ನಿರಂತರವಾಗಿ ಅನ್ಯಾಯವಾಗುತ್ತಲೇ ಬಂದಿದೆ. ಇದು ಮುಂದುವರೆಯಬಾರದೆಂದು ಜೆಡಿಎಸ್ ದೃಢ ನಿಲುವು ಕೈಗೊಂಡು ಹೋರಾಟ ನಡೆಸುತ್ತಿದ್ದು, ಜಲಧಾರೆ ಯಶಸ್ವಿಗೆ ಪ್ರತಿಯೊಬ್ಬರೂ ಸಹಕರಿಸಿ ಎಂದು ಮನವಿ ಮಾಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, 2023ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಕನಿಷ್ಠ 123 ಸ್ಥಾನ ಕೊಟ್ಟು ಸ್ವತಂತ್ರ್ಯವಾಗಿ ಅಧಿಕಾರ ನೀಡಿ. ನೆಲ, ಜಲ, ಭಾಷೆ ವಿಚಾರದಲ್ಲಿ ಪಕ್ಷ ನಿಮ್ಮ ಪರ ಇರಲಿದೆ. ಮಂಡ್ಯ ಜಿಲ್ಲೆಯ ಮೇಲೆ ದೇವೇಗೌಡರಿಗೆ ವಿಶೇಷ ಕಾಳಜಿ ಇದ್ದು, ಅವರ ನೆಲ, ಜಲ, ಭಾಷೆಯ ಹೋರಾಟಕ್ಕೆ ನಿಮ್ಮ ಆಶೀರ್ವಾದ ಇರಬೇಕು. ಜೆಡಿಎಸ್ ಅನ್ನು ಬೆಂಬಲಿಸಬೇಕೆಂದು ಕರೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ರಾಜ್ಯದ ನೀರಾವರಿ ಅಭಿ ವೃದ್ಧಿಗೆ ಶಕ್ತಿ ತುಂಬಿದ್ದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಸಮಗ್ರ ನೀರಾವರಿ ಯೋಜನೆ ಜಾರಿಗೆ ತಂದವರು ಸಹ ದೇವೇಗೌಡರು. ಅವರು ಪ್ರಧಾನಿಯಾಗಿದ್ದಾಗ 10 ಸಾವಿರ ಕೋಟಿ ಹಣವನ್ನು ನೀರಾವರಿಗೆ ಮೀಸಲಿಟ್ಟಿದ್ದರು. ಅಂತಹ ನೀರಾವರಿ ಹರಿಕಾರ ಇಂದು ಜಲಧಾರೆ ಹೆಸರಿನಲ್ಲಿ ರಾಜ್ಯಕ್ಕೆ ದಕ್ಕುವ ನೀರಿಗಾಗಿ ಹೋರಾಟ ನಡೆಸುತ್ತಿದ್ದು, ಅವರಿಗೆ ನೀವು ಪ್ರೋತ್ಸಾಹಿಸಬೇಕೆಂದು ಮನವಿ ಮಾಡಿದರು.

ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾಖಾನ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಧರ್ಮ ಸಂಘರ್ಷದಲ್ಲಿ ತೊಡಗಿಕೊಂಡು ತಮ್ಮ ಜವಬ್ದಾರಿಯನ್ನು ಮರೆತಿವೆ. ಕೇವಲ ಜನರನ್ನು ಧರ್ಮದ ಹೆಸರಿನಲ್ಲಿ ಎತ್ತಿಕಟ್ಟಿ, ಬಡವರು, ರೈತರ ಜೀವನದ ಜೊತೆಗೆ ಆಟವಾಡುತ್ತಿರುವ ಎರಡು ಪಕ್ಷದ ಧೋರಣೆಯನ್ನು ಜನ ಅರ್ಥ ಮಾಡಿಕೊಳ್ಳಬೇಕು. ಇಬ್ಬರಿಗೂ ತಕ್ಕ ಪಾಠ ಕಲಿಸಿ, ಧರ್ಮ ಸಂಘರ್ಷವನ್ನು ಬದಿಗೊತ್ತಿ, ಜನರ ಅಭಿವೃದ್ಧಿಗೆ ಪಣ ತೊಟ್ಟಿರುವ ದೇವೇಗೌಡ, ಕುಮಾರಸ್ವಾಮಿ ಸಾರಥ್ಯದ ಜನತಾದಳವನ್ನು ಪ್ರೋತ್ಸಾಹಿಸಬೇಕೆಂದು ಕರೆ ನೀಡಿದರು.

ವೇದಿಕೆಯಲ್ಲಿ ಶಾಸಕ ಎಂ.ಶ್ರೀನಿವಾಸ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು, ಉಪಾಧ್ಯಕ್ಷೆ ಇಶ್ರತ್ ಫಾತಿಮಾ, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು, ಮುಖಂಡರಾದ ಮಂಜುಳಾ ಉದಯಶಂಕರ್, ಯೋಗೇಶ್, ಸಾತನೂರು ಜಯರಾಮ್, ತಿಮ್ಮೇಗೌಡ ಉಪಸ್ಥಿತರಿದ್ದರು.

ಮಂಡ್ಯ ಮುಡಾ ಅಧ್ಯಕ್ಷರಾಗಿ ಶ್ರೀನಿವಾಸ್ ಮರು ನೇಮಕ




ಮಂಡ್ಯ,ಏ.20(ಮೋಹನ್‌ರಾಜ್)– ಮಹತ್ವದ ಬೆಳವಣಿಗೆಯಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕ್ರೀಡೆ ಹಾಗೂ ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡರ ಪರಮಾಪ್ತ ಕೆ.ಆರ್.ಪೇಟೆಯ ಕೆ.ಶ್ರೀನಿವಾಸ್ ಮರು ಆಯ್ಕೆಯಾಗಿದ್ದಾರೆ.

ಕಳೆದ ನಾಲ್ಕೈದು ತಿಂಗಳಿನಿಂದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ದೊರೆಸ್ವಾಮಿ ಅವರನ್ನು ದಿಢೀರ್ ಎತ್ತಂಗಡಿ ಮಾಡಿದ್ದು, ಅವರ ಜಾಗಕ್ಕೆ ಕೆ.ಆರ್.ಪೇಟೆ ಶ್ರೀನಿವಾಸ್ ಅವರನ್ನು ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಕೆ.ಲತಾ ಆದೇಶ ಹೊರಡಿಸಿದ್ದಾರೆ.ಸಚಿವ ನಾರಾಯಣಗೌಡ ಆಪ್ತರಾಗಿದ್ದ ಶ್ರೀನಿವಾಸ್ ಅವರನ್ನು ಸ್ಥಳೀಯ ಸಂಸ್ಥೆ ಚುನಾವಣೆ ಮುಗಿದ ಕೆಲವೇ ದಿನಗಳಲ್ಲಿ ಅವರನ್ನು ಎತ್ತಂಗಡಿ ಮಾಡಿ ಅವರ ಜಾಗಕ್ಕೆ ಮಂಡ್ಯ ನಗರದ ಹಿರಿಯ ಬಿಜೆಪಿ ನಾಯಕ ದೊರೆಸ್ವಾಮಿ ಅವರನ್ನು ನೇಮಕ ಮಾಡಲಾಗಿತ್ತು.

ದೊರೆಸ್ವಾಮಿ 80 ವರ್ಷದ ಇಳಿ ವಯಸ್ಸಿನ ನಾಯಕರಾಗಿದ್ದು, ಮಂಡ್ಯ ಬಿಜೆಪಿ ಜಿಲ್ಲಾಧ್ಯಕ್ಷರಾಗಿ, ದಶಕಗಳಿಂದ ಬಿಜೆಪಿ ಪರ ದುಡಿಯುತ್ತಾ ಬಂದಿದ್ದರು. ಆದರೆ ದಿಢೀರನೇ ಅವರನ್ನು ಆಯ್ಕೆ ಮಾಡಿದ ಕೆಲವೇ ದಿನಗಳಲ್ಲಿ ಕೆಳಗಿಳಿಸಿ, ಈ ಹಿಂದೆ ಅಧ್ಯಕ್ಷರಾಗಿದ್ದ ಶ್ರೀನಿವಾಸ್ ಅವರನ್ನೇ ಮರು ನೇಮಕ ಮಾಡಲಾಗಿದೆ.

ಈ ಹಿಂದೆ ಶ್ರೀನಿವಾಸ್ ಮಂಡ್ಯ ನಗರದವರೇ ಅಲ್ಲವಾದ್ದರಿಂದ ನಗರದ ಅಭಿವೃದ್ಧಿ ಬಗ್ಗೆ ಅವರಿಗೆ ಗೊತ್ತಿಲ್ಲ. ಅಂತಹವರ ನೇಮಕ ಸಮಂಜಸ ಅಲ್ಲ ಎಂದು ನಗರ ಬಿಜೆಪಿ ಮುಖಂಡರಿಂದ ವಿರೋಧ ಕೇಳಿ ಬಂದಿದ್ದರಿಂದ ಅವರನ್ನು ಬದಲಾಯಿಸಲಾಗಿತ್ತು.ಬಳಿಕ ಕೆಲವೇ ವರ್ಷಗಳಲ್ಲಿ ಅವರ ಎತ್ತಂಗಡಿ ಆಗಿದ್ದರೂ ಕೂಡ ಮತ್ತೆ ನಾರಾಯಣಗೌಡರು ಪ್ರಭಾವ ಬಳಸಿ ತಮ್ಮ ಆಪ್ತನನ್ನು ಮುಡಾ ಅಧ್ಯಕ್ಷ ಗಿರಿಗೆ ತಂದು ಕೂರಿಸಲು ಯಶಸ್ವಿಯಾಗಿದ್ದಾರೆ.

ಈಜು ಕಲಿಯಲು ಹೋದ ಬಾಲಕ ಸಾವು



ನಾಗಮಂಗಲ,ಏ.20– ಈಜು ಕಲಿಯಲು ಹೋಗಿದ್ದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ತಾಲೂಕಿನ ಪಿ. ಚಿಟ್ಟನಹಳ್ಳಿ ಗ್ರಾಮದ ಬಳಿ ನಡೆದಿದೆ.

ಘಟನೆಯ ವಿವರ: ಲಾಳನಕೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುರೇಶ್ ಎಂಬವರು ಪಿ.ಚಿಟ್ಟನಹಳ್ಳಿ ಗ್ರಾಮದ ಕೆಲವು ಬಾಲಕರನ್ನು ಗ್ರಾಮದ ಪಕ್ಕದಲ್ಲಿರುವ ಅರಣ್ಯ ಪ್ರದೇಶದ ಬಾವಿಯೊಂದಕ್ಕೆ ಈಜು ಕಲಿಸಲು ಹಲವು ದಿನಗಳಿಂದ ಕರೆದೊಯ್ಯುತ್ತಿದ್ದರು. ಅಂತೆಯೇ ಮಂಗಳವಾರವೂ ಗ್ರಾಮದ ವೇಣುಗೋಪಾಲ್–ಅನ್ನಪೂರ್ಣ ಎಂಬವರ ಪುತ್ರ ಬಿಂದುಕುಮಾರ್(14) ಸೇರಿದಂತೆ ಮೂವರನ್ನು ಸಹ ಕರೆದೊಯ್ದಿದ್ದರೆನ್ನಲಾಗಿದೆ. ಈ ವೇಳೆ ಬಾವಿಯ ಮೇಲಿನಿಂದ ಬೀಳಲು ಸುರೇಶ್ ಹೇಳಿದರೆನ್ನಲಾಗಿದ್ದು ಬಾಲಕ ಅವರ ಮಾತಿನಂತೆ ಬಾವಿಗೆ ಜಿಗಿದಿದ್ದಾನೆ. ಈಜು ಬಾರದ ಬಾಲಕ ನೀರಿನಲ್ಲಿ ಮುಳುಗಿದ್ದು ಕಂಡು ಮೇಲೆತ್ತುವ ಪ್ರಯತ್ನ ವಿಫಲವಾಗಿದೆ. ವಿಷಯ ಗ್ರಾಮಸ್ಥರಿಗೆ ತಿಳಿದು ಸ್ಥಳದಲ್ಲಿ ಜಮಾಯಿಸಿದ್ದರು. ನಂತರ ವಿಷಯ ತಿಳಿದ ಅಗ್ನಿ ಶಾಮಕದಳದ ಸಿಬ್ಬಂದಿ ಆಗಮಿಸಿ ಶವವನ್ನು ಮೇಲೆತ್ತಿದರು. ನಂತರ ಪಟ್ಟಣದ ಸಾರ್ವಜನಿಕರ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಶವ ಹಸ್ತಾಂತರಿಸಲಾಯಿತು. ನನ್ನ ಮಗನ ಸಾವಿಗೆ ಸುರೇಶ್ ಕಾರಣವೆಂದು ಪೋಷಕರು ದೂರಿದ್ದು, ನಾಪತ್ತೆಯಾಗಿರುವ ಸುರೇಶನಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಈ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ.ರಾ.ರ.ಸಾ.ನಿಗಮದ ಶಿಶಿಕ್ಷು ತರಬೇತಿ ಅವಧಿ ವಿಸ್ತರಣೆ

ಮಂಡ್ಯ,ಏ.20– ಮಂಡ್ಯ ವಿಭಾಗದ ಕ.ರಾ.ರ.ಸಾ. ನಿಗಮದಲ್ಲಿ ಶಿಶಿಕ್ಷು ತರಬೇತಿಗೆ ಖಾಲಿ ಇರುವ ತಾಂತ್ರಿಕ ವೃತ್ತಿಗಳಿಗೆ ಅಭ್ಯರ್ಥಿಗಳನ್ನು ನಿಯೋಜಿಸಿಕೊಳ್ಳಲು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಏ.22 ರವರೆಗೆ ವಿಸ್ತರಿಸಲಾಗಿದೆ. ಮಾಹಿತಿಗಾಗಿ ಕ.ರಾ.ರ.ಸಾ.ನಿಗಮದ ಕಚೇರಿಯ ವ್ಯವಸ್ಥಾಪಕರನ್ನು ಸಂಪರ್ಕಿಸುವಂತೆ ಕ.ರಾ.ರ.ಸಾ.ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿರುತ್ತಾರೆ.

ಕೆಆರ್‌ಎಸ್‌ಗೆ ಸಚಿವ ಉಮೇಶ್‌ಕತ್ತಿ ಭೇಟಿ



ಶ್ರೀರಂಗಪಟ್ಟಣ, ಏ.20(ವಿನಯ್ ಕಾರೇಕುರ)–ತಾಲೂಕಿನ ಕೃಷ್ಣರಾಜಸಾಗರದ ಬೃಂದಾವನಕ್ಕೆ ಅರಣ್ಯ ಮತ್ತು ಅಹಾರ ಖಾತೆ ಸಚಿವ ಉಮೇಶ್‌ಕತ್ತಿ ಮಂಗಳವಾರ ಬೆಳಗ್ಗೆ ಭೇಟಿ ನೀಡಿ ವೀಕ್ಷಣೆ ಮಾಡಿ ಸ್ಥಳೀಯ ಅಧಿಕಾರಿಗಳಿಂದ ಉದ್ಯಾನವನ, ಸಂಗೀತ ಕಾರಂಜಿ, ಮೀನು ಸಂಗ್ರಹಾಲಯಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಸಚಿವರು ತಮ್ಮ ಕ್ಷೇತ್ರ ಹುಕ್ಕೇರಿಯಲ್ಲಿರುವ ಘಟಪ್ರಭಾ ನದಿಗೆ ಕಟ್ಟಿರುವ ಹಿಡಕಲ್ ಜಲಾಶಯದ ಅಣೆಕಟ್ಟೆಯ ಮುಂಭಾಗದಲ್ಲಿರುವ ಸುಮಾರು 250 ಎಕರೆ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸಲು ಯೋಜನೆ ರೂಪಿಸಿರುವುದರಿಂದ ಬೃಂದಾವನದಲ್ಲಿನ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಅಧಿಕಾರಿಗಳ ಜೊತೆಗೂಡಿ ವೀಕ್ಷಿಸಿದ ಸಚಿವರು, ಇಲ್ಲಿನ ಅಣೆಕಟ್ಟೆಯಲ್ಲಿನ ಕಾರಂಜಿಗಳ ಕುರಿತು ಕಾವೇರಿ ನೀರಾವರಿ ನಿಗಮ ಕಾರ್ಯಪಾಲಕ ಅಭಿಯಂತರ ರಾಮಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರ ಫಾರೂಕ್ ಅಬು, ಸಹಾಯಕ ಅಭಿಯಂತರ ಕಿಶೋರ್‌ಕುಮಾರ್‌ರಿಂದ ಉದ್ಯಾನವನ ನಿರ್ವಹಣೆ ಮತ್ತು ಅಭಿವೃದ್ಧಿ, ಇಲ್ಲಿನ ಸಸ್ಯಗಳು, ಹೂ ಗಿಡಗಳು, ಗಾಜಿನ ಮನೆ ನಿರ್ವಹಣೆ, ಮೀನು ಸಂಗ್ರಹಾಲಯ ಕುರಿತು ಮಾಹಿತಿ ಪಡೆದರು

ನಂತರ ಮಾತನಾಡಿದ ಸಚಿವರು ಇಲ್ಲಿನ ಉದ್ಯಾನವನ ನಿರ್ವಹಣೆ ತುಂಬಾ ಚೆನ್ನಾಗಿದೆ. ಇಲ್ಲಿ ಸಸ್ಯ ಸಂಪತ್ತು ಬಳಕೆ ಮಾಡಿ ತಂತ್ರಜ್ಞಾನ ಬಳಸಿ ಜನರ ಆಕರ್ಷಣೆ ಮಾಡಬೇಕು, ಪರಿಸರ ಉಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಂಜುನಾಥ್, ಕೆ.ಆರ್.ಸಾಗರ ತೋಟಗಾರಿಕೆ ಇಲಾಖೆ ರಾಜ್ಯ ವಲಯ ಸಹಾಯಕ ನಿರ್ದೇಶಕ ರಘು, ಸಚಿವರ ವಿಶೇಷ ಅಧಿಕಾರಿ ರಾಜ ಶೇಖರ್ ಪಾಟೀಲ್, ಮಂಡ್ಯ ಆರ್‌ಎಫ್‌ಓ ಅನಿತಾ, ಕೆ.ಆರ್.ಸಾಗರ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಶಿವಕುಮಾರ್, ನಿವೃತ್ತ ಹಿರಿಯ ಕೆಎಎಸ್ ಅಧಿಕಾರಿ ಪರಮೇಶ್ವರಪ್ಪ, ತಾಲೂಕು ಅಹಾರ ಇಲಾಖೆ ಅಧಿಕಾರಿಗಳು, ತಾಲೂಕು ಭಾಜಪ ಅಧ್ಯಕ್ಷ ಪಿ.ಹಳ್ಳಿ ರಮೇಶ್ ನೇತೃತ್ವದ ಬಿಜೆಪಿ ಕಾರ್ಯಕರ್ತರು ಇದ್ದರು.

ಕೆ.ಆರ್.ಪೇಟೆಯಲ್ಲಿ ಏ.24ರಿಂದ ರಾಗಿ ಖರೀದಿ ಕೇಂದ್ರ ಪುನರಾರಂಭ

ಕೆ.ಆರ್.ಪೇಟೆ,ಏ.20– ಇದೇ ಏ.24 ರಿಂದ ಸರ್ಕಾರದ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಕೇಂದ್ರವನ್ನು ಪುನರ್ ಆರಂಭಿಸಲಾಗುತ್ತಿದೆ ಎಂದು ತಹಸೀಲ್ದಾರ್ ಎಂ.ವಿ. ರೂಪಾ ತಿಳಿಸಿದ್ದಾರೆ.

ಪ್ರತಿ ಕ್ವಿಂಟಾಲ್ ರಾಗಿಗೆ 3,377 ರೂ. ಬೆಂಬಲ ಬೆಲೆಯನ್ನು ಸರ್ಕಾರ ಘೋಷಣೆ ಮಾಡಿದೆ.



ಈ ಹಿಂದೆ ತೆರೆಯಲಾಗಿದ್ದ ರಾಗಿ ಖರೀದಿ ಕೇಂದ್ರವನ್ನು ಪೂರೈಕೆ ಕಡಿಮೆಯಾದ ಹಿನ್ನೆಲೆಯಲ್ಲಿ ಮಾ. 31ಕ್ಕೆ ರಾಗಿ ಖರೀದಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು. ಈಗ ಮತ್ತೆ ಆರಂಭಿಸಬೇಕು ಎಂಬ ರೈತರ ಮನವಿಯ ಮೇರೆಗೆ ಕೆ.ಆರ್.ಪೇಟೆ ತಾಲೂಕಿನಲ್ಲಿ ರಾಗಿ ಖರೀದಿ ಕೇಂದ್ರವನ್ನು ಪಟ್ಟಣದ ಎಪಿಎಂಸಿ ಆವರಣದಲ್ಲಿ ಇದೇ ಏ.24ರಿಂದ ಆರಂಭಿಸಲಾಗುತ್ತಿದೆ. ಹಾಗಾಗಿ ರೈತರು ಬೆಳೆ ಸಮೀಕ್ಷೆಯಲ್ಲಿ ನಮೂದಿಸಲಾಗಿರುವ ಆರ್.ಟಿ.ಸಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ ಮತ್ತಿತರ ದಾಖಲೆಗಳನ್ನು ನೀಡಿ ತಮ್ಮ ರಾಗಿ ಉತ್ಪನ್ನವನ್ನು ಕೇಂದ್ರದ ಅಧಿಕಾರಿಗಳಿಗೆ ನೀಡಿ ಸೂಕ್ತ ರಶೀದಿ ಪಡೆದುಕೊಳ್ಳಬೇಕು. ನಂತರ ಹಣವನ್ನು ತಮ್ಮ ಬ್ಯಾಂಕ್ ಖಾತೆಗೆ ನೇರವಾಗಿ ಸರ್ಕಾರವೇ ಜಮಾ ಮಾಡಲಾಗುವುದು ಎಂದರು. ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಶಿರಸ್ತೇದಾರ್ ಪೂರ್ಣಿಮಾ, ನಟರಾಜ್, ರಾಜಸ್ವ ನಿರೀಕ್ಷಕಿ ಚಂದ್ರಕಲಾ, ಗ್ರಾಮ ಲೆಕ್ಕಾಧಿಕಾರಿ ಹರೀಶ್, ಎಪಿಎಂಸಿ ಕಾರ್ಯದರ್ಶಿ ರಫೀಕ್ ಅಹಮದ್, ಸತೀಶ್ ಇತರರು ಇದ್ದರು.



ಭಾರತೀನಗರದ ಶ್ರೀಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿರುವ ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ಸಂಕಷ್ಟಹರ ಚತುರ್ಥಿ ಅಂಗವಾಗಿ ಗಣಪತಿಗೆ ಮಂಗಳವಾರ ರಾತ್ರಿ ವಿಶೇಷ ಪೂಜಾ ಕಾರ್ಯಕ್ರಮ ಜರುಗಿತು.

ಕುಕ್ಕರಹಳ್ಳಿ ಕೆರೆ ಬಳಿ ಹಾಲಿನ ಮಳಿಗೆ ನಿರ್ಮಿಸಿರುವುದಕ್ಕೆ ವ್ಯಾಪಕ ವಿರೋಧ: ತೆರವಿಗೆ ಆಗ್ರಹ



ಮೈಸೂರು, ಏ.20(ಎಂಕೆ)– ವಾಯು ವಿಹಾರಿಗಳ ನೆಚ್ಚಿನ ತಾಣ ಕುಕ್ಕರಹಳ್ಳಿ ಕೆರೆ(ರೈಲ್ವೆ ಗೇಟ್ ಎದುರು)ಯ ಬಳಿ ಮಳಿಗೆ ನಿರ್ಮಿಸಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಅಲ್ಲದೇ ಕೂಡಲೇ ತೆರವುಗೊಳಿಸುವಂತೆ ಹಲವರು ಮೈಸೂರು ವಿವಿಗೆ ಆಗ್ರಹಿಸಿದ್ದಾರೆ.

ಕುಕ್ಕರಹಳ್ಳಿ ಕೆರೆಯ ಆಜುಬಾಜಲ್ಲಿ ಹಣ್ಣುಗಳು, ಬಟ್ಟೆ, ಮೀನು, ಬೀಡಿ, ಸಿಗರೇಟ್ ಸೇರಿದಂತೆ ಇನ್ನಿತರೆ ವಸ್ತುಗಳ ವ್ಯಾಪಾರ ಈಗಾಗಲೇ ನಡೆಯುತ್ತಿದ್ದು, ಕೆರೆಯ ವಾಯು ವಿಹಾರ ವಾತಾವರಣ ಹಾಳಾಗಿದೆ. ವಾಯು ವಿಹಾರಿಗಳ ತಾಣ ವ್ಯಾಪಾರ–ವಹಿವಾಟು ಸ್ಥಳವಾಗಿ ರೂಪುಗೊಳ್ಳುತ್ತಿದೆ. ಇನ್ನಿತರೆ ವಾಣಿಜ್ಯ ವಹಿವಾಟಿಗೆ ಅವಕಾಶ ನೀಡಿದರೆ ಹೆಚ್ಚಾಗಿ ಇಲ್ಲಿನ ಪರಿಸರವೇ ಹಾಳಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಹಿಂದೆಯೂ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ಹಾಲಿನ ಕೇಂದ್ರಕ್ಕಾಗಿ ಮಳಿಗೆ ನಿರ್ಮಿಸಿ, ನಂತರ ನ್ಯಾಯಾಲಯದ ಮೊರೆಹೋಗಿ ತೆರವುಗೊಳಿಸಲಾಗಿತ್ತು. ಆದ್ದರಿಂದ ಮತ್ತೊಮ್ಮೆ ಹಿಂದೆ ಮಾಡಿದ ತಪ್ಪು ಮರುಕಳಿಸದಂತೆ ಕ್ರಮವಹಿಸಬೇಕಾಗಿದೆ ಎಂದು ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಡಾ.ಕೆ.ಎಂ. ಜಯರಾಮಯ್ಯ ಮೈಸೂರು ವಿವಿ ಕುಲಸಚಿವರಲ್ಲಿ ಮನವಿ ಮಾಡಿದ್ದಾರೆ.

ಕ್ರಮಕೈಗೊಳ್ಳಲು ಚಿಂತನೆ: ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು ವಿವಿ ಕುಲಸಚಿವ ಪ್ರೊ.ಆರ್. ಶಿವಪ್ಪ, ವಿವಿಯ ಇಂಜಿನಿಯರ್‌ಗಳು ಸ್ಥಳ ಪರಿಶೀಲನೆ ನಡೆಸಿ ನೀಡಿರುವ ಮಾಹಿತಿ ಆಧಾರದ ಮೇಲೆ ರಸ್ತೆಯಿಂದ 8 ಅಡಿ ಜಾಗಬಿಟ್ಟು ಹಾಲಿನ ಬೂತ್(ಕುಕ್ಕರಹಳ್ಳಿಯ ಬೇಲಿಯ ಒಳಗಡೆ) ಕಟ್ಟಬೇಕಾಗಿತ್ತು. ಆದರೆ ರಸ್ತೆಅಂಚಿಗೆ ಅಂದರೆ ಮೈಸೂರು ವಿವಿ ಹಾಗೂ ನಗರ ಪಾಲಿಕೆಯ ಜಾಗವನ್ನು ಸೇರಿಸಿಕೊಂಡು ಕಟ್ಟಲಾಗಿದೆ. ಆದ್ದರಿಂದ ಪಾಲಿಕೆಗೆ ಪತ್ರ ಬರೆದ್ದು, ಜಂಟಿಯಾಗಿ ಕ್ರಮಕೈಗೊಳ್ಳಲು ಚಿಂತಿಸಲಾಗಿದೆ ಎಂದು ತಿಳಿಸಿದರು.

ನಯಾಪೈಸೆ ಆದಾಯವಿಲ್ಲ: ಈ ಮಳಿಗೆಯನ್ನು ಹಾಲಿನ ಬೂತ್ ಆಗಿ ಬಳಸಲು ಉದ್ದೇಶಿಸಿದ್ದು, ಇದರಿಂದ ಅಲ್ಲದೆ ಮೀನು ಮಳಿಗೆಯಿಂದಲೂ ಮೈಸೂರು ವಿವಿಗೆ ನಯಾಪೈಸೆ ಆದಾಯವಿಲ್ಲ. ಮುಖ್ಯವಾಗಿ ವಿವಿಯ ಜಾಗದಲ್ಲಿ ಈ ರೀತಿಯ ಮಳಿಗೆಗಳನ್ನು ಕಟ್ಟಲು ಅವಕಾಶ ನೀಡಲು ನಮಗೆ ಇಷ್ಟವಿಲ್ಲ. ಸರ್ಕಾರ ಏಜೆನ್ಸಿಯೆಂದು ಈಗಾಗಲೇ ಮೀನಿನ ಮಳಿಗೆ ನಡೆಸಲಾಗುತ್ತಿದೆ. ಜಾಗ ನೀಡದಿದ್ದರೆ ಸಿಂಡಿಕೇಟ್ ಸದಸ್ಯರಿಂದ ಹೇಳಿಸುತ್ತಾರೆ. ಅವರಿಂದ ಸಾಧ್ಯವಾಗದಿದ್ದರೆ ಜನಪ್ರತಿನಿಧಿಗಳಿಂದ ಫೋನ್ ಮಾಡಿಸುತ್ತಾರೆ. ಬೇರೆ ದಾರಿ ಇಲ್ಲದೆ ಶಿಕ್ಷಣಕ್ಕೆ, ವಾಯುವಿಹಾರಕ್ಕೆ ಮೀಸಲಾಗಿರುವ ಜಾಗವನ್ನು ಅನ್ಯ ಉದ್ದೇಶಕ್ಕೆ ಅವಕಾಶ ಮಾಡಿಕೊಡಬೇಕಾಗ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ವರ್ಷ ನಿಗದಿತ ಪ್ರಮಾಣಕ್ಕಿಂತ ಕಡಿಮೆ ತಂಬಾಕು ಬೆಳೆದ ರೈತರ ಪರವಾನಗಿ ನವೀಕರಣಕ್ಕೆ ದಂಡ ಕೈಬಿಡಲು ಸಂಸದ ಪ್ರತಾಪ್ ಸಿಂಹ ಮನವಿ

ದಂಡದ ಶುಲ್ಕ ಇಳಿಸುವ ಭರವಸೆ



ಮೈಸೂರು, ಏ.20(ಪಿಎಂ)– ಕಳೆದ ವರ್ಷ ನಿಗದಿತ ಪ್ರಮಾಣಕ್ಕಿಂತ ಕಡಿಮೆ ತಂಬಾಕು ಬೆಳೆದ ರೈತರ ಪರವಾನಗಿ ನವೀಕರಣಕ್ಕೆ ವಿಧಿಸುತ್ತಿರುವ ದಂಡ ಕೈಬಿಡಬೇಕೆಂಬ ಸಂಸದ ಪ್ರತಾಪ್ ಸಿಂಹರ ಮನವಿಗೆ ಸಕಾರಾತ್ಮಕ ಸ್ಪಂದನೆ ದೊರೆತಿದ್ದು, ದಂಡದ ಶುಲ್ಕವನ್ನು ಗಣನೀಯವಾಗಿ ಕಡಿಮೆ ಮಾಡುವ ಖಚಿತ ಭರವಸೆ ಸಿಕ್ಕಿದೆ.

ಕೇಂದ್ರ ವಾಣಿಜ್ಯ ಕಾರ್ಯದರ್ಶಿಗಳು, ತಂಬಾಕು ಮಂಡಳಿ ಅಧ್ಯಕ್ಷರು ಹಾಗೂ ತಂಬಾಕು ಮಂಡಳಿ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸಂಸದರು ಪತ್ರ ಮುಖೇನ ಮನವಿ ಮಾಡಿದ್ದರು. ಇವರ ಕೋರಿಕೆಗೆ ಸ್ಪಂದಿಸಿರುವ ಅವರು, ಗಣನೀಯ ಪ್ರಮಾಣದಲ್ಲಿ ದಂಡ ಇಳಿಸುವ ಭರವಸೆ ನೀಡಿದ್ದಾರೆ. ಸಂಸದರು ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ.

ಪ್ರಸಕ್ತ ಸಾಲಿನ ತಂಬಾಕು ಬೆಳೆ ಪರವಾನಗಿ ನವೀಕರಣ ಸಂಬಂಧ ನಿಗದಿತ ಕೋಟಾದಲ್ಲಿ ಶೂನ್ಯ ಮಾರಾಟ ಸಂಬಂಧ 11,310 ರೂ., ಶೇ.25ಕ್ಕಿಂತ ಕಡಿಮೆ ಮಾರಾಟಕ್ಕೆ 5 ಸಾವಿರ ರೂ. ಮತ್ತು ಶೇ.50ಕ್ಕಿಂತ ಕಡಿಮೆ ಮಾರಾಟಕ್ಕೆ 3 ಸಾವಿರ ರೂ. ದಂಡ ವಿಧಿಸಲಾಗುತ್ತಿದೆ. ಇದನ್ನು ಮನ್ನಾ ಮಾಡಬೇಕೆಂದು ಸಂಸದರು ಕೋರಿದ್ದರು.

ತಂಬಾಕು ನನ್ನ ಕ್ಷೇತ್ರದಲ್ಲಿ (ಮೈಸೂರು ಪ್ರದೇಶ) ಬೆಳೆಯುವ ಪ್ರಮುಖ ವಾಣಿಜ್ಯ ಬೆಳೆ. ಇಲ್ಲಿನ ಎಲ್ಲಾ ತಂಬಾಕು ರೈತರು ತಮ್ಮ ಜೀವನೋಪಾಯಕ್ಕೆ ತಂಬಾಕು ಬೆಳೆಯನ್ನೇ ಅವಲಂಬಿಸಿದ್ದಾರೆ. ತಂಬಾಕು ಮಳೆಯಾಶ್ರಿತ ಬೆಳೆಯಾಗಿದ್ದು, ರೈತರು ಎಲ್ಲಾ ರೀತಿಯ ಹವಾಮಾನ ವೈಪರೀತ್ಯಗಳನ್ನು ಎದುರಿಸಿ ಬೆಳೆಯನ್ನು ಬೆಳೆಯುತ್ತಿ ದ್ದಾರೆ. ತಂಬಾಕು ಮಳೆಯಾಶ್ರಿತ ಬೆಳೆಯಾಗಿರುವ ಕಾರಣ ಹವಾಮಾನಕ್ಕೆ ಅನುಗುಣವಾಗಿ ಬೆಳೆಯ ಇಳುವರಿಯಲ್ಲಿ ವ್ಯತ್ಯಾಸವಾಗುತ್ತದೆ ಮತ್ತು ನಿಖರವಾಗಿ ಅಂದಾಜಿಸಲು ಸಾಧ್ಯವಾಗುವುದಿಲ್ಲ.

ನಿಗದಿತ ಪ್ರಮಾಣಕ್ಕಿಂತ ಕಡಿಮೆ ಮಾರಾಟ ಮಾಡಿದ ರೈತರ ಪರವಾನಗಿಯನ್ನು 2022– 23ನೇ ಸಾಲಿಗೆ ನವೀಕರಿಸಲು ತಂಬಾಕು ಮಂಡಳಿ ದಂಡ ವಸೂಲಿ ಕ್ರಮ ಕೈಗೊಂಡಿದೆ. ಆ ಮೂಲಕ ಮೈಸೂರು ಭಾಗದಲ್ಲಿ ಒಟ್ಟು 12,652 ರೈತರಿಂದ ಒಟ್ಟಾರೆ 9.6 ಕೋಟಿ ರೂ. ದಂಡ ಸಂಗ್ರಹಿಸಲು ಮುಂದಾಗಿದೆ. ಕಳೆದ ವರ್ಷ ಅಸಹಜ ಹವಾಮಾನದ ನಡುವೆಯೂ ಮೈಸೂರು ಭಾಗಕ್ಕೆ ನಿಗದಿಪಡಿಸಿದ್ದ 97 ಮಿಲಿಯನ್ ಕೆಜಿ ತಂಬಾಕು ಬೆಳೆ ಸಂಬಂಧ 68 ಮಿಲಿಯನ್ ಕೆಜಿ ತಂಬಾಕು ಇಳುವರಿ ಲಭ್ಯವಾಗಿದೆ. ಪ್ರಸಕ್ತ ಸಾಲಿಗೆ ಈ ಭಾಗಕ್ಕೆ 100 ಮಿಲಿ ಯನ್ ಕೆಜಿ ತಂಬಾಕು ಬೆಳೆ ಬೆಳೆಯಲು ಕೋಟಾ ನಿಗದಿ ಮಾಡಲಾಗಿದೆ. ದಂಡ ಕೈಬಿಡದಿದ್ದರೆ, ರೈತರು ತಮ್ಮ ಪರವಾನಗಿ ನವೀಕರಣದಿಂದ ಹಿಂದೆ ಸರಿಯಲಿದ್ದು, ಇದರಿಂದ ತಂಬಾಕು ಉತ್ಪಾದನೆ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಲಿದೆ. ಆದ್ದರಿಂದ ದಂಡ ಕೈಬಿಡಬೇಕು ಎಂದು ಸಂಸದರು ಮನವಿಯಲ್ಲಿ ಕೋರಿದ್ದರು.

ಪರೀಕ್ಷೆ ಇಲ್ಲದೆ ಪಾಸಾದ ಪಿಯು ವಿದ್ಯಾರ್ಥಿಗಳು ಇಂಜಿನಿಯರಿಂಗ್‌ನಲ್ಲಿ ಪರದಾಟ

ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಕಾಲೇಜು ಪ್ರಾಂಶುಪಾಲ ಡಾ. ವೈಟಿ. ಕೃಷ್ಣೇಗೌಡ



ಮೈಸೂರು, ಏ.20(ಜಿಎ)– ಕೊರೊನಾ ಹಿನ್ನೆಲೆಯಲ್ಲಿ ಪರೀಕ್ಷೆ ಇಲ್ಲದೆ ಪದವಿ ಪೂರ್ವ ವಿದ್ಯಾರ್ಥಿಗಳು ಉತ್ತೀರ್ಣ ಮಾಡಿರುವ ಪರಿಣಾಮ ಅವರು ಇಂಜಿನಿಯರಿಂಗ್‌ಗೆ ಬಂದು ಪರದಾಡುತ್ತಿದ್ದಾರೆ ಎಂದು ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಕಾಲೇಜಿನ ಪ್ರಾಂಶುಪಾಲರಾದ ಡಾ.ವೈ.ಟಿ. ಕೃಷ್ಣೇಗೌಡ ತಿಳಿಸಿದರು.

ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ವತಿಯಿಂದ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್‌ನ ಎಸ್.ಪಿ.ಭಟ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಮಾದರಿ ಇಂಜಿನಿಯರಿಂಗ್ ಶಿಕ್ಷಣದ ಕುರಿತು ಉಪನ್ಯಾಸದಲ್ಲಿ ಅವರು ಮಾತನಾಡುತ್ತಿದ್ದರು.

ನಮ್ಮ ಕಾಲದಲ್ಲಿ ನಾವು ವ್ಯಾಸಂಗ ಮಾಡಿದ ಇಂಜಿನಿಯರಿಂಗ್ ಉತ್ತಮವಾಗಿತ್ತು. ವಿದೇಶಗಳ ಶಿಕ್ಷಣ ನೀತಿ ನೋಡಿದ್ದರೆ, ಅಲ್ಲಿ ಪ್ರಾಥಮಿಕ ಶಿಕ್ಷಣ ಹಂತದಿಂದಲೇ ಮಕ್ಕಳಿಗೆ ಕೌಶಲ್ಯತೆ ಗಳನ್ನು ಕಲಿಸಲು ಮುಂದಾಗುತ್ತಾರೆ. ಅದರಂತೆ ನಮ್ಮ ದೇಶದಲ್ಲಿಯೂ ಉನ್ನತ ಶಿಕ್ಷಣದಿಂದ ಆರಂಭಿಸುವ ಬದಲು ಪ್ರಾಥಮಿಕ ಶಿಕ್ಷಣದಿಂದ ಕೌಶಲ್ಯತೆಯ ತರಬೇತಿ ನೀಡಬೇಕು ಎಂದರು. ಕೊರೊನಾ ನಂತರ ವಿದ್ಯಾರ್ಥಿಗಳು ಯಾರು ಸಹ ಪುಸ್ತಕಗಳನ್ನು ಹಿಡಿದು ಓದುತ್ತಿಲ್ಲ. ಅದರ ಬದಲು ಮೊಬೈಲ್ ಅನ್ನು ಪ್ರಪಂಚ ಮಾಡಿಕೊಂಡಿದ್ದಾರೆ. ಅದನ್ನು ಕಸಿದುಕೊಳ್ಳಲು ಮುಂದಾದರೆ ಆತ್ಮಹತ್ಯೆ ಮಾಡುಕೊಳ್ಳುವ ಸ್ಥಿತಿಗೂ ತಲುಪುತ್ತಿದ್ದು, ತಪ್ಪು ದಾರಿಗೂ ತಲುಪುತ್ತಿದ್ದಾರೆ ಎಂದ ಅವರು ಅನ್‌ಲೈನ್ ಶಿಕ್ಷಣದಿಂದ ವಿದ್ಯಾಭ್ಯಾಸವೇ ಹಾಳಾಗಿದೆ ಎಂದರು.

ಡೆಹರಾಡೂನ್‌ನ ಗ್ರಾಫಿಕ್ ಎರಾ ಡೀಮ್ಡ್ ಟು ಬಿ ವಿವಿ ಮತ್ತು ಅಹಮದಾಬಾದ್‌ನ ಇಂಡಸ್ ವಿವಿಯ ವಿಶ್ರಾಂತ ಉಪಕುಲಪತಿ ಡಾ.ಡಿ.ಪಿ. ಗಿರಿಧರ್ ಅವರು ಮಾದರಿ ಇಂಜಿನಿಯರಿಂಗ್ ಶಿಕ್ಷಣ ಕೊರೊನಾ ಸಾಂಕ್ರಮಿಕ ರೋಗದ ನಂತರ ಎದುರಿಸಬೇಕಾದ ಸವಾಲುಗಳ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ್ದರು. ಕಾರ್ಯಕ್ರಮದಲ್ಲಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮಾಜಿ ಕಾರ್ಯದರ್ಶಿ ಎನ್.ಎಸ್. ಮಹದೇವಸ್ವಾಮಿ ಮತ್ತು ಕಾರ್ಯದರ್ಶಿ ಹೆಚ್.ಎಸ್. ಸುರೇಶ್‌ಬಾಬು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ತಾಲೂಕು ಆರೋಗ್ಯ ಮೇಳಕ್ಕೆ ಉತ್ತಮ ಸ್ಪಂದನೆ





ಮಡಿಕೇರಿ,ಏ.20–ಪ್ರತಿಯೊಬ್ಬರೂ ಆರೋಗ್ಯವಂತರಾಗಿದ್ದಲ್ಲಿ ಸದೃಢ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡುವಂತಾಗಬೇಕು ಎಂದು ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಅವರು ಸಲಹೆ ನೀಡಿದ್ದಾರೆ.

ನಗರದ ಜೂನಿಯರ್ ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಿವಿಧ ಇಲಾಖೆಗಳ ಸಹಕಾರದಲ್ಲಿ ಸ್ವಾತಂತ್ರ್ಯ ಅಮೃತಮಹೋತ್ಸವ ಪ್ರಯುಕ್ತ ಏರ್ಪಡಿಸಲಾಗಿದ್ದ ತಾಲೂಕು ಮಟ್ಟದ ಆರೋಗ್ಯ ಮೇಳ ಮತ್ತು ಆರೋಗ್ಯ ಕಾರ್ಯಕ್ರಮಗಳ ಕುರಿತು ಜಾಗೃತಿ ಅಭಿಯಾನಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಆರೋಗ್ಯವಂತರಾಗಿರಬೇಕು ಎಂಬ ಉದ್ದೇಶದಿಂದ ಸರ್ಕಾರ ತಾಲೂಕು ಮಟ್ಟದಲ್ಲಿ ಆರೋಗ್ಯ ಮೇಳ ಏರ್ಪಡಿಸಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ತಜ್ಞ ವೈದ್ಯರಿಂದ ಪರೀಕ್ಷೆ ಮಾಡಿಸಿಕೊಂಡು, ಆರೋಗ್ಯಯುತ ಬದುಕು ನಡೆಸುವಂತಾಗಬೇಕು ಎಂದು ಅವರು ಹೇಳಿದರು.

ಪ್ರತಿಯೊಬ್ಬರೂ ಉತ್ತಮ ಆರೋಗ್ಯ ಹೊಂದಿದ್ದಲ್ಲಿ ಕ್ರಿಯಾಶೀಲರಾಗಿ ಪ್ರತೀ ನಿತ್ಯ ಚಟುವಟಿಕೆಯಿಂದ ಕಾರ್ಯ ನಿರ್ವಹಿಸಬಹುದು. ಆರೋಗ್ಯ ಸರಿ ಇಲ್ಲದಿದ್ದಲ್ಲಿ ಒಂದು ರೀತಿಯ ಬೇಸರ, ತಾತ್ಸಾರ, ಜಿಗುಪ್ಸೆ ಮನೋಭಾವ ಉಂಟಾಗುತ್ತದೆ. ಆದ್ದರಿಂದ ಆರೋಗ್ಯ ಕಡೆ ಹೆಚ್ಚಿನ ಗಮನಹರಿಸುವುದು ಅತ್ಯಗತ್ಯ ಎಂದು ಅಪ್ಪಚ್ಚುರಂಜನ್ ಅವರು ಸಲಹೆ ಮಾಡಿದರು.

ಸರ್ಕಾರ ಬಡ ಜನರಿಗೆ ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಕಾರ್ಡ್ ವಿತರಿಸಲಾಗುತ್ತಿದ್ದು, ಈ ಕಾರ್ಡ್ ಪಡೆಯುವಂತಾಗಬೇಕು. 5 ಲಕ್ಷ ರೂ. ವೆಚ್ಚದವರೆಗೆ ಉಚಿತ ಚಿಕಿತ್ಸೆ ಪಡೆಯಬಹುದಾಗಿದೆ. ಜಿಲ್ಲೆಯಲ್ಲಿ ಶೇ.75ಕ್ಕಿಂತ ಹೆಚ್ಚು ಎಬಿಆರ್‌ಕೆ ಕಾರ್ಡ್ ವಿತರಿಸಲಾಗಿದೆ ಎಂದು ಶಾಸಕರು ಹೇಳಿದರು.

ಜಿಲ್ಲೆಯ ಹಲವು ಕಡೆಗಳಲ್ಲಿ ಜನೌಷಧಿ ಮಳಿಗೆ ತೆರೆಯಲಾಗಿದ್ದು, ಕಡಿಮೆ ಬೆಲೆಯಲ್ಲಿ ಔಷಧಿ ಪಡೆಯಬಹುದು. ಹೀಗೆ ಸರ್ಕಾರ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಿದೆ.

ಜಿಲ್ಲೆಯಲ್ಲಿ ಆರೋಗ್ಯ ಮೇಳ ಯಶಸ್ವಿಗೆ ಆಶಾ ಕಾರ್ಯಕರ್ತೆಯರು ವೈದ್ಯಾಧಿಕಾರಿಗಳು ಸೇರಿದಂತೆ ಎಲ್ಲರ ಶ್ರಮ ಮುಖ್ಯವಾಗಿದೆ ಎಂದು ಶಾಸಕರು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಕೋವಿಡ್–19 ನಿಯಂತ್ರಣ ಲಸಿಕೆಯನ್ನು ಅರ್ಹರೆಲ್ಲರೂ ಪಡೆಯಬೇಕು. ಸರ್ಕಾರಿ ನೌಕರರೂ ಸಹ ಜ್ಯೋತಿ ಸಂಜೀವಿನಿ ಆರೋಗ್ಯ ಸೌಲಭ್ಯವಿದ್ದು, ಜ್ಯೋತಿ ಸಂಜೀವಿನಿ ಕಾರ್ಡ್ ಪಡೆಯಬೇಕು ಎಂದು ಅವರು ಸಲಹೆ ಮಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆರ್.ವೆಂಕಟೇಶ್ ಮಾತನಾಡಿ, ಮಡಿಕೇರಿ ತಾಲೂಕು ಆರೋಗ್ಯ ಮೇಳದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿ, ವಿವಿಧ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕದಡಿ 207 ಮಂದಿ, ಆರೋಗ್ಯ ಕಾರ್ಡ್‌ಗಾಗಿ 132 ಮಂದಿ, ಅಂಗಾಂಗ ನೋಂದಣಿ 5 ಮಂದಿ, ಕಣ್ಣು ದಾನಕ್ಕೆ 16 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ಕುಶಾಲನಗರದಲ್ಲಿ 2,156 ಮಂದಿ ನೋಂದಣಿ ಮಾಡಿಕೊಂಡಿದ್ದು, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್‌ಗೆ 257 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. 150 ಮಂದಿ ಆರೋಗ್ಯ ಕಾರ್ಡ್‌ಗೆ ನೋಂದಣಿ ಮಾಡಿಕೊಂಡಿದ್ದಾರೆ.

ಹಾಗೆಯೇ ಗೋಣಿಕೊಪ್ಪದಲ್ಲಿ 1206 ಮಂದಿ ನೋಂದಣಿ ಮಾಡಿಕೊಂಡಿದ್ದು, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್‌ಗೆ 300 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಒಟ್ಟಾರೆ ಬುಧವಾರ ಜಿಲ್ಲೆಯ ಮೂರು ಕಡೆಗಳಲ್ಲಿ ನಡೆದ ತಾಲೂಕು ಮಟ್ಟದ ಆರೋಗ್ಯ ಮೇಳದಲ್ಲಿ ಸುಮಾರು 4,318 ಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾಸ್ಪತ್ರೆಯ ಜಿಲ್ಲಾ ಸರ್ಜನ್ ಡಾ.ವಿಶಾಲ್ ಕುಮಾರ್, ತಾಲೂಕು ವೈದ್ಯಾಧಿಕಾರಿ ಡಾ.ಚೇತನ್, ತಹಸೀಲ್ದಾರ್ ಪಿ.ಎಸ್.ಮಹೇಶ್, ಪೌರಾಯುಕ್ತ ಎಸ್.ವಿ.ರಾಮದಾಸ್, ತಾಪಂ ಇಒ ಶೇಖರ್, ಜಿಲ್ಲಾ ಅಂಕಿತ ಅಧಿಕಾರಿ ಅನಿಲ್ ಧವನ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಲೀಲಾವತಿದೇವಿ, ಡಿಡಿಪಿಐ ಮಂಜುಮೂರ್ತಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಅನಿಲ್ ಬಗಟಿ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ವಿಜಯ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತರಬೇತಿ ಸಂಸ್ಥೆ ಪ್ರಾಂಶುಪಾಲ ಡಾ.ಶಿವಕುಮಾರ್ ಇತರರು ಇದ್ದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಶ್ರೀಕಾಂತ್ ನಿರೂಪಿಸಿದರು. ಪಾಲಾಕ್ಷ ವಂದಿಸಿದರು.

ಇಗ್ಗುತಪ್ಪ ಕೊಡವ ಸಂಘದ ಮಹಾಸಭೆ



ವಿರಾಜಪೇಟೆ, ಏ.20– ಇಗ್ಗುತಪ್ಪ ಕೊಡವ ಸಂಘದ ವಾರ್ಷಿಕ ಮಹಾಸಭೆಯಲ್ಲಿ ವಿಧಾನಪರಿಷತ್ ಸದಸ್ಯರಾದ ಮಂಡೆಪಂಡ ಸುಜಾ ಕುಶಾಲಪ್ಪ ಹಾಗೂ ಸ್ಥಳೀಯ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ವಿನಾಕ್ ಕುಟ್ಟಪ್ಪ ಅವರನ್ನೂ ವಿರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ಸುಜಾ ಕುಶಾಲಪ್ಪ ಮಾತನಾಡಿ, ಇತ್ತೀಚೆಗೆ ನಡೆದ ವಿಧಾನಸಭೆ ಅಧಿವೇಶನದಲ್ಲಿ ಕೊಡಗಿನ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆದಿರುವುದಾಗಿ ತಿಳಿಸಿದ ಬಳಿಕ ಕೊಡವ ಸಂಘದ ಕ್ರೀಡಾ ಸ್ಪರ್ಧೆಯನ್ನು ಉದ್ಘಾಟಿಸಿದರು. ಸನ್ಮಾನ ಸ್ವೀಕರಿಸಿದ ಬಳಿಕ ವಿನಾಕ್ ಕುಟ್ಟಪ್ಪ ಮಾತನಾಡಿದರು.

ಇಗ್ಗುತಪ್ಪ ಕೊಡವ ಸಂಘದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಮಾದಂಡ ಎಸ್.ಪೂವಯ್ಯ ವಹಿಸಿ ಮಾತನಾಡಿದರು. ಸಭೆಯಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ನೆಲ್ಲಮಕ್ಕಡ ಬೆಳ್ಯಪ್ಪ, ಪಳಂಗಂಡ ಕುಶಪ್ಪ, ವಾಟೇರಿರ ಕಾಳಪ್ಪ, ನೆಲ್ಲಮಕ್ಕಡ ಶಾರದ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು. ಸಭೆಯ ನಂತರ ನೂತನ ಸಮಿತಿಯನ್ನು ರಚಿಸಲಾಯಿತು ಸಮಿತಿಯ ಅಧ್ಯಕ್ಷರಾಗಿ ಪಟ್ಟಡ ವಸನ್ ರಾವಮಚಂದ್ರ, ಕಾರ್ಯದರ್ಶಿಯಾಗಿ ಚೇಂದಿರ ವಿಶ್ವನಾಥ್, ಅಚ್ಚಪಂಡ ರಾಜ ತಿಮ್ಮಯ್ಯ, ಪಟ್ಟಡ ಸಚಿನ್ ಸುಬ್ಬಯ್ಯ, ಕಬ್ಬಚ್ಚಿರ ರತ್ನ ಬೋಪಣ್ಣ, ಮಾದಂಡ ತಿಮ್ಮಯ್ಯ, ಕಂಜಿಯಂಡ ಪವಿತ್ರ ಗೋಪಾಲ, ಮುಕ್ಕಟೀರ ಸವಿತಾ ಪೂಣ್ಣಪ್ಪ ಅಯ್ಯೆಗೊಂಡರು, ಮಾದಂಡ ಪೂವಯ್ಯ ಸ್ವಾಗತಿಸಿದರೆ, ವಟೇರಿರ ನಳಿನಿ ವಂದಿಸಿದರು.

ಕು.ನಗರದಲ್ಲಿ ಅಜಾದಿ ಕಾ ಅಮೃತ್ ಉತ್ಸವ್



ಕುಶಾಲನಗರ, ಏ.20– 75ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಹಾಗೂ ಬಿಸಿ ಊಟದ ಯೋಜನೆ ಅಂಗವಾಗಿ ಅಜಾದಿ ಕಾ ಅಮೃತ್ ಉತ್ಸವ್ ಕುಶಾಲನಗರದ ಆಹಾರ ನಿಗಮದಲ್ಲಿ ನಡೆಯಿತು.

ಜಿಲ್ಲಾ ಆಹಾರ ಹಾಗೂ ನಾಗರಿಕ ಸರಬರಾಜು ನಿಗಮದ ಉಪನಿರ್ದೇಶಕರಾದ ಗೌರವ್ ಶೆಟ್ಟಿ, ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಗುಮ್ಮಟ್ಟೀರ ಕಿಲನ್ ಗಣಪತಿ ಮಾತನಾಡಿ, ದೇಶದ ಪ್ರಧಾನಿ ನರೇಂದ್ರ ಮೋದಿ ಸರ್ಕಾರವು ಪ್ರಧಾನ ಮಂತ್ರಿ ಗರಿಬ್ ಕಲ್ಯಾಣ ಯೋಜನೆಯಡಿ ಉಚಿತ ಆಹಾರವನ್ನು ಭಾರತದ ಶೇ.83.1 ಫಲಾನುಭವಿಗಳಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. ಭಾರತ ದೇಶದಲ್ಲಿ ಸಾಂಕ್ರಾಮಿಕ ಕೊರೊನಾ ಸಂದರ್ಭದಲ್ಲಿ ಹಸಿವು ನಿರ್ಮೂಲನೆ ಮಾಡುವಲ್ಲಿ ವಿಶ್ವದಲ್ಲಿಯೇ ಪ್ರಮುಖ ಪಾತ್ರ ವಹಿಸುವ ಮೂಲಕ ಜನರ ಮನಸ್ಸನ್ನು ಗೆದ್ದಿದ್ದಾರೆ ಎಂದರು.

ಆಹಾರ ನಿಗಮ ಪ್ರಾದೇಶಿಕ ವ್ಯವಸ್ಥಾಪಕರಾದ ಉದಯ್‌ಸಿಂಗ್ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಬಗ್ಗೆ ಮಾಹಿತಿಯನ್ನು ಸಭೆಗೆ ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಅಣ್ಣಯ್ಯ ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರದ ಬಗ್ಗೆ ಮಾಹಿತಿಯನ್ನು ತಿಳಿಸಿದರು. ಅಲ್ಲದೆ ಸರ್ಕಾರ ನೀಡುವ ಹೆಚ್ಚಿನ ಪೌಷ್ಟಿಕಾಂಶವಿರುವ ಆಹಾರದ ಬಗ್ಗೆ ಜಾಗೃತಿಯನ್ನು ಮೂಡಿಸಿದರು.

ಎ.ಪಿ.ಎಂ.ಎಸ್. ವ್ಯವಸ್ಥಾಪಕ ಹರೀಶ್, ಆಹಾರ ನಿಗಮ ವ್ಯವಸ್ಥಾಪಕ ಶ್ರೀನಿವಾಸ್, ಹರೀಶ್, ಉಪನಿರ್ದೇಶಕ ಗೌರವಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಜನತಾ ಜಲಧಾರೆ ರಥಯಾತ್ರೆಗೆ ನೆಲ್ಯ ಹುದಿಕೇರಿಯಲ್ಲಿ ಸ್ವಾಗತ



ಸಿದ್ದಾಪುರ, ಏ.20–ಜಲಸಂರಕ್ಷಣೆ, ಕಾವೇರಿ ನದಿ ಸಂರಕ್ಷಣೆ, ನೀರಾವರಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ನದಿ ನೀರಿನ ಸಮರ್ಪಕ ಬಳಕೆಯ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದರೊಂದಿಗೆ ಜನತಾ ಜಲಧಾರೆ ರಥಯಾತ್ರೆಗೆ ನೆಲ್ಯಹುದಿಕೇರಿಯಲ್ಲಿ ಅಭೂತಪೂರ್ವ ಸ್ವಾಗತ ದೊರೆಯಿತು. ದೀಪಾಲಂಕೃತ ಕಳಶವನ್ನುಹೊಂದಿದ ರಥವನ್ನು ನೆಲ್ಯಹುದಿಕೇರಿಯ ಜೆಡಿಎಸ್ ಮುಖಂಡರುಗಳು ಬರಮಾಡಿಕೊಂಡರು.

ನೆಲ್ಯಹುದಿಕೇರಿ ಪಟ್ಟಣದಲ್ಲಿ ಜೆಡಿಎಸ್ ಕಾರ್ಯಕರ್ತರು ಜಮಾಯಿಸಿ ಘೋಷಣೆಗಳನ್ನು ಕೂಗಿದರು. ಜೆಡಿಎಸ್ ಮುಖಂಡ ನಾಪಂಡ ಮುತ್ತಪ್ಪ ಮಾತನಾಡಿ, ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸಬೇಕಾದ ಬಿಜೆಪಿ ಕೋಮು ಭಾವನೆಯೊಂದಿಗೆ ಜಾತಿ ರಾಜಕಾರಣ ಮಾಡುತ್ತಿದ್ದು ಶೇ.40 ಕಮಿಷನ್ ಭ್ರಷ್ಟಾಚಾರವನ್ನು ಮುಚ್ಚಿಹಾಕಲು ಹಲವು ಷಡ್ಯಂತ್ರ ರೂಪಿಸುತ್ತಿದೆ. ಬಿಜೆಪಿಯ ಭ್ರಷ್ಟ ಆಡಳಿತ ವ್ಯವಸ್ಥೆಯನ್ನು ಪ್ರಶ್ನಿಸಬೇಕಾದ ಕಾಂಗ್ರೆಸ್ ಮೌನವಹಿಸಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಪಕ್ಷವನ್ನು ದೂರವಿಟ್ಟು ಯುವ ಸಮೂಹ ಜೆಡಿಎಸ್‌ನತ್ತ ಹೆಚ್ಚು ಒಲವು ತೋರುತ್ತಿದ್ದು ಮುಂದಿನ ದಿನಗಳಲ್ಲಿ ಪಕ್ಷ ಬಲಿಷ್ಠವಾಗಿ ಮುನ್ನಡೆಯಲ್ಲಿದೆ ಎಂದು ಹೇಳಿದ ಅವರು, ಕೊಡಗು ಜಿಲ್ಲೆಗೆ ಕುಮಾರಸ್ವಾಮಿಯವರು ಅಪಾರ ಕೊಡುಗೆಯನ್ನು ನೀಡಿದ್ದು, ಪ್ರವಾಹ ಪ್ರಕೃತಿ ವಿಕೋಪ ಸಂದರ್ಭದಲ್ಲೂ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಎಲ್ಲಾ ಜನಾಂಗಗಳಿಗೂ ಹಲವಾರು ಯೋಜನೆಗಳನ್ನು ನೀಡಿದ್ದಾರೆ. ಮತ್ತೊಮ್ಮೆ ಜೆಡಿಎಸ್ ಸರ್ಕಾರ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯುವ ಜೆಡಿಎಸ್ ಜಿಲ್ಲಾಧ್ಯಕ್ಷ ಸಿ.ಎಲ್. ವಿಶ್ವ ಮಾತನಾಡಿ, ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಧರ್ಮದ ವಿಷಭೀಜವನ್ನು ಬಿತ್ತಿ ಧರ್ಮ ಧರ್ಮಗಳ ನಡುವೆ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ. ಈ ಎರಡೂ ರಾಷ್ಟ್ರೀಯ ಪಕ್ಷಗಳು ಮತಕ್ಕಾಗಿ ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಮೂಲಕ ರಾಜಕೀಯ ಲಾಭವನ್ನು ಪಡೆಯುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಸರಕಾರಗಳು ಚುನಾವಣೆ ಸಂದರ್ಭದಲ್ಲಿ ನೀಡುವ ಆಶ್ವಾಸನೆಗಳು ಚುನಾವಣೆಯ ನಂತರ ಹುಸಿಯಾಗುತ್ತದೆ. ಇಂದಿಗೂ ಕೂಡ ಜೆಡಿಎಸ್ ಪಕ್ಷದ ಜನಪ್ರಿಯ ಯೋಜನೆಗಳು ಜನಸಾಮಾನ್ಯರ ಮನಸ್ಸಲ್ಲಿ ನೆಲೆಸಿದೆ. ಯುವಕರು ರಾಷ್ಟ್ರೀಯ ಪಕ್ಷಗಳ ರಾಜಕೀಯ ಚದುರಂಗದಾಟಕ್ಕೆ ಬಲಿಯಾಗಿ ಧರ್ಮದ ಹೆಸರಿನಲ್ಲಿ ಪ್ರಾಣ ಕಳೆದುಕೊಳ್ಳುತ್ತಿರುವುದು ವಿಷಾದನೀಯ ಸಂಗತಿ. ಯುವಕರು ಉತ್ತಮ ವ್ಯಕ್ತಿಗಳಾಗಿ, ಸಮಾಜಕ್ಕೆ ಮಾದರಿಯಾಗಬೇಕೆಂದು ಕರೆ ನೀಡಿದರು. ಈ ಸಂದರ್ಭ ಜೆಡಿಎಸ್ ಪಕ್ಷದ ತಾಲೂಕು ಉಪಾಧ್ಯಕ್ಷ ಶಹಾಬುದ್ದಿನ್ ತಂಙಳ್, ಜೆಡಿಎಸ್ ಹಿಂದುಳಿದ ವರ್ಗದ ಜಿಲ್ಲಾ ಅಧ್ಯಕ್ಷ ಶಿವದಾಸ್, ಯುವ ಜೆಡಿಎಸ್ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶರತ್ ಹೆಬ್ಬಾಳೆ, ಜೆಡಿಎಸ್ ವಿದ್ಯಾರ್ಥಿ ಘಟಕದ ಅಧ್ಯಕ್ಷ ತ್ರಿನೇಶ್, ಅಭಿ ಇನ್ನಿತರರು ಹಾಜರಿದ್ದರು.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಆಯ್ಕೆ ಪಟ್ಟಿ ಪ್ರಕಟ

ಮಡಿಕೇರಿ, ಏ.20– ಪೊನ್ನಂಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಏ.18 ರಂದು ಗುರುತಿಸಲಾದ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಸಂಭವನೀಯ ಪಟ್ಟಿಯನ್ನು ಪೊನ್ನಂಪೇಟೆ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಲ್ಲಿ ಪ್ರಕಟಿಸಲಾಗಿದೆ.

ಈ ಬಗ್ಗೆ ಸಂಬಂಧಿಸಿದವರಿಂದ ಆಕ್ಷೇಪಣೆಗಳಿದ್ದಲ್ಲಿ ಏ.28ರ ಸಂಜೆ 5.30 ಗಂಟೆಯೊಳಗೆ ಸೂಕ್ತ ದಾಖಲಾತಿಯೊಂದಿಗೆ ಮನವಿಯನ್ನು ಖುದ್ದಾಗಿ ಶಿಶು ಅಭಿವೃದ್ಧಿ ಯೋಜನಾ ಕಚೇರಿ, ಪೊನ್ನಂಪೇಟೆ ಇಲ್ಲಿಗೆ ಸಲ್ಲಿಸಬೇಕು. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪೊನ್ನಂಪೇಟೆ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅವರು ತಿಳಿಸಿದ್ದಾರೆ.

ಚಾಮರಾಜನಗರ– ಗುಂಡ್ಲುಪೇಟೆ ಎಪಿಎಂಸಿ ಚುನಾವಣೆ ಫಲಿತಾಂಶ ಪ್ರಕಟ

ಚಾ.ನಗರದಲ್ಲಿ ಕಾಂಗ್ರೆಸ್ ಬೆಂಬಲಿತರು ಮೇಲುಗೈ



ಚಾಮರಾಜನಗರ ಎಪಿಎಂಸಿ ಚುನಾವಣೆಯಲ್ಲಿ ನಾಗವಳ್ಳಿ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಆಲೂರು ಪ್ರದೀಪ್ ತಮ್ಮ ಪ್ರತಿಸ್ಪರ್ಧಿ ಶಿವಕುಮಾರ್ ಅವರನ್ನು 1,674 ಮತಗಳ ಭಾರೀ ಅಂತರದಿಂದ ಸೋಲಿಸಿ ಪ್ರಚಂಡ ಗೆಲುವು ಸಾಧಿಸಿದರು. ಇವರನ್ನು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಅಭಿನಂದಿಸಿದರು.

ಕಾಂಗ್ರೆಸ್–ಬಿಜೆಪಿ ಸಮಬಲ: ಪಕ್ಷೇತರ ಅಭ್ಯರ್ಥಿಯೇ ನಿರ್ಣಾಯಕ

- ಒಟ್ಟು 12 ಕ್ಷೇತ್ರ
- ಕಾಂಗ್ರೆಸ್–7
- ಬಿಜೆಪಿ–4
- ಪಕ್ಷೇತರ–1

ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು



ಆಲೂರು ಪ್ರದೀಪ್ (ನಾಗವಳ್ಳಿ ಕ್ಷೇತ್ರ) | ಎಂ.ಬಿ.ಗುರುಸ್ವಾಮಿ (ಬದನಗುಪ್ಪೆ ಕ್ಷೇತ್ರ) | ಪ್ರೇಮ ಉಡಿಗಾಲ ಕ್ಷೇತ್ರ | ಮಹದೇವಸ್ವಾಮಿ ಹರದನಹಳ್ಳಿ ಕ್ಷೇತ್ರ | ರವಿಶಂಕರ ಮೂರ್ತಿ ಹೊಂಗನೂರು ಕ್ಷೇತ್ರ | ಎಂ.ಮಹೇಶ್ ಯಳಂದೂರು(ಕಸಬಾ) | ಎಲ್.ರಾಮಚಂದ್ರ, ಅಗರ ಕ್ಷೇತ್ರ

ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು, ಪಕ್ಷೇತರ ಅಭ್ಯರ್ಥಿ



ಮನೋಜ್‌ಪಾಟೀಲ್ ಚಾಮರಾಜನಗರ ಕ್ಷೇತ್ರ | ಮಹದೇವಪ್ರಸಾದ್ ಹರವೆ ಕ್ಷೇತ್ರ | ರವಿಕುಮಾರ್ ಅಮಚವಾಡಿ | ಕಲಾವತಿ ಉಮ್ಮತ್ತೂರು | ವೆಂಕಟರಾವ್ ವರ್ತಕರ ಕ್ಷೇತ್ರ

ಚಾಮರಾಜನಗರ, ಏ.20(ಎಸ್‌ಎಸ್)– ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ)ಯ ನಿರ್ದೇಶಕರ ಸ್ಥಾನಗಳಿಗೆ ನಡೆದಿದ್ದ ಚುನಾವಣೆಯ ಫಲಿತಾಂಶ ಬುಧವಾರ ಪ್ರಕಟವಾಯಿತು.

ಒಟ್ಟು 12 ಕ್ಷೇತ್ರಗಳಿಗೆ ಚುನಾವಣೆ ನಡೆದಿತ್ತು. ಈ ಚುನಾವಣೆ ರಾಜಕೀಯ ಪಕ್ಷಗಳಿಂದ ಹೊರತಾಗಿದ್ದರೂ ಸಹ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಒಂದಲ್ಲ ಒಂದು ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. ಹೀಗಾಗಿ ಗೆದ್ದ ಅಭ್ಯರ್ಥಿಗಳನ್ನು ಆತ ಗುರುತಿಸಿಕೊಂಡಿದ್ದ ಪಕ್ಷದ ಬೆಂಬಲಿತ ಅಭ್ಯರ್ಥಿ ಎಂದು ಪರಿಗಣಿಸಲಾಗುತ್ತದೆ. ಇದರ ಆಧಾರದ ಮೇಲೆ ಒಟ್ಟು 12 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬೆಂಬಲಿತರು 7 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಮೇಲುಗೈ ಸಾಧಿಸಿದ್ದಾರೆ. ಬಿಜೆಪಿ ಬೆಂಬಲಿತರು 4 ಕ್ಷೇತ್ರಗಳಲ್ಲಿ ಇನ್ನುಳಿದ ಒಂದು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿ ಎಂದು ಕರೆಯುತ್ತಿರುವ ವರ್ತಕರ ಕ್ಷೇತ್ರದಿಂದ ಗೆಲುವು ಸಾಧಿಸಿರುವ ವೆಂಕಟರಾವ್ ಅವರನ್ನು ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿತ್ತು. ಇವರು ಗೆಲುವು ಸಾಧಿಸಿದ ನಂತರ ಕಾಂಗ್ರೆಸ್ ಕಚೇರಿಗೆ ತೆರಳಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಂದ ಅಭಿನಂದನೆ ಸ್ವೀಕರಿಸಿದ್ದಾರೆ. ಹೀಗಾಗಿ, ಕಾಂಗ್ರೆಸ್ ಪಕ್ಷದವರು ನಾವು ಒಟ್ಟು 8 ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ.

ಆದರೆ, ವೆಂಕಟರಾವ್ ಅವರು ಬಿಜೆಪಿ ಕಚೇರಿಗೂ ತೆರಳಿ ಅಭಿನಂದನೆ ಸ್ವೀಕರಿಸಿದ್ದಾರೆ. ಹಾಗಾಗಿ, ಅವರು ಕೂಡ ಬಿಜೆಪಿ 5 ಸ್ಥಾನದಲ್ಲಿ ಗೆಲುವು ಸಾಧಿಸಿದೆ ಎಂದು ಹೇಳಿಕೊಳ್ಳುತ್ತಿದೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಪಕ್ಷೇತರ ಅಭ್ಯರ್ಥಿ ವೆಂಕಟರಾವ್ ಅವರು, ನನ್ನ ಗೆಲುವಿಗೆ ಎಲ್ಲಾ ಪಕ್ಷದ ಮುಖಂಡರ ಸಹಕಾರ ಕಾರಣವಾಗಿದೆ. ನಾನು ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದೇನೆ. ಹಾಗಾಗಿ, ಸ್ವತಂತ್ರವಾಗಿಯೇ ಇರುತ್ತೇನೆ. ಎಪಿಎಂಸಿ ಅಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ನಾನು ಯಾರಿಗೆ ಬೆಂಬಲ ನೀಡಬೇಕು ಎಂದು ನಿರ್ಧರಿಸುತ್ತೇನೆ ಎಂದರು.

ಚಾಮರಾಜನಗರ ಎಪಿಎಂಸಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು 7 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರೂ ಸಹ ಬಿಜೆಪಿಯೂ ಸಹ ಅಷ್ಟೇ ಸಂಖ್ಯೆಯಲ್ಲಿ (7) ಸದಸ್ಯರನ್ನು ಹೊಂದಿದ್ದಂತೆ ಆಗಿದೆ.

ಬಿಜೆಪಿ ಗೆಲುವು ಸಾಧಿಸಿರುವ 4 ಕ್ಷೇತ್ರದೊಂದಿಗೆ ಸರ್ಕಾರ ಮೂವರನ್ನು ನಾಮನಿರ್ದೇಶನ ಮಾಡುತ್ತದೆ. ಇದು ಸೇರಿದರೆ 7 ಸದಸ್ಯರ ಬಲ ಆಗುತ್ತದೆ. ಹೀಗಾಗಿ ಬಿಜೆಪಿ ಕಾಂಗ್ರೆಸ್ ಸಮಬಲ ಹೊಂದಿದೆ.

ತೆಂಗು ಬೆಳೆಗಾರರ ಕ್ಷೇತ್ರದಿಂದ ಗೆದ್ದಿರುವ ಅರಕಲವಾಡಿ ಲಿಂಗಪ್ಪ ಅವರು ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರನ್ನು ಸೇರಿಸಿಕೊಂಡರೇ ಬಿಜೆಪಿ ಬಲ 8 ಆಗುತ್ತದೆ. ಆದರೆ, ವರ್ತಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ವೆಂಕಟರಾವ್ ಅವರು ಕಾಂಗ್ರೆಸ್ ಹಾಗೂ ಬಿಜೆಪಿ ಮುಖಂಡರಿಂದ ಅಭಿನಂದನೆ ಸ್ವೀಕರಿಸಿದ್ದಾರೆ. ಇವರು ಯಾರಿಗೆ ಬೆಂಬಲ ನೀಡಲಿದ್ದಾರೆ ಎಂಬ ಗೌಪ್ಯತೆಯನ್ನು ಬಿಟ್ಟುಕೊಟ್ಟಿಲ್ಲ. ಹಾಗಾಗಿ, ಅಧ್ಯಕ್ಷರ ಸ್ಥಾನದ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯೇ ನಿರ್ಣಾಯಕನಾಗುವ ಸಾಧ್ಯತೆಗಳು ಹೆಚ್ಚಾಗಿದೆ.

ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಿಗದಿ ಆಗಲು ಇನ್ನೂ ಸ್ವಲ್ಪ ದಿನ ಸಮಯ ಇರುವುದರಿಂದ ರಾಜಕೀಯದಲ್ಲಿ ಏನಾದರೂ ಬದಲಾವಣೆಯಾಗುವುದೇ ಎಂಬುದನ್ನು ಕಾದು ನೋಡಬೇಕಾಗಿದೆ.

ಕಾಂಗ್ರೆಸ್ ಗೆದ್ದ ಕ್ಷೇತ್ರಗಳು: ನಾಗವಳ್ಳಿ ಕ್ಷೇತ್ರ– ಆಲೂರು ಪ್ರದೀಪ್, ಬದನಗುಪ್ಪೆ ಕ್ಷೇತ್ರ– ಎಂ.ಬಿ.ಗುರುಸ್ವಾಮಿ, ಉಡಿಗಾಲ ಕ್ಷೇತ್ರ– ಪ್ರೇಮ, ಹರದನಹಳ್ಳಿ ಕ್ಷೇತ್ರ– ಹೆಚ್.ಎಸ್. ಮಹದೇವಸ್ವಾಮಿ, ಹೊಂಗನೂರು ಕ್ಷೇತ್ರ– ಜಿ.ಎಂ.ರವಿಶಂಕರ ಮೂರ್ತಿ, ಯಳಂದೂರು(ಕಸಬಾ)– ಎಂ.ಮಹೇಶ್, ಅಗರ ಕ್ಷೇತ್ರ– ಎಲ್.ರಾಮಚಂದ್ರ.

ಬಿಜೆಪಿ ಗೆದ್ದ ಕ್ಷೇತ್ರಗಳು: ಚಾಮರಾಜನಗರ ಕ್ಷೇತ್ರ– ಎಂ.ಮನೋಜ್‌ಪಾಟೀಲ್, ಹರವೆ ಕ್ಷೇತ್ರ– ಮಹದೇವಪ್ರಸಾದ್, ಅಮಚವಾಡಿ– ರವಿಕುಮಾರ್, ಉಮ್ಮತ್ತೂರು– ಕಲಾವತಿ.

ವರ್ತಕರ ಕ್ಷೇತ್ರ: ವೆಂಕಟರಾವ್.

ಗುಂಡ್ಲುಪೇಟೆಯಲ್ಲಿ ಕಾಂಗ್ರೆಸ್–ಬಿಜೆಪಿ ಸಮಬಲ



ಈ ಹಿಂದೆಯೂ ತಾಲೂಕಿನಲ್ಲಿ ನಡೆದಿದ್ದ ಗ್ರಾಮ ಪಂಚಾಯಿತಿ ಹಾಗೂ ಇತರ ಚುನಾವಣೆಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಸಮಬಲದ ಹೋರಾಟ ನಡೆಸಿದೆ. ಈ ಬಾರಿ ಕಾಂಗ್ರೆಸ್ 6 ಸ್ಥಾನ ಗಳಿಸಿ ತನ್ನ ಪ್ರಾಬಲ್ಯ ಪ್ರದರ್ಶಿಸಿದೆ. ಇದು ಕಾರ್ಯಕರ್ತರ ಗೆಲುವಾಗಿದ್ದು, ಜನತೆಯ ತೀರ್ಪನ್ನು ಸ್ವೀಕರಿಸಿದ್ದೇವೆ ಮತ್ತು ಕೃತಜ್ಞತೆಯನ್ನು ಅರ್ಪಿಸುತ್ತೇನೆ.

–*ಹೆಚ್.ಎಂ.ಗಣೇಶ್‌ಪ್ರಸಾದ್,* ಕಾಂಗ್ರೆಸ್ ಮುಖಂಡರು.



ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ತೀವ್ರ ಅಪಪ್ರಚಾರದ ನಡುವೆಯೂ ತಾಲೂಕಿನ ಜನತೆ ಕಳೆದ ಬಾರಿ 2 ಸದಸ್ಯರಿದ್ದ ಬಿಜೆಪಿಗೆ ಈ ಬಾರಿ 6 ಸ್ಥಾನ ನೀಡಿ ಬೆಂಬಲಿಸಿದ್ದಾರೆ. ನಾಮನಿರ್ದೇಶಿತ ಸದಸ್ಯರ ನೆರವಿನಿಂದ ಆಡಳಿತ ಮಂಡಲಿ ಬಿಜೆಪಿ ತೆಕ್ಕೆಗೆ ಬರಲಿದೆ. ಮತದಾರರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

– *ಸಿ.ಎಸ್.ನಿರಂಜನಕುಮಾರ್,* ಶಾಸಕರು.

ಗುಂಡ್ಲುಪೇಟೆ, ಏ.20(ಸೋಮ್.ಜಿ)– ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು ಬಿಜೆಪಿ ಮತ್ತು ಕಾಂಗ್ರೆಸ್ ತಲಾ 6 ಸ್ಥಾನಗಳನ್ನು ಗಳಿಸಿಕೊಳ್ಳುವುದರೊಂದಿಗೆ ಸಮಬಲದ ಪ್ರದರ್ಶನ ಮಾಡಿದೆ.

ಪಟ್ಟಣದ ದೊಡ್ಡಹುಂಡಿ ಭೋಗಪ್ಪ ಸರ್ಕಾರಿ ಪದವಿಪೂರ್ವ ಕಾಲೇಜಿನ ಮತ ಎಣಿಕೆ ಕೇಂದ್ರದಲ್ಲಿ ತಹಸೀಲ್ದಾರ್ ಹಾಗೂ ಚುನಾವಣಾಧಿಕಾರಿಯಾದ ರವಿಶಂಕರ್ ಅವರ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ನಡುವೆ ಮತ ಎಣಿಕೆ ಮಾಡಲಾಯಿತು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನಿರ್ದೇಶಕರ ಒಟ್ಟು 12 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ತಲಾ 6 ಸ್ಥಾನಗಳನ್ನು ಗಳಿಸಿಕೊಂಡಿದೆ.

ಬೇಗೂರು ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿ ವಿರೂಪಾಕ್ಷ (1416) ಬಿಜೆಪಿಯ ಮಹದೇವ ಪ್ರಸಾದ್ (1386) ವಿರುದ್ಧ 30 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಕಬ್ಬಹಳ್ಳಿ ಕ್ಷೇತ್ರದ ಭಾಗ್ಯ (1037) ತಮ್ಮ ಪ್ರತಿಸ್ಪರ್ಧಿ ಗಾಯತ್ರಿ(930) ವಿರುದ್ಧ 107 ಮತಗಳ ಅಂತರ, ಸೋಮಹಳ್ಳಿ ಕ್ಷೇತ್ರದ ಬಿಜೆಪಿಯ ಶಿವಪ್ರಸಾದ್ (1548) ಕಾಂಗ್ರೆಸ್‌ನ ಶಿವನಾಗಪ್ಪ(916) ವಿರುದ್ಧ 632 ಮತಗಳ ಅಂತರ, ಹೊರೆಯಾಲ ಕಾಂಗ್ರೆಸ್‌ನ ಆರ್.ಎಸ್.ನಾಗರಾಜು(1448) ಬಿಜೆಪಿಯ ಕೆಆರ್.ಲೋಕೇಶ್ (1148) ವಿರುದ್ಧ 300 ಮತಗಳ ಅಂತರ, ಬರಗಿಯ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಬಿ. ನಾಗರಾಜು(1292) ಬಿಜೆಪಿಯ ಮಾಡ್ರಹಳ್ಳಿ ನಾಗೇಂದ್ರ(1163) ವಿರುದ್ಧ 129 ಮತಗಳ ಅಂತರ, ಬೊಮ್ಮಲಾಪುರ ಕ್ಷೇತ್ರದ ಬಿಜೆಪಿಯ ನಾಗರತ್ನ(1237) ಕಾಂಗ್ರೆಸ್‌ನ ಮಹದೇವಮ್ಮ(890) ವಿರುದ್ಧ 347 ಮತಗಳ ಅಂತರ, ಕಣ್ಣೇಗಾಲ ಕ್ಷೇತ್ರದ ಬಿಜೆಪಿಯ ಅರಸಶೆಟ್ಟಿ(1530) ಕಾಂಗ್ರೆಸ್‌ನ ಮಹದೇವಶೆಟ್ಟಿ(1336) ವಿರುದ್ಧ 194 ಮತಗಳ ಅಂತರ, ಹಂಗಳ ಕಾಂಗ್ರೆಸ್‌ನ ನಾಗರಾಜು(1260) ಬಿಜೆಪಿಯ ಹೂವಯ್ಯ(829) ವಿರುದ್ಧ 431 ಮತಗಳ ಅಂತರ, ವಿಜಯಪುರ ಕಾಂಗ್ರೆಸ್‌ನ ಎಂ.ಎನ್. ಬಸವರಾಜಪ್ಪ(1457) ಬಿಜೆಪಿಯ ಸೋಮಪ್ಪ(1144) ವಿರುದ್ಧ 313 ಮತಗಳ ಅಂತರ, ತೆರಕಣಾಂಬಿಯ ಕಾಂಗ್ರೆಸ್ ಅಭ್ಯರ್ಥಿ ಪಿ.ಮಹದೇವಪ್ಪ (1053) ಬಿಜೆಪಿಯ ಮಹೇಶ್ (1015) ವಿರುದ್ಧ 28 ಮತಗಳ ಅಂತರ, ಕುಂದಕೆರೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವೆಂಕಟನಾಯ್ಕ (1712) ಕಾಂಗ್ರೆಸ್‌ನ ಜೋಗನಾಯ್ಕ (1196) ವಿರುದ್ಧ 516 ಮತಗಳ ಅಂತರ, ವರ್ತಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಾಡ್ರಹಳ್ಳಿ ಮಹದೇವಪ್ಪ(150) ಕಾಂಗ್ರೆಸ್‌ನ ಮಂಜುನಾಥ್ (133) ವಿರುದ್ಧ 17 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ.

ನೀರಾವರಿ ಯೋಜನೆ ಪೂರ್ಣಗೊಳಿಸಲು ಜೆಡಿಎಸ್‌ಗೆ ಬಹುಮತ ನೀಡಿ: ಹೆಚ್‌ಡಿಕೆ



ಹನೂರು, ಏ.20(ಸೋಮು)– ಜೆಡಿಎಸ್ ಪಕ್ಷಕ್ಕೆ ಒಂದು ಬಾರಿ ಪೂರ್ಣ ಪ್ರಮಾಣದೊಂದಿಗೆ ಬಹುಮತ ನೀಡಿ, ರಾಜ್ಯದ ರೈತರಿಗೆ ಅವಶ್ಯಕವಾದ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುತ್ತೇವೆ. ಇಲ್ಲದಿದ್ದಲ್ಲಿ ಜೆಡಿಎಸ್ ಪಕ್ಷವನ್ನು ವಿಸರ್ಜಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಹನೂರು ಪಟ್ಟಣದ ಮಲೆ ಮಹದೇಶ್ವರ ಕ್ರೀಡಾಂಗಣದಲ್ಲಿ ಜೆಡಿಎಸ್‌ನಿಂದ ಆಯೋಜಿಸಲಾಗಿದ್ದ 'ಜನತಾ ಜಲಧಾರೆ ಕಾರ್ಯಕ್ರಮ' ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ನೀರಾವರಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ 4 ಲಕ್ಷ ಕೋಟಿಯಿಂದ 5 ಲಕ್ಷ ಕೋಟಿ ಅನುದಾನದ ಅವಶ್ಯಕತೆಯಿದೆ. ಆದರೆ, ಪ್ರಸ್ತುತ ಸರ್ಕಾರಗಳು 8 ಸಾವಿರ ಕೋಟಿ ಅನುದಾನವನ್ನಷ್ಟೇ ಖರ್ಚು ಮಾಡುತ್ತಿವೆ. ಇದೇ ರೀತಿಯಾದರೆ ಯೋಜನೆಗಳು ಪೂರ್ಣಗೊಳ್ಳಲು ಕನಿಷ್ಠ 100 ವರ್ಷಗಳಾದರು ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ಜೆಡಿಎಸ್ ಪಕ್ಷಕ್ಕೆ ಪೂರ್ಣಬಹುಮತದ ಅಧಿಕಾರ ನೀಡಿದಲ್ಲಿ 5 ವರ್ಷಗಳಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ: ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಿ ಸಮಸ್ಯೆ ಬಗೆಹರಿಸಬೇಕಾದ ಕಾಂಗ್ರೆಸ್‌ನವರು ಈಶ್ವರಪ್ಪನವರ ಬಂಧನಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಈಶ್ವರಪ್ಪನವರ ಬಂಧನವಾದರೆ ರಾಜ್ಯದ ರೈತರ ಸಮಸ್ಯೆ ಬಗೆಹರಿಯುತ್ತದೆಯೇ ಎಂದು ಸಭೆಯಲ್ಲಿ ಆಸೀನರಾಗಿದ್ದ ಕಾಯಕರ್ತರನ್ನು ಪ್ರಶ್ನಿಸಿದರು. ರಾಜ್ಯದಲ್ಲಿ ಶೇ.40 ಕಮಿಷನ್ ಸರ್ಕಾರ ಅಧಿಕಾರದಲ್ಲಿದೆ ಅದನ್ನು ಕಿತ್ತೊಗೆಯಬೇಕು ಎನ್ನುತ್ತಿದ್ದಾರೆ. ಈ ಶೇ.40 ಸರ್ಕಾರವನ್ನು ಅಧಿಕಾರಕ್ಕೆ ತಂದವರು ಯಾರು? ಇಂತಹ ಕೆಟ್ಟ ಸರ್ಕಾರವನ್ನು ಅಧಿಕಾರಕ್ಕೆ ತಂದ ಕೀರ್ತಿ ಕಾಂಗ್ರೆಸ್ ನಾಯಕರಿಗೆ ಸಲ್ಲುತ್ತದೆ ಎಂದು ಟೀಕಿಸಿದರು.

ಕಾರ್‍ಯಕ್ರಮದಲ್ಲಿ ಟಿ.ನರಸೀಪುರ ಶಾಸಕ ಅಶ್ವಿನ್ ಕುಮಾರ್, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಮಂಜುನಾಥ್, ಮುಖಂಡರಾದ ಶ್ರೀನಿವಾಸ್, ನರಸಿಂಹ, ಮುಳ್ಳೂರು ಶಿವಮಲ್ಲು, ಸೈಯದ್ ಅಕ್ರಂ, ಜಸೀಂ, ಮಹೇಶ್‌ಗೌಡ, ಉಷಾ, ಶಾಗ್ಯ ಬಾಬು, ರವೀಂದ್ರ ಇನ್ನಿತರ ಮುಖಂಡರು ಹಾಜರಿದ್ದರು.

ಅಪ್ರಾಪ್ತೆ ಅಪಹರಿಸಿ ವಿವಾಹ: ಆರೋಪಿಗೆ ಶಿಕ್ಷೆ

ಚಾಮರಾಜನಗರ: ತಾಲೂಕಿನ ಗ್ರಾಮವೊಂದರಲ್ಲಿ ಅಪ್ರಾಪ್ತೆ ಅಪಹರಿಸಿ ಮದುವೆಯಾಗಿ ದೈಹಿಕ ಸಂಬಂಧ ಬೆಳೆಸಿದ ಆರೋಪಿಗೆ ಶಿಕ್ಷೆ ವಿಧಿಸಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತೀರ್ಪು ನೀಡಿದೆ.

ತಾಲೂಕಿನ ಹೊನ್ನಹಳ್ಳಿ ಗ್ರಾಮದ ಮಹೇಶ ಅಲಿಯಾಸ್ ಮಾಯಿ (28) ಶಿಕ್ಷೆಗೆ ಗುರಿಯಾದ ಯುವಕ. ಈತ 2019ರ ಮಾರ್ಚ್ 17ರಂದು 15 ವರ್ಷದ ಬಾಲಕಿಯನ್ನು ಅಪಹರಿಸಿ ಮದುವೆಯಾಗಿ ನಂತರ ಬೆಂಗಳೂರಿಗೆ ತೆರಳಿ ಬಾಲಕಿಯೊಂದಿಗೆ ದೈಹಿಕ ಸಂಬಂಧ ಮಾಡಿದ ಆರೋಪ ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ವಿಚಾರಣೆ ನಡೆದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅವರು ಆರೋಪಿತ ವ್ಯಕ್ತಿಗೆ ಭಾರತೀಯ ದಂಡ ಸಂಹಿತೆ ಕಲಂ 366ಕ್ಕೆ 5 ವರ್ಷ ಸಾದಾ ಸಜೆ, 10 ಸಾವಿರ ರೂ ದಂಡ ವಿಧಿಸಿದೆ. ದಂಡ ತೆರಲು ತಪ್ಪಿದ್ದಲ್ಲಿ ಒಂದು ತಿಂಗಳ ಸಜೆ, 376 ಐಪಿಸಿಗೆ ಮತ್ತು ಪೋಕ್ಸೋ ಕಾಯ್ದೆ ಕಲಂ 4ರ ಅನ್ವಯ 20 ವರ್ಷ ಸಾದಾ ಸಜೆ 10 ಸಾವಿರ ರೂ. ದಂಡ ಹಾಗೂ ದಂಡ ತೆರಲು ತಪ್ಪಿದ್ದಲ್ಲಿ ಒಂದು ತಿಂಗಳು ಸಜೆ ಮತ್ತು ಐಪಿಸಿ ಕಲಂ 376 ಮತ್ತು ಪೋಕ್ಸೋ ಕಾಯ್ದೆ ಕಲಂ 6ರ ಅನ್ವಯ 20 ವರ್ಷ ಕಠಿಣ ಶಿಕ್ಷೆ 10 ಸಾವಿರ ರೂ ದಂಡ, ದಂಡ ತೆರಲು ತಪ್ಪಿದ್ದಲ್ಲಿ ಒಂದು ತಿಂಗಳು ಸಜೆ, ಪೋಕ್ಸೊ ಕಾಯ್ದೆ ಕಲಂ 12ರ ಅನ್ವಯ ಒಂದು ವರ್ಷ ಸಾದಾ ಸಜೆ 5 ಸಾವಿರ ರೂ. ದಂಡ, ದಂಡ ತೆರಲು ತಪ್ಪಿದ್ದಲ್ಲಿ ಒಂದು ತಿಂಗಳ ಸಜೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಕಲಂ 9ರ ಅನ್ವಯ 2 ವರ್ಷ ಸಾದಾ ಸಜೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಕೆಯೋಗೇಶ್ ವಾದ ಮಂಡಿಸಿದ್ದರು.

ಒಂದನೇ ಪುಟದಿಂದ

ಕೊಡಗಿನ 6 ಮಂದಿ ಸಾವು

ಮಹೋತ್ಸವದಲ್ಲಿ ಭಾಗವಹಿಸಲು ಪಾಲಿಬೆಟ್ಟದಿಂದ ತಮ್ಮ ಬೊಲೆರೊ ವಾಹನ (ಕೆಎ 03, ಎಂಜಿ-6455)ದಲ್ಲಿ ಈ 9 ಮಂದಿ ಬೆಳಗ್ಗೆ ಆಗಮಿಸಿದ್ದರು.

ಮದುವೆ ಮುಗಿಸಿಕೊಂಡು ಮಧ್ಯಾಹ್ನ ಪಾಲಿಬೆಟ್ಟಕ್ಕೆ ಹೋಗುತ್ತಿದ್ದಾಗ, ಚಾಲಕ ಸಂತೋಷ್ ಅವರ ನಿಯಂತ್ರಣ ತಪ್ಪಿದ ಬೊಲೆರೊ, ರಸ್ತೆ ಬದಿಯ ಮರಕ್ಕೆ ಮಧ್ಯಾಹ್ನ ಸುಮಾರು 3.30ರಲ್ಲಿ ಡಿಕ್ಕಿ ಹೊಡೆದಿದ್ದು, ಇದರಿಂದ ಮರದ ಮುಂದೆ ಚಾಚಿಕೊಂಡಿದ್ದ ಕೊಂಬೆಯೊಂದು ಬೊಲೆರೊ ವಾಹನ ಮುಂಭಾಗ ಗ್ಲಾಸ್ ಭೇದಿಸಿ, ಒಳ ನುಗ್ಗಿದ್ದರಿಂದ ಚಾಲಕ ಸೇರಿ 6 ಮಂದಿ ತೀವ್ರವಾಗಿ ಗಾಯಗೊಂಡು ವಾಹನದಲ್ಲೇ ಸಾವನ್ನಪ್ಪಿದರು.

ವಾಹನದ ಹಿಂಭಾಗದ ಸೀಟಿನಲ್ಲಿ ಕುಳಿತಿದ್ದ ದಿಲೀಪ್, ಕೀರ್ತನಾ ಮತ್ತು ಎಂಜೆಲ್ ಅವರುಗಳು ಗಾಯಗೊಂಡು, ಅದೃಷ್ಟವಶಾತ್ ಬದುಕುಳಿದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಹುಣಸೂರು ಪಟ್ಟಣದಿಂದ ಸುಮಾರು 7 ಕಿ.ಮೀ. ದೂರದಲ್ಲಿ ಈ ಅಪಘಾತ ಸಂಭವಿಸಿದ್ದು, ವಿಷಯ ತಿಳಿದ ಕೂಡಲೇ ಪೊಲೀಸರು ಸ್ಥಳಕ್ಕೆ ತೆರಳಿ, ಸಾರ್ವಜನಿಕರ ಸಹಾಯದಿಂದ ಮರದ ಕೊಂಬೆಯಿಂದ ವಾಹನವನ್ನು ಬೇರ್ಪಡಿಸಿ, ಸಾವನ್ನಪ್ಪಿದವರ ದೇಹಗಳನ್ನು ವಾಹನದಲ್ಲಿ ಹುಣಸೂರಿನ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದರಲ್ಲದೆ, ಗಾಯಗೊಂಡಿದ್ದ ಮೂವರನ್ನೂ ಹುಣಸೂರಿನ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಿದ್ದಾರೆ. ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ಅಡಿಷನಲ್ ಎಸ್ಪಿ ಶಿವಕುಮಾರ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಅಪಘಾತದಿಂದ ಬೊಲೆರೊ ವಾಹನ ಸಂಪೂರ್ಣ ನಜ್ಜುಗುಜ್ಜಾಗಿದೆ.

ಭಾನುವಾರ ಮದುವೆ: ಈ ಅಪಘಾತದಲ್ಲಿ ಸಾವನ್ನಪ್ಪಿದ ಪಾಲಿಬೆಟ್ಟದ ಬಾಳಪ್ಪನವರ ಪುತ್ರ ವಿನುತ್ ಅವರ ವಿವಾಹ ಭಾನುವಾರ (ಏ.24) ನಿಗದಿಯಾಗಿತ್ತು. ವಿವಾಹಕ್ಕೆ ಕೇವಲ ನಾಲ್ಕು ದಿನವಿದೆ. ಈ ಅಪಘಾತದಲ್ಲಿ ವಿನುತ್ ಸಾವನ್ನಪ್ಪಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾಗಿ ಪೊಲೀಸರು ಹೇಳಿದ್ದಾರೆ. ಅಪಘಾತದಲ್ಲಿ ಮೃತಪಟ್ಟವರ ಮೃತದೇಹಗಳನ್ನು ಗಾಯಗೊಂಡವರ ಕುಟುಂಬಸ್ಥರು ಹುಣಸೂರು ಆಸ್ಪತ್ರೆಗೆ ಆಗಮಿಸಿ ಗೋಳಾಡುತ್ತಿದ್ದಾರೆ. ಗಾಯಗೊಂಡವರ ಸಂಬಂಧಿಕರೂ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಗಾಯಾಳುಗಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಾರೆ. ಮೃತಪಟ್ಟವರೆಲ್ಲರೂ ಮಧ್ಯಮ ವರ್ಗದವರೇ ಆಗಿದ್ದು, ಸಂತೋಷ್ ಡ್ರೈವರ್ (ಬೊಲೆರೊ ಚಾಲನೆ ಮಾಡುತ್ತಿದ್ದವರು). ಅನಿಲ್ ಗುತ್ತಿಗೆದಾರ, ರಾಜೇಶ್ ಗಾರೆ ಕೆಲಸದವ, ದಯಾನಂದ್ ಟಿಪ್ಪರ್ ಚಾಲಕ, ಬಾಬು ಪೆಟ್ರೋಲ್ ಬಂಕ್‌ನಲ್ಲಿ ಕೆಲಸಗಾರರಾಗಿದ್ದರು.

ರಾಯಚೂರು ವರದಿ: ಬೆಂಗಳೂರಿನಲ್ಲಿ ಮೃತಪಟ್ಟಿದ್ದ ಸ್ನೇಹಿತನ ಶವವನ್ನು ಊರಿಗೆ ಕೊಂಡೊಯ್ಯುವಾಗ ಮಾರ್ಗಮಧ್ಯೆ ನಡೆದ ಅಪಘಾತದಲ್ಲಿ ಮೂವರು ಮೃತಪಟ್ಟ ಘಟನೆ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನ ಗೊಲ್ಲಪಲ್ಲಿ ಬಳಿ ಇಂದು ಮುಂಜಾನೆ ಸಂಭವಿಸಿದೆ. ಮೃತಪಟ್ಟವರನ್ನು ಅಂಬರೀಶ್(30), ಗೋವಿಂದ(35), ದೇವರಾಜ್(34) ಎಂದು ಗುರುತಿಸಲಾಗಿದ್ದು, ಇವರು ಪ್ರಯಾಣಿಸುತ್ತಿದ್ದ ಕಾರಿನಲ್ಲಿದ್ದ ಮತ್ತಿಬ್ಬರು ಗಾಯಗೊಂಡಿದ್ದಾರೆ. ಮೃತರು ಬೆಂಗಳೂರಿನ ನಾಯಂಡಹಳ್ಳಿಯಲ್ಲಿ ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಇವರ ಸ್ನೇಹಿತ ಬಸಯ್ಯ ಎಂಬಾತ ಹೃದಯಾಘಾತದಿಂದ ಮೃತಪಟ್ಟಿದ್ದು, ಆತನ ಶವವನ್ನು ಊರಿಗೆ ಕೊಂಡೊಯ್ಯುವಾಗ ಅಂಬುಲೆನ್ಸ್ ಜೊತೆ ಹೋಗುತ್ತಿದ್ದ ಇವರ ಕಾರಿಗೆ ಎದುರಿನಿಂದ ಬಂದ ಇವರ ಕಾರಿಗೆ ಎದುರಿನಿಂದ ಬಂದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ.

ಮಾರುಕಟ್ಟೆ ವ್ಯಾಪಾರಿಗಳ ಪ್ರತಿಭಟನೆ

ಆನೆ ಸಾರೋಟ್ ರಸ್ತೆಯಲ್ಲಿರುವ ಫ್ಯಾನ್ಸಿಸ್ಟೋರ್ಸ್, ಸಿಪಿ ಅಂಗಡಿಗಳು, ಪುಸ್ತಕದ ಅಂಗಡಿಗಳು, ಬಟ್ಟೆ ಅಂಗಡಿ, ತೆಂಗಿನಕಾಯಿ, ಬಾಳೆಕಾಯಿ ಸೇರಿದಂತೆ ಇನ್ನಿತರ ಮಳಿಗೆಗಳ ಮಾಲೀಕರು ಹಾಗೂ ಕೆಲಸಗಾರರು ಪಾಲ್ಗೊಂಡು ಬೆಂಬಲ ನೀಡಿದರು. ವ್ಯಾಪಾರಿಗಳ ಪ್ರತಿಭಟನೆ ಹಿನ್ನೆಲೆ ಯಲ್ಲಿ ದೇವರಾಜ ಮಾರುಕಟ್ಟೆಯ ಎಲ್ಲಾ ದ್ವಾರಗಳಿಗೂ ಬೀಗ ಹಾಕಿ ಮಾರುಕಟ್ಟೆಗೆ ಯಾರೂ ಬರದಂತೆ ತಡೆಗಟ್ಟಲಾಯಿತು. ವಿವಿಧೆಡೆಯಿಂದ ಬಂದ ಹೂವು, ಹಣ್ಣು ಇನ್ನಿತರ ವಸ್ತುಗಳನ್ನು ಮಾರುಕಟ್ಟೆಯ ದ್ವಾರದಲ್ಲೇ ಇರಿಸಲಾಗಿತ್ತು ಪ್ರತಿಭಟನೆ ಮುಗಿದ ನಂತರ ಎಲ್ಲಾ ವ್ಯಾಪಾರಿಗಳ ವಾಹನಗಳು ಬಳಿಕವಷ್ಟೇ ಮಾರುಕಟ್ಟೆಯ ದ್ವಾರ ತೆರೆಯಲಾಯಿತು. ಮಧ್ಯಾಹ್ನ 2 ಗಂಟೆ ನಂತರ ಮಾರುಕಟ್ಟೆಯಲ್ಲಿ ವಹಿವಾಟು ಎಂದಿನಂತೆ ಆರಂಭವಾಯಿತು. ಚಿಕ್ಕಗಡಿಯಾರ ವೃತ್ತದ ಬಳಿ ಆಯೋಜಿಸಿದ್ದ ಪ್ರತಿಭಟನಾ ಸಭೆಗೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಆಗಮಿಸಿ ಬೆಂಬಲ ವ್ಯಕ್ತಪಡಿಸಿದರು. ಬಳಿಕ ಮಾತನಾಡಿದ ಅವರು, ನಾವೆಲ್ಲಾ ಚಿಕ್ಕಂದಿನಿಂದ ನಮ್ಮ ಪೂರ್ವಜರ ಮಾರ್ಗದರ್ಶನದಲ್ಲಿ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ನೋಡಿಕೊಂಡು ಬೆಳೆದಿದ್ದೇವೆ. ಈ ಪಾರಂಪರಿಕ ಕಟ್ಟಡಗಳು ವರ್ತಕರಿಗೆ ಮಾತ್ರ ಸೀಮಿತಗೊಂಡಿಲ್ಲ. ಅವುಗಳು ಮೈಸೂರಿನ ಜನತೆಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿವೆ ಎಂದರು.

ಪಾರಂಪರಿಕ ಕಟ್ಟಡಗಳು ನಮ್ಮ ಸಂಸ್ಕೃತಿ, ಕಲೆಯೂ ಆಗಿವೆ. ಮೈಸೂರಿನ ಜನತೆ ದೇವಾಲಯಕ್ಕೆ ಹೋಗಿ ಬರುವಂತೆ ಮಾರುಕಟ್ಟೆಗೆ ಹೋಗಿ ತಮಗೆ ಬೇಕಾದ ಹಣ್ಣು-ತರಕಾರಿ ಖರೀದಿಸುವ ಸಂಪ್ರದಾಯವನ್ನು ಮೊದಲಿನಿಂದಲೂ ಅನುಸರಿಸುತ್ತಾ ಬಂದಿದ್ದಾರೆ. ಇಂತಹ ಕಟ್ಟಡವನ್ನು ನೆಲಸಮ ಮಾಡುವುದು ಸರಿಯಲ್ಲ. ವರ್ತಕರು, ವ್ಯಾಪಾರಿಗಳು ಕಳೆದ 5-6 ವರ್ಷಗಳಿಂದ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡುತ್ತಾ ಬಂದಿದ್ದೇವೆ. ಮುಂದಿನ ದಿನಗಳಲ್ಲೂ ಈ ಕಟ್ಟಡಗಳ ರಕ್ಷಣೆಗಾಗಿ ನಮ್ಮ ಬೆಂಬಲ ಇದ್ದೇ ಇರುತ್ತದೆ. ವರ್ತಕರು ಶಾಂತಿಯುತವಾದ ಹೋರಾಟ ನಡೆಸಬೇಕು. ನಿಮ್ಮ ಹೋರಾಟಕ್ಕೆ ಸರ್ಕಾರ ಮನ್ನಣೆ ನೀಡಲಿದೆ ಎಂಬ ವಿಶ್ವಾಸವಿದೆ ಎಂದು ಭರವಸೆ ನೀಡಿದರು. ಇದೇ ವೇಳೆ ವೇದಿಕೆಯಲ್ಲಿ ಇಡಲಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಲಾಯಿತು. ಬಳಿಕ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ದೇವರಾಜ ಮಾರುಕಟ್ಟೆಯ ವ್ಯಾಪಾರಿಗಳು, ವರ್ತಕರು ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಮೆಟ್ರೋಪೋಲ್ ವೃತ್ತ, ವಿನೋಬಾ ರಸ್ತೆಯ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತಲುಪಿ ಮನವಿ ಸಲ್ಲಿಸಿದರು.

ದಾರಿಯುದ್ದಕ್ಕೂ ದೇವರಾಜ ಮಾರುಕಟ್ಟೆ ನಮ್ಮ ಜೀವನಾಡಿ ಇದನ್ನು ಉಳಿಸಿ, ಮೈಸೂರಿನ ಪರಂಪರೆಯ ಹಿರಿಮೆ ದೇವರಾಜ ಮಾರುಕಟ್ಟೆ, ಮಹಾರಾಜರ ಕಾಲದ ಪರಂಪರೆ ಮೈಸೂರಿನ ಪಾರಂಪರಿಕ ಸಂಸ್ಕೃತಿ, ನಮಗೆ ಬೇಕು ನಮ್ಮ ಪರಂಪರೆ, ಮೈಸೂರು ಮಹಾರಾಜರ ಕೊಡುಗೆಗಳನ್ನು ಉಳಿಸಿ ಮೈಸೂರು ಪರಂಪರೆಯ ನಾಶಬೇಡ, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೋರಾಟಕ್ಕೆ ಜಯವಾಗಲಿ ಎನ್ನುವ ಭಿತ್ತಿಫಲಕಗಳನ್ನು ಹಿಡಿದಿದ್ದ ವ್ಯಾಪಾರಿಗಳು ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿದರು. ಈ ವೇಳೆ ದೇವರಾಜ ಮಾರುಕಟ್ಟೆಯ ಬಾಡಿಗೆದಾರರ ಸಂಘದ ಅಧ್ಯಕ್ಷ ಪೈಲ್ವಾನ್ ಎಸ್.ಮಹದೇವ, ಉಪಾಧ್ಯಕ್ಷ ಅಜೇಯ್ ಎಸ್.ಪತಂಗೆ, ಕೋಶಾಧ್ಯಕ್ಷ ಎಂ.ಎನ್.ನಾಗರಾಜ, ಪ್ರಧಾನ ಕಾರ್ಯದರ್ಶಿ ಪಿ.ಎನ್.ನಾಗರಾಜ್, ಕಾರ್ಯದರ್ಶಿ ಇಲಿಯಾಜ್ ಅಹಮ್ಮದ್, ಕಾರ್ಯಕಾರಿ ಸಮಿತಿ ಸದಸ್ಯರಾದ ಮನೀಷ್ ಕುಮಾರ್, ಎಲ್.ಮುಖೇಶ್, ಎಚ್.ವಿ.ನಾಗೇಂದ್ರ, ಉಮ್ಮರ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾಸಂಸ್ಥೆ ಅಧ್ಯಕ್ಷ ಕೆ.ಬಿ.ಬಾಲಕೃಷ್ಣ, ಕಾರ್ಯದರ್ಶಿ ಶಿವಾಜಿರಾವ್, ಮುಖಂಡರಾದ ಮಾಧು, ಗೋಪಾಲ ಇನ್ನಿತರರು ಪಾಲ್ಗೊಂಡಿದ್ದರು.

ಸಮಿತಿ ಪುನಃ ರಚನೆಗೆ ಯದುವೀರ್ ಒತ್ತಾಯ

ಕಟ್ಟಡ ನೆಲಸಮಕ್ಕೆ ಸಲಹೆ ನೀಡಿರುವ ಸಮಿತಿ ಅವೈಜ್ಞಾನಿಕ ಎಂಬುದು ನಮ್ಮ ಭಾವನೆ. ಈ ಹಿನ್ನೆಲೆಯಲ್ಲಿ ನೈಜ ಹಾಗೂ ಪಾರಂಪರಿಕ ಕಟ್ಟಡಗಳನ್ನು ಉಳಿಸಲು ಅಗತ್ಯವಿರುವ ಸಲಹೆಗಳನ್ನು ಕೊಡಲು ಅನುಭವ ಹೊಂದಿದ ತಜ್ಞರು ಇರುವ ಪಾರಂಪರಿಕ ಸಮಿತಿಯನ್ನು ರಚಿಸಬೇಕು ಎಂದು ಆಗ್ರಹಿಸಿದರು. ಅಭಿವೃದ್ಧಿ ನೆಪದಲ್ಲಿ ಐತಿಹಾಸಿಕ ಕಟ್ಟಡಗಳನ್ನು ನಾಶ ಮಾಡುವುದು ಬೇಡ. ಪ್ರತಿಯೊಬ್ಬರ ಹೃದಯಕ್ಕೂ ದೇವರಾಜ ಮಾರುಕಟ್ಟೆ ಹತ್ತಿರವಾಗಿದೆ. ಈ ಹಿಂದೆ ಈ ಎರಡು ಕಟ್ಟಡಗಳನ್ನು ದುರಸ್ತಿ ಮಾಡಿದರೆ ಮುಂದಿನ 100 ವರ್ಷ ಬಾಳಿಕೆ ಬರುತ್ತದೆ ಎಂದು ತಜ್ಞರು ಹೇಳಿದ್ದರು. ಅವರು ಹೇಳಿರುವಂತೆ ಕಟ್ಟಡಗಳ ಸಂರಕ್ಷಣೆಗೆ ಅವಕಾಶ ವಿದೆ. ನಮ್ಮ ಪೂರ್ವಜರು ಕಟ್ಟಿದ ಪಾರಂಪರಿಕ ಕಟ್ಟಡಗಳನ್ನು ನೋಡಿ ನಾವು ಬೆಳೆದಿದ್ದೇವೆ. ಇದೇ ನಮ್ಮ ಮೈಸೂರಿನ ಕಲೆ. ಇದನ್ನು ಮುಂದಿನ ಪೀಳಿಗೆಗೆ ಉಳಿಸಬೇಕು. ಈ ಪರಂಪರೆಯನ್ನು ಕಾಪಾಡದಿದ್ದರೆ ಮೈಸೂರಿನ ಐಡೆಂಟಿಟಿ ಉಳಿಯಲ್ಲ ಎಂದು ನುಡಿದರು.

ಮೈಸೂರಿನ ನಾಗರಿಕ ಸಮುದಾಯ ಆರಂಭವಾಗಿದ್ದು ದೇವರಾಜ ಮಾರುಕಟ್ಟೆಯಿಂದ. ಸರ್ಕಾರ, ಸ್ಥಳೀಯ ಆಡಳಿತಗಳು ಈ ಬಗ್ಗೆ ಸರಿಯಾದ ಕ್ರಮಗಳನ್ನು ಕೈಗೊಳ್ಳುವ ವಿಶ್ವಾಸವಿದೆ. ಪಾರಂಪರಿಕ ಕಟ್ಟಡಗಳ ಉಳಿವಿಗೆ ಸದಾ ನನ್ನ ಬೆಂಬಲವಿದೆ. ನೂರಕ್ಕೆ ನೂರು ನಾನು ನಿಮ್ಮ ಜೊತೆ ಇರುತ್ತೇನೆ ಎಂದು ಭರವಸೆ ನೀಡಿದರು. ಯಾವುದೇ ಕಟ್ಟಡಕ್ಕೆ ಇಂತಿಷ್ಟೇ ಕಾಲಮಿತಿ ಇರುತ್ತದೆ ಎನ್ನುವುದಾದರೆ ಮೈಸೂರು ಅರಮನೆ ಕಟ್ಟಿ 100 ವರ್ಷಗಳ ಮೇಲಾಗಿದೆ. ಕಾಲಾವಧಿ ಮುಂದಿಟ್ಟುಕೊಂಡು ಅರಮನೆ ಕೆಡವಿ ಮತ್ತೊಂದು ಅರಮನೆ ಕಟ್ಟಲು ಆಗುತ್ತಾ?. ಮೈಸೂರಿನ ಸಂಸ್ಕೃತಿ ಪಾರಂಪರಿಕ ಕಟ್ಟಡಗಳ ಜತೆ ಬೆರೆತಿದೆ. ನೂರು ವರ್ಷಗಳು ಕಳೆದಿವೆ ಎಂದು ಕಟ್ಟಡಗಳನ್ನು ಒಡೆಯುತ್ತಾ ಹೋದರೆ ಪಾರಂಪರಿಕತೆ ಎಲ್ಲಿ ಉಳಿಯುತ್ತದೆ. ಒಂದು ಪಾರಂಪರಿಕ ಕಟ್ಟಡ ಕೆಡವಿದ ಮೇಲೆ ಅದೇ ಮಾದರಿಯಲ್ಲಿ ನಿರ್ಮಿಸಿದರೂ ಕೂಡ ಆ ಕಟ್ಟಡಕ್ಕೆ ಹಳೆಯ ಇತಿಹಾಸ ಬರುವುದಿಲ್ಲ. ಪಾರಂಪರಿಕ ಕಟ್ಟಡ ಉಳಿಸುವ ಹೊಸ ತಜ್ಞರ ಸಮಿತಿ ರಚನೆ ಮಾಡಬೇಕು. ಜನರ ಅಭಿಪ್ರಾಯಗಳು, ಭಾವನೆಗಳಿಗೆ ಸ್ಪಂದಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಜನರ ಭಾವನೆಗಳಿಗೆ ಸ್ಪಂದಿಸಿ ನೆಲಸಮಗೊಳಿಸುವ ತೀರ್ಮಾನ ಕೈಬಿಡುವ ವಿಶ್ವಾಸವಿದೆ ಎಂದರು.

ರಾಜಮನೆತನದ ಖಾಸಗಿ ಆಸ್ತಿಗಳು ಹಾಗೂ ಪಾರಂಪರಿಕ ಕಟ್ಟಡಗಳನ್ನು ರಕ್ಷಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಆದರೆ, ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡ ಸಾರ್ವಜನಿಕರ ಸ್ವತ್ತಾಗಿವೆ. ಅರಮನೆಯ ಆಸ್ತಿ ವಿಚಾರಕ್ಕೂ-ಸಾರ್ವಜನಿಕರ ಸ್ವತ್ತಿನ ಪಾರಂಪರಿಕ ಕಟ್ಟಡಗಳಿಗೂ ಸಂಬಂಧ ಕಲ್ಪಿಸುವುದು ಬೇಡ. ದೇವರಾಜ ಮಾರುಕಟ್ಟೆಯನ್ನು ನಮ್ಮ ವ್ಯಾಪ್ತಿಗೆ ಕೊಟ್ಟರೆ ನಾವೇ ಪುನಶ್ಚೇತನ ಮಾಡುತ್ತೇವೆಂಬ ಪ್ರಮೋದಾದೇವಿ ಒಡೆಯರ್ ಅವರ ಹೇಳಿಕೆಗೆ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ಅದನ್ನು ಅವರ ಬಳಿಯೇ ಕೇಳಿ. ನಾನು ಪ್ರತಿಕ್ರಿಯಿಸಲ್ಲ ಎಂದು ಸ್ಪಷ್ಟಪಡಿಸಿದರು.

ಕಾರಂಜಿ ಕೆರೆ ಮತ್ತಷ್ಟು ಅಭಿವೃದ್ಧಿಗೆ ಸಚಿವ ಕತ್ತಿ ಸಲಹೆ

ಮೈಸೂರು,ಏ.20-ಪ್ರವಾಸಿಗರನ್ನು ಸೆಳೆಯುವ ದೃಷ್ಟಿಯಿಂದ ಕಾರಂಜಿ ಕೆರೆಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸುವಂತೆ ಅರಣ್ಯ ಸಚಿವ ಉಮೇಶ್ ಕತ್ತಿ ಹೇಳಿದರು.

ಬುಧವಾರ ಬೆಳಗ್ಗೆ ಮೈಸೂರಿನ ಕಾರಂಜಿ ಕೆರೆಗೆ ಭೇಟಿ ನೀಡಿದ ಅವರು, ಕೆರೆ ಆವರಣದಲ್ಲಿರುವ ಪಕ್ಷಿ ವನ, ಬೋಟಿಂಗ್ ಸೇರಿದಂತೆ ಸುತ್ತಲಿನ ಪರಿಸರ ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿ, ಮತ್ತಷ್ಟು ಅಭಿವೃದ್ಧಿಗೊಳಿಸುವ ಮೂಲಕ ಪ್ರವಾಸಿಗರನ್ನು ಸೆಳೆಯುವ ಪ್ರಯತ್ನ ಮಾಡಬೇಕು ಎಂದು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರಿಗೆ ಸಲಹೆ ನೀಡಿದರು.

ಬಳಿಕ ಕುಪ್ಪಣ್ಣ ಪಾರ್ಕಿಗೆ ಭೇಟಿ ನೀಡಿದ ಸಚಿವರು, ಪಾರ್ಕಿನಲ್ಲಿರುವ ಗಾಜಿನ ಮನೆಯ ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಗಾಜಿನ ಮನೆಯನ್ನು ಕೇವಲ ದಸರಾ ವೇಳೆ ಬಳಕೆ ಮಾಡದೇ ವರ್ಷಕ್ಕೆ ಮೂರ್ನಾಲ್ಕು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸಾರ್ವಜನಿಕ ಪ್ರವೇಶಕ್ಕೆ ಮುಕ್ತವಾಗಿಸಬೇಕು ಎಂದು ಹೇಳಿದರು.

ನಂತರ ಗಣಪತಿ ಆಶ್ರಮದಲ್ಲಿರುವ ಶುಕ ವನಕ್ಕೂ ಸಹ ಸಚಿವರು ಭೇಟಿ ನೀಡಿದರು. ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಕಾರಂಜಿ ಕೆರೆಯಲ್ಲಿನ ಪ್ರವಾಸಿ ಸ್ನೇಹಿ ಆಕರ್ಷಣೆಗಳನ್ನು ಕಂಡು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಮತ್ತಷ್ಟು ಅಭಿವೃದ್ಧಿಗೊಳಿಸುವ ಸಂಬಂಧ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅದನ್ನು ಅನುಷ್ಠಾನಗೊಳಿಸುವ ವ್ಯವಸ್ಥೆ ಮಾಡಲಾಗುವುದು ಎಂದರು. ಈ ಸಂದರ್ಭದಲ್ಲಿ ಪ್ರಾಧಿಕಾರದ ಸದಸ್ಯೆ ಜ್ಯೋತಿ ರೇಚಣ್ಣ, ಡಿಸಿಎಫ್‌ಗಳಾದ ಕರಿಕಾಳನ್, ಕಮಲಾ ಕರಿಕಾಳನ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರುದ್ರೇಶ್ ಸೇರಿದಂತೆ ಅಧಿಕಾರಿಗಳು ಇದ್ದರು.



ಇಂದು ಕರ್ನಾಟಕಕ್ಕೆ ಕೇಜ್ರಿವಾಲ್ ಭೇಟಿ



ಬೆಂಗಳೂರು: ದೆಹಲಿ ಮುಖ್ಯಮಂತ್ರಿ ಹಾಗೂ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಗುರುವಾರ ಕರ್ನಾಟಕಕ್ಕೆ ಭೇಟಿ ನೀಡಲಿದ್ದಾರೆ. ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಯಲಿರುವ ರೈತರು, ಮಹಿಳೆಯರು, ಮತ್ತು ಯುವಕರ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಕರ್ನಾಟಕದಲ್ಲಿ ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಡೆಯಲಿದೆ ಅದಕ್ಕಾಗಿ ರಾಷ್ಟ್ರೀಯ ಹಾಗೂ ಸ್ಥಳೀಯ ಪಕ್ಷಗಳು ಈಗಾಗಲೇ ಕಸರತ್ತು ನಡೆಸುತ್ತಿವೆ. ಚುನಾವಣೆ ಹಿನ್ನೆಲೆಯಲ್ಲಿ ಅರವಿಂದ್ ಕೇಜ್ರಿವಾಲ್ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ. ದೆಹಲಿ ನಂತರ ಪಂಜಾಬ್‌ನಲ್ಲಿ ಎಎಪಿ ರೋಚಕ ಜಯ ಸಾಧಿಸಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ಆಡಳಿತದಿಂದ ಬೇಸತ್ತಿದ್ದ ಪಂಜಾಬ್ ಜನತೆ ದೆಹಲಿ ಮಾದರಿಗೆ ಮನಸೋತು ಎಎಪಿಗೆ ಅಧಿಕಾರವನ್ನು ನೀಡಿದ್ದಾರೆ.

ಗೌರಿಶಂಕರನಗರ, ದತ್ತನಗರದ ಮನೆಗಳಿಗೆ ಖಾತೆ ನೀಡಲು ಕ್ರಮ



ಮೈಸೂರು,ಏ.20(ಎಂಟಿವೈ)- ಕೆ.ಆರ್. ಕ್ಷೇತ್ರದ ವಾರ್ಡ್ 54ರ ವ್ಯಾಪ್ತಿಗೆ ಬರುವ ಗೌರಿಶಂಕರನಗರದಲ್ಲಿ ಶಾಸಕ ಎಸ್.ಎ. ರಾಮದಾಸ್ 'ಗೌವರ್ನ್‌ಮೆಂಟ್ ಆನ್ ವ್ಹೀಲ್' ಶೀರ್ಷಿಕೆಯಲ್ಲಿ ಪಾದಯಾತ್ರೆ ನಡೆಸಿ ಸ್ಥಳೀಯರಿಂದ ಕುಂದುಕೊರತೆ ಆಲಿಸಿದರು.

ಕಾರ್ಯಕ್ರಮದ ಅಂಗವಾಗಿ ಮೊದಲು ಬಿಜೆಪಿ ಬೂತ್ ಅಧ್ಯಕ್ಷರ ಮನೆಗೆ ಭೇಟಿ ನೀಡಿ ಸಂವಾದ ಕಾರ್ಯಕ್ರಮ ನಡೆಸಿದರು. ಬಳಿಕ 'ಗೌವರ್ನ್‌ಮೆಂಟ್ ಆನ್ ವ್ಹೀಲ್' ಕಾರ್ಯಕ್ರಮದಂತೆ ಜನಸಾಮಾನ್ಯರ ಕುಂದು ಕೊರತೆ ಆಲಿಸಿ ಸ್ಥಳದಲ್ಲೇ ಪರಿಹರಿಸಲು ಅಧಿಕಾರಿಗಳಿಗೆ ಸೂಚಿಸಿದರು.


ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ನಾವು ಸತತ ಪರಿಶ್ರಮದಿಂದಾಗಿ ಇಂದು ಕೋವಿಡ್‌ನ ಪರಿಸ್ಥಿತಿಯಿಂದ ಹೊರ ಬಂದಿದ್ದೇವೆ. ಇದರಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರದಿಂದ ಹೆಚ್ಚಿನ ಹಣ ಬಿಡುಗಡೆಯಾಗುತ್ತಿದೆ. ಕೆ.ಆರ್.ಕ್ಷೇತ್ರದಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಲಾಗಿದೆ. ಗೌರಿಶಂಕರನಗರದಲ್ಲಿ ಕಳೆದ 30 ವರ್ಷಗಳಿಂದ ವಾಸ ಮಾಡುತ್ತಿರುವವರಿಗೆ ಮನೆಗಳಿಗೆ ಸಂಬಂಧಪಟ್ಟಂತೆ ಯಾವುದೇ

ಶಾಸಕ ರಾಮದಾಸ್ ಭರವಸೆ

ಅಧಿಕೃತ ದಾಖಲೆಗಳು ಇಲ್ಲದಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಹಿಂದೆ ಯಡಿಯೂರಪ್ಪನವರು ಸಿಎಂ ಆಗಿದ್ದಾಗ ಈ ಸಮಸ್ಯೆಯನ್ನು ಬಗೆಹರಿಸುವಂತೆ ಮನವಿ ಮಾಡಿಕೊಳ್ಳಲಾಗಿತ್ತು. ಅಲ್ಲದೇ ದತ್ತನಗರ ಮತ್ತು ಗೌರಿಶಂಕರನಗರದಲ್ಲಿರುವ ಮನೆಗಳಿಗೆ ಖಾತೆ ಮಾಡಿಕೊಡಲು ಕ್ರಮ ಕೈಗೊಳ್ಳಲಾಗಿದೆ. ಈ ಭಾಗದಲ್ಲಿರುವ ಯುಜಿಡಿ ಹಾಗೂ ರಸ್ತೆ ಸಮಸ್ಯೆಯನ್ನು ಮುಂದಿನ ಆರು ತಿಂಗಳೊಳಗೆ ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು. ಈ ಸಂದರ್ಭದಲ್ಲಿ ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ್, ನಾಗೇಂದ್ರ ಕುಮಾರ್, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಮನು ಅಪ್ಪಿ(ಶೈವ್), ಮುಖಂಡರಾದ ಸಂತೋಷ್, ದೊಡ್ಡಿ ಶಿವು, ನಾರಾಯಣ್, ವಿಕ್ರಾಂತ್ ರಾಜು, ಅಶೋಕ, ರವಿ, ವಿವಿಧ ಇಲಾಖೆ ಅಧಿಕಾರಿಗಳು, ಸ್ಥಳೀಯರು ಉಪಸ್ಥಿತರಿದ್ದರು.

ನಾಳೆ 'ರೈತರೊಂದಿಗೊಂದು ದಿನ' ಕಾರ್ಯಕ್ರಮ

ಕೃಷಿ ಸಚಿವ ಬಿ.ಸಿ.ಪಾಟೀಲ್‌ರಿಂದ ಉದ್ಘಾಟನೆ



ಮೈಸೂರು, ಏ.20(ಆರ್‌ಕೆ)-ಮೈಸೂರು ತಾಲೂಕು, ತಳೂರು ಗ್ರಾಮದಲ್ಲಿ ಏ.22ರಂದು 'ರೈತರೊಂದಿಗೊಂದು ದಿನ' ಸಮಗ್ರ ಕೃಷಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಮೈಸೂರಿನ ವಾರ್ತಾ ಭವನದಲ್ಲಿ ಕೃಷಿ ಜಂಟಿ ನಿರ್ದೇಶಕ ಡಾ.ಮಹಂತೇಶಪ್ಪ, ಬುಧವಾರ ಸುದ್ದಿಗೋಷ್ಠಿ ನಡೆಸಿ, ಈ ಮಾಹಿತಿ ನೀಡಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಕೃಷಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ಕಾರ್ಯಕ್ರಮವನ್ನು ಶುಕ್ರವಾರ ಬೆಳಗ್ಗೆ 8.30 ಗಂಟೆಗೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಉದ್ಘಾಟಿಸುವರು. ಕೃಷಿ ವಸ್ತುಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದು, ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸುವರು.

ಹಕ್ಕಿನ ಜೊತೆಗೆ ಕರ್ತವ್ಯದ ಬಗ್ಗೆಯೂ ಆತ್ಮಾವಲೋಕನ ಅವಶ್ಯ

ಶ್ರೀರಂಗಪಟ್ಟಣ ಡಿವೈಎಸ್ಪಿ ಸಂದೇಶ್‌ಕುಮಾರ್ ಕಿವಿಮಾತು

ಮೈಸೂರು, ಏ.20(ಎಸ್‌ಬಿಡಿ)- ಸಂವಿಧಾನಾತ್ಮಕ ಹಕ್ಕುಗಳ ಜೊತೆಗೆ ಪ್ರತಿಯೊಬ್ಬರೂ ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆಯೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಶ್ರೀರಂಗಪಟ್ಟಣ ಡಿವೈಎಸ್ಪಿ ಎಸ್.ಎನ್.ಸಂದೇಶ್‌ಕುಮಾರ್ ಅಭಿಪ್ರಾಯಿಸಿದರು.



ಮೈಸೂರಿನ ಬಾಸುದೇವ ಸೋಮಾನಿ ಕಾಲೇಜಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬ ಪ್ರಜೆಗೂ ಸಂವಿಧಾನ ನೀಡಿರುವ ಹಕ್ಕುಗಳ ಬಗ್ಗೆ ಎಲ್ಲರೂ ಮಾತನಾಡುತ್ತೇವೆ. ಹಾಗೆಯೇ ನಾವು ಪಾಲಿಸಬೇಕಾದ ಕರ್ತವ್ಯಗಳ ಬಗ್ಗೆಯೂ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸದೃಢ ಕಾನೂನು ಚೌಕಟ್ಟು ಹಾಗೂ ಅದರ ಪರಿಪಾಲನೆ ಅತ್ಯಗತ್ಯ ಎಂದರು.


ಜಗತ್ತಿನ 32 ದೇಶಗಳ ಸಂವಿಧಾನ ಬದಲಾದರೂ ನಮ್ಮ ಭಾರತದ ಶ್ರೇಷ್ಠ ಸಂವಿಧಾನ ಬದಲಾಗಿಲ್ಲ. ಸಂವಿಧಾನ ರಚಿಸಿದ ಅಂಬೇಡ್ಕರ್ ಅವರು ಭಾರತೀಯ ಪ್ರಜೆಗಳಾದ ನಾವು... ಎನ್ನುವ ಪೀಠಿಕೆಯಿಂದಲೇ ಆರಂಭಿಸಿದ್ದಾರೆ. ಸಂವಿಧಾನ ಮನೆ ಇದ್ದಂತೆ. ಪೀಠಿಕೆ ಅದರ ಬೀಗದ ಕೀ ಇದ್ದಂತೆ. ಹಾಗಾಗಿಯೇ 72 ವರ್ಷ ಕಳೆದರೂ ದೇಶ ಸುಭದ್ರವಾಗಿದೆ ಎಂದರು. ಇದೇ ವೇಳೆ ಭಾರತ ಸಂವಿಧಾನಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಆರ್.ಎಲ್.ಲಕ್ಷ್ಮಿ (ಪ್ರಥಮ), ಆರ್.ಲಾವಣ್ಯ (ದ್ವಿ), ಜೆ. ಭಾಗ್ಯಲಕ್ಷ್ಮಿ (ತೃ), ಎಚ್.ಎಂ. ಕಿರಣ್, ಎಲ್.ಸಿದ್ದಪ್ಪಾಜಿ (ಸಮಾಧಾನಕರ)ಗೆ ಬಹುಮಾನ ವಿತರಿಸಲಾಯಿತು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಸ್ಥೆಯ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಕಾರ್ಯದರ್ಶಿ ಕುಬೇರ್ ಪಿ.ಗೌಡ, ವ್ಯವಸ್ಥಾಪಕ ಧರ್ಮದರ್ಶಿ ಪ್ರಭಾ ಪುಟ್ಟಸ್ವಾಮಿ, ಪ್ರಾಂಶುಪಾಲ ಡಾ.ಎಸ್.ಎಸ್.ರಾಜೇ ಅರಸ್, ಸಹಾಯಕ ಪ್ರಾಧ್ಯಾಪಕರಾದ ಡಾ. ಮಹದೇವಸ್ವಾಮಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಟಿ.ರಮೇಶ್, ಡಾ. ಎಚ್.ಪಿ.ಭವ್ಯಾ, ಎಂ.ಎನ್.ಮಧುರಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸರಸ್ವತಿಪುರಂ ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷ ಆರ್.ಲಿಂಗಪ್ಪ



ಮೈಸೂರು, ಏ.20-ಮೈಸೂರಿನ ಸರಸ್ವತಿಪುರಂ ಬಳಕೆದಾರರ ಸಹಕಾರ ಸಂಘದ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದು, ಅಧ್ಯಕ್ಷರಾಗಿ ಮಾಜಿ ಮೇಯರ್ ಆರ್.ಲಿಂಗಪ್ಪ, ಉಪಾಧ್ಯಕ್ಷರಾಗಿ ಡಿ.ಪುಟ್ಟೇಗೌಡ ಆಯ್ಕೆಯಾಗಿದ್ದಾರೆ. ಸದಸ್ಯರಾಗಿ ಗುಂಡೂರಾವ್, ಸುನಿಲ್‌ಕುಮಾರ್ ಅಗರ್‌ವಾಲ್, ಶ್ರೀನಿವಾಸ್ ಗೌಡ, ನಾಗೇಂದ್ರ ಬೋರೇಗೌಡ, ಎಲ್.ಭಾಸ್ಕರ್, ಎಂ.ಹೆಚ್. ಶಿವಕುಮಾರ್, ಬಿ.ಪಿ.ಉಷಾರಾಣಿ, ಸಾವಿತ್ರಿದೇವಿ, ಹೆಚ್.ವಿ. ಸತೀಶ್ ಚಂದ್ರ ಮತ್ತು ಶಿವಣ್ಣ ಆಯ್ಕೆಯಾಗಿದ್ದಾರೆ.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಿ.ರೇವಣ್ಣ ಅವರನ್ನು ಬುಧವಾರ ಬ್ಯಾಂಕಿನ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಎಸ್.ಸೋಮಣ್ಣ, ಪಿ.ರಾಜೇಶ್ವರಿ, ಉಪಾಧ್ಯಕ್ಷ ಜೆ.ಯೋಗೇಶ್, ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಿ.ಸವಿತಾ, ಹೆಚ್.ಹರೀಶ್‌ಕುಮಾರ್, ಸಿ.ಎಸ್.ರಾಮಕೃಷ್ಣಯ್ಯ ಅಭಿನಂದಿಸಿದರು.

ಮನೆ ಗ್ರಿಲ್ ಮುರಿದು ಚಿನ್ನಾಭರಣ ಕಳವು

ಮೈಸೂರು, ಏ.20(ಜಿಎ)- ಮನೆಯ ಗ್ರಿಲ್ ಮುರಿದಿರುವ ಖದೀಮರು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ದೋಚಿದ ಘಟನೆ ಮೈಸೂರಿನ ಶ್ರೀರಾಂಪುರ ಎರಡನೇ ಹಂತದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಪ್ರಶಾಂತ್ ಮತ್ತು ಅವರ ಪತ್ನಿ ಇಬ್ಬರು ಜಿಲ್ಲಾ ಸಶಸ್ತ್ರ ಮೀಸಲು ಪಡೆಯಲ್ಲಿ ಫಾರ್ಮಾಸಿಸ್ಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ನಿನ್ನೆ ಇಬ್ಬರೂ ಕರ್ತವ್ಯಕ್ಕೆ ತೆರಳಿದ ವೇಳೆ ಮನೆಯ ಗ್ರಿಲ್ ಮುರಿದು ಒಳ ನುಗ್ಗಿದ ಖದೀಮರು ಚಿನ್ನಾಭರಣ ದೋಚಿದ್ದಾರೆ. ಕರ್ತವ್ಯದಿಂದ ಹಿಂದಿರುಗಿದ ಬಳಿಕ ಕೃತ್ಯ ಬೆಳಕಿಗೆ ಬಂದಿದೆ. ಈ ಸಂಬಂಧ ಕುವೆಂಪು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಿಣಿ ಆತ್ಮಹತ್ಯೆ


ಮೈಸೂರು, ಏ.20(ಜಿಎ)- ಮಗುವನ್ನು ಶಾಲೆಗೆ ಸೇರಿಸುವ ವಿಚಾರಕ್ಕೆ ಮನನೊಂದ ಪತ್ನಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಮೈಸೂರಿನ ದಟ್ಟಗಳ್ಳಿಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ನಿವಾಸಿ ಚಂದ್ರು ಅವರ ಪತ್ನಿ ಶಾಲಿನಿ(33) ಆತ್ಮಹತ್ಯೆ ಮಾಡಿಕೊಂಡವರು. ಶಾಲಿನಿ ನಾಲ್ಕು ವರ್ಷದ ಹಿಂದೆ ಚಂದ್ರು ಎಂಬಾತನನ್ನು ವಿವಾಹವಾಗಿದ್ದು, ಒಂದು ಮಗು ಕೂಡ ಇತ್ತು. ಮಗುವನ್ನು ಶಾಲೆಗೆ ಸೇರಿಸುವ ಕುರಿತು ನಿನ್ನೆ ಗಂಡ-ಹೆಂಡತಿ ನಡುವೆ ಜಗಳ ನಡೆದಿದ್ದು, ಇದರಿಂದ ಮನನೊಂದ ಶಾಲಿನಿ ನೇಣಿಗೆ ಶರಣಾಗಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸಿ.ಮಹೇಶ್ವರನ್ ಅಂತ್ಯಕ್ರಿಯೆ



ಮೈಸೂರು, ಏ.20(ಆರ್‌ಕೆ)-ಮಂಗಳವಾರ ನಿಧನರಾದ 'ಸಾಧ್ವಿ' ಪತ್ರಿಕೆ ಸಂಪಾದಕ ಸಿ.ಮಹೇಶ್ವರನ್ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನಡೆಯಿತು. ಮಧ್ಯಾಹ್ನ 1.30 ಗಂಟೆವರೆಗೆ ಮೈಸೂರಿನ ಕೆ.ಸಿ.ಬಡಾವಣೆಯ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಇರಿಸಲಾಗಿತ್ತು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಡಿಸಿ ಡಾ.ಬಗಾದಿ ಗೌತಮ್, ಶಾಸಕ ಎಲ್.ನಾಗೇಂದ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಶ್ರೀಮತಿ ಅರ್ಪಿತಾ ಪ್ರತಾಪ್ ಸಿಂಹ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ ಕುಮಾರ್‌ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂಧನ್, ವಾರ್ತಾ ಮತ್ತು ಪ್ರಚಾರ ಇಲಾಖೆ ಸಹಾಯಕ ನಿರ್ದೇಶಕ ಹರೀಶ, ಕಾರ್ಪೊರೇಟರ್ ಕೆ.ವಿ.ಶ್ರೀಧರ್, ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪದಾಧಿಕಾರಿಗಳು, ಸದಸ್ಯರು, ಹಿರಿಯ ಪತ್ರಕರ್ತರು, ಸಾಹಿತಿಗಳು, ಸಂಘ-ಸಂಸ್ಥೆಗಳ ಪ್ರಮುಖರು, ಸಿ.ಮಹೇಶ್ವರನ್, ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಬಾಲಕ ಕಣ್ಮರೆ



ಮೈಸೂರು, ಏ.20(ಆರ್‌ಕೆ)-ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಭಕ್ತ ಪ್ರಸಾದ ಅವರ ಪುತ್ರ ಬಿ.ಪರೀಕ್ಷಿತ (16 ವರ್ಷದ ಬಾಲಕ) ಏ.19ರ ಸಂಜೆಯಿಂದ ಕಣ್ಮರೆಯಾಗಿದ್ದಾನೆ. ಟ್ಯೂಷನ್‌ಗೆ ಹೋಗಿ ಬರುತ್ತೇನೆಂದು ಮನೆಯಿಂದ ಹೋದ ಆತ ಹಿಂದಿರುಗಿಲ್ಲ. ಅಂದು ಮಧ್ಯರಾತ್ರಿ ಮೈಸೂರಿನ ರೈಲು ನಿಲ್ದಾಣದ ಬಳಿ ಆತನ ಸೈಕಲ್ ಪತ್ತೆಯಾಗಿದೆ ಎಂದು ತಂದೆ ಭಕ್ತಪ್ರಸಾದ ನಜರ್‌ಬಾದ್ ಠಾಣೆಗೆ ದೂರು ನೀಡಿದ್ದಾರೆ. ಬಾಲಕನ ಬಗ್ಗೆ ಸುಳಿವು ದೊರೆತಲ್ಲಿ ನಜರ್‌ಬಾದ್ ಪೊಲೀಸ್ ಠಾಣೆ (0821-2418308) ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ (0821-2418339)ಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

ಮೇ ಅಂತ್ಯಕ್ಕೆ ಮೈಸೂರಲ್ಲಿ 'ಮಾವು ಮೇಳ'

ಮೈಸೂರು, ಏ.20(ಎಂಕೆ)- ಒಂದೇ ಸ್ಥಳದಲ್ಲಿ ಹತ್ತಾರು ಬಗೆಯ ಹಣ್ಣುಗಳ ರಾಜ 'ಮಾವಿನ ಹಣ್ಣ'ನ್ನು ಸವಿಯುವ ಕಾಲ ಮತ್ತೆ ಬಂದಿದೆ...!

ಮಾವು ಬೆಳೆಗಾರರಿಗೆ ಮಾರುಕಟ್ಟೆ ಕಲ್ಪಿಸುವುದು, ಗ್ರಾಹಕರಿಗೆ ಮಾವು ತಲುಪಿಸುವ ಉದ್ದೇಶದಿಂದ ಹಮ್ಮಿಕೊಳ್ಳುವ 'ಮಾವು ಮೇಳ'ವನ್ನು ಎರಡು ವರ್ಷಗಳ ಬಳಿಕ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ, ತೋಟಗಾರಿಕೆ ಇಲಾಖೆ(ಜಿಲ್ಲಾ ಪಂಚಾಯತ್)ಮೈಸೂರು ಸಹಯೋಗದೊಂದಿಗೆ 'ಮೇ ತಿಂಗಳ ಅಂತ್ಯ'ದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

15ಕ್ಕೂ ಹೆಚ್ಚು ಬಗೆಯ ಮಾವಿನ ಹಣ್ಣುಗಳು: ರತ್ನಗಿರಿ, ಬಾದಾಮಿ, ರಸಪೂರಿ, ಮಲಗೋವಾ, ತೋತಾಪುರಿ, ಮಲ್ಲಿಕಾ, ದಶೇರಿ, ಮಲ್ಲಿಕಾ, ಸೆಂದೂರ, ನೀಲಂ, ಆಮ್ರಪಾಲಿ, ಕೇಸರ್, ಬಂಗನಪಲ್ಲಿ ಸೇರಿದಂತೆ 15ಕ್ಕೂ ಹೆಚ್ಚು ಬಗೆಯ ಮಾವಿನ ಹಣ್ಣುಗಳನ್ನು ಖರೀದಿಸಲು ಒಂದೇ ಸೂರಿನಡಿ ಅವಕಾಶ ಲಭ್ಯವಾಗಲಿದ್ದು, ಪ್ರತಿ ಬಾರಿಯಂತೆ ಈ ಬಾರಿಯೂ ಕುಪ್ಪಣ್ಣ ಪಾರ್ಕ್‌ನಲ್ಲೇ ಮಾವಿನ ಮೇಳ ನಡೆಯಲಿದೆ ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ



ಕೆ.ರುದ್ರೇಶ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಶೇ.30-40 ಇಳುವರಿ ಕುಂಠಿತ: ಕಳೆದ ವರ್ಷ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಸುರಿದ ಭಾರೀ ಮಳೆಯಿಂದಾಗಿ ಮಾವು ಇಳುವರಿ ಶೇ.30-40 ರಷ್ಟು ಕಡಿಮೆಯಾಗಿದೆ. ಮೇಳ ಆಯೋಜನೆಗೂ ಮುನ್ನವೇ ಮಾವು ಬೆಳೆಗಾರರೊಂದಿಗೆ ಸಭೆ ನಡೆಸಿ ಎಷ್ಟು 'ಮಾವು ಮೇಳ' ಆಯೋಜಿಸಬೇಕು ಎಂಬುದನ್ನು ನಿರ್ಧರಿಸಲಾಗುವುದು. ಮೇಳದಲ್ಲಿ ಮೈಸೂರು ಜಿಲ್ಲೆ, ಮಂಡ್ಯ, ಹಾಸನ, ಚನ್ನಪಟ್ಟಣ, ರಾಮನಗರ, ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ ಹಾಗೂ ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳ ರೈತರು ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದರು.

> “ಕೊರೊನಾದಿಂದಾಗಿ ಸ್ಥಗಿತಗೊಂಡಿದ್ದ 'ಮಾವು ಮೇಳ'ವನ್ನು ಎರಡು ವರ್ಷದ ಬಳಿಕ ಮತ್ತೆ ಆಯೋಜಿಸಲು ಚಿಂತನೆ ನಡೆಸಲಾಗಿದೆ. ರೈತರಿಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಮೇ 5ರವರೆಗೆ ಅವಕಾಶ ನೀಡಿದ್ದು, ಮೇ 7ರ ನಂತರ ರೈತರೊಂದಿಗೆ ಸಭೆ ನಡೆಸಿ, ಮಾವು ಲಭ್ಯತೆ ಎಷ್ಟಿದೆ ಎಂಬ ಮಾಹಿತಿ ಸಂಗ್ರಹಿಸಿದ ಬಳಿಕ ಎಷ್ಟು ದಿನ ಮೇಳ ಆಯೋಜಿಸಬೇಕು ಎಂಬುದನ್ನು ನಿರ್ಧರಿಸಲಾಗುವುದು.
>
> **-ರುದ್ರೇಶ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ**


ಮಾವು ಮೇಳದ ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ರಾಜ್ಯ ವಲಯ, ಮೈಸೂರು ದೂರವಾಣಿ ಸಂಖ್ಯೆ 0821-2977572/ 2422255, ಮೊ.ನಂ.9980007556 ಸಂಪರ್ಕಿಸಿ, ಮೇ 5ರೊಳಗೆ ರೈತರು ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಸೂಚನೆ ನೀಡಲಾಗಿದೆ.

ಏ.23, 24ರಂದು ಸರ್ಪ ಸಂಸ್ಕಾರ, ಆಶ್ಲೇಷ ಬಲಿ

ಮೈಸೂರು, ಏ.20- ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಏಪ್ರಿಲ್ 23ರಂದು ಶನಿವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ ಮತ್ತು ಏಪ್ರಿಲ್ 24ರಂದು, ಭಾನುವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷಾ ಬಲಿ ಪೂಜೆ ಏರ್ಪಡಿಸಲಾಗಿದೆ. ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ಪೂಜೆ ಮತ್ತು ಸಂಕಲ್ಪ ಮಾಡಿ ಕೊಡಲಾಗುತ್ತದೆ. ಆಸಕ್ತರು ಹೆಚ್ಚಿನ ವಿಷಯಗಳಿಗೆ ಮೈಕುಮಾರ್ ಜಾತಕ ವಿಮರ್ಶಕರು 9845183392 ಮತ್ತು 9480966522 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ಕೋರಿದೆ.

ರಾಜ್ಯದಲ್ಲಿ ಅವಧಿಗೆ ಮುನ್ನ ಚುನಾವಣೆ ಸಾಧ್ಯವಿಲ್ಲ: ಜಿಟಿಡಿ

● ಜಿ.ಡಿ. ಹರೀಶ್‌ಗೌಡ ಹುಣಸೂರಲ್ಲಿ ಸ್ಪರ್ಧೆಗೆ ಆದ್ಯತೆ ● ತಾವು ಚಾಮುಂಡೇಶ್ವರಿಯಲ್ಲೇ ಸ್ಪರ್ಧೆಗೆ ನಿರ್ಧಾರ



ಸಾಲಿಗ್ರಾಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಮತ್ತು ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರನ್ನು ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್ ಅಭಿನಂದಿಸಿದರು.

ಹೊಸೂರು, ಏ.20(ಕೆಪಿಎಂ)– ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳೇ ಅಧಿಕಾರದಲ್ಲಿ ಇರುವುದರಿಂದ ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ವಿಧಾನಸಭೆಗೆ ಅವಧಿ ಪೂರ್ವ ಚುನಾವಣೆ ನಡೆಯುವುದಿಲ್ಲ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಸಾಲಿಗ್ರಾಮದಲ್ಲಿರುವ ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಹಳ್ಳಿ ಸೋಮಶೇಖರ್ ಅವರ ನಿವಾಸದಲ್ಲಿ ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರಿಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ನಾನು ಸೇರಿದಂತೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಹುಣಸೂರು ಕ್ಷೇತ್ರದಲ್ಲಿ ಉತ್ತಮ ಜನ ಸೇವೆ ಮಾಡಿದ್ದು, ಅಲ್ಲಿಂದ ಹರೀಶ್‌ಗೌಡ ಸ್ಪರ್ಧೆ ಮಾಡಲು ಆದ್ಯತೆ ನೀಡಲಿದ್ದು ಅಂತಿಮವಾಗಿ ಜನ ಬಯಸಿದ ಕಡೆ ಹೋಗಲು ಸಿದ್ಧ ಎಂದು ಜಿ.ಟಿ.ದೇವೇಗೌಡರು ಘೋಷಿಸಿದರು.

ಕೆ.ಆರ್.ನಗರ ಕ್ಷೇತ್ರದಿಂದ ಜಿ.ಡಿ.ಹರೀಶ್ ಗೌಡ ಅವರು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡುತ್ತಾರೆ ಎಂಬ ಸುದ್ದಿ ಇದೆಯಲ್ಲಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು ಹಿಂದೆ ಆ ವಿಚಾರ ಪ್ರಸ್ತಾಪಿಸಿದ್ದು ನಿಜ. ಆದರೆ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಜನ ಬಯಸಿದ ಕಡೆ ನಾವು ಹೋಗಬೇಕಾದುದು ನಮ್ಮ ಕರ್ತವ್ಯ ಅಲ್ಲವೆ? ಎಂದರಲ್ಲದೆ ಹುಣಸೂರಿನಿಂದ ಹೆಚ್ಚು ಒತ್ತಡ ಇದೆ ಎಂದರು.

ಮುಂಬರುವ ಚುನಾವಣೆಯಲ್ಲಿ ನಾನು ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧೆ ಮಾಡುವುದು ಖಚಿತವಾಗಿದ್ದು, ಈ ವಿಚಾರದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದರು.

ನನ್ನ ವಿರುದ್ಧ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯಾರು ಸ್ಪರ್ಧೆ ಮಾಡುತ್ತಾರೆ ಎಂಬುದು ನನಗೆ ಮುಖ್ಯವಲ್ಲ. ಆದರೆ ನನ್ನ ಸ್ಪರ್ಧೆ ಖಚಿತ ಎಂದ ಅವರು ಕ್ಷೇತ್ರದ ಜನತೆ ನನ್ನ ಕೈಬಿಡುವುದಿಲ್ಲ ಎಂಬ ಪೂರ್ಣ ಭರವಸೆ ವ್ಯಕ್ತಪಡಿಸಿದರಲ್ಲದೆ, ಜನ ಬಯಸಿದಲ್ಲಿ ಸ್ಪರ್ಧಿಸಿದರೆ ಅವರು ಖಂಡಿತ ಆಶೀರ್ವಾದ ಮಾಡುತ್ತಾರೆ. ಅದರಲ್ಲಿ ಎರಡು ಮಾತಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ತನಿಖೆ ನಡೆಯಲಿ: ಸಚಿವ ಸ್ಥಾನಕ್ಕೆ ಕೆ.ಎಸ್.ಈಶ್ವರಪ್ಪನವರು ರಾಜೀನಾಮೆ ನೀಡಿದ ನಂತರ ಅವರನ್ನು ಬಂಧಿಸಬೇಕು ಎಂದು ಕಾಂಗ್ರೆಸ್ ಪಕ್ಷದವರು ಪ್ರತಿಭಟನೆ ಮಾಡುತ್ತಿರುವುದಕ್ಕೆ ಪ್ರತಿಕ್ರಿಯಿಸಿದ ಜಿಟಿಡಿ, ಆ ವಿಚಾರದಲ್ಲಿ ತನಿಖೆ ನಡೆಯುತ್ತಿದೆ. ಹಾಗಾಗಿ ನಾವು ಮಾತನಾಡುವುದು ಸರಿಯಲ್ಲ. ತನಿಖಾಧಿಕಾರಿಗಳು ಅವರನ್ನು ಬಂಧಿಸಿದರೆ ಯಾರಿಂದ ತಡೆಯಲು ಸಾಧ್ಯ ಎಂದು ಮರು ಪ್ರಶ್ನಿಸಿದರು.

ವಿಜಯ್ ರಾಜಕೀಯ ಭವಿಷ್ಯಕ್ಕೆ ನಾನು ಬೆನ್ನೆಲುಬು

● ಶಾಸಕ ಜಿ.ಟಿ. ದೇವೇಗೌಡ ಭರವಸೆ ● ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನೂತನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ವಿಜಯ್‌ಗೆ ಅಭಿನಂದನೆ

ಹೊಸೂರು, ಏ.20– ಉಪ್ಪಾರ ಸಮಾಜದ ಮುಖಂಡರೂ ಆದ ಜನಪ್ರಿಯ ನಾಯಕರಾಗಿರುವ ಮುಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ಹೆಚ್.ಎನ್.ವಿಜಯ್ ಅವರ ರಾಜಕೀಯ ಭವಿಷ್ಯಕ್ಕೆ ನಾನು ಸದಾ ಬೆನ್ನೆಲುಬಾಗಿರುತ್ತೇನೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಅವರನ್ನು ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಹಳ್ಳಿ ಸೋಮಶೇಖರ್ ಅವರ ಸಾಲಿಗ್ರಾಮ ನಿವಾಸದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಅರಕಲಗೂಡು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಲು ಮುಡಾ ಮಾಜಿ ಅಧ್ಯಕ್ಷರು ಅವಕಾಶ ಕೇಳಿರುವುದು ನಿಜ. ಅದೃಷ್ಟ ಚೆನ್ನಾಗಿರುವುದರಿಂದ ಅವರ ಆಸೆ ಈಡೇರಲಿ ಎಂದು ಹಾರೈಸಿದರು. ರಾಜಕೀಯ ಅಧಿಕಾರವನ್ನು ಎಂದೂ ಬಯಸದ ಹೆಚ್.ಎನ್.ವಿಜಯ್ ಅವರಿಗೆ ಕೆಲವು ಅವಕಾಶಗಳು ಹುಡುಕಿಕೊಂಡು ಬರುತ್ತಿದ್ದು, ಮುಂದೆ ಉನ್ನತ ಸ್ಥಾನಮಾನಗಳು ಸಿಗಲಿವೆ. ಅವರ ಜತೆಗೆ ಸದಾ ನಮ್ಮ ಕುಟುಂಬ ಇರಲಿದೆ ಎಂದು ಶಾಸಕರು ಭರವಸೆ ನೀಡಿದರು.

ರಾಜಕೀಯ ಕ್ಷೇತ್ರದಿಂದ ಸಹಕಾರ ಕ್ಷೇತ್ರಕ್ಕೆ ಧುಮುಕಿದ ಆರಂಭದಲ್ಲಿಯೇ ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ತಾವೂ ಅವಿರೋಧವಾಗಿ ಆಯ್ಕೆಯಾಗುವುದರ ಜತೆಗೆ ಬ್ಯಾಂಕಿನ 12 ಸ್ಥಾನಗಳನ್ನು ತಮ್ಮ ವಶಕ್ಕೆ ಪಡೆದು ದಾಖಲೆ ನಿರ್ಮಿಸಿರುವ ಅವರು ಈ ಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರಬೇಕೆಂದು ಜಿ.ಟಿ.ದೇವೇಗೌಡ ಆಶಿಸಿದರು.

ಈ ಸಂದರ್ಭದಲ್ಲಿ ಹೆಚ್.ಎನ್.ವಿಜಯ್ ಅವರನ್ನು ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಹಳ್ಳಿ ಸೋಮಶೇಖರ್, ತಾಪಂ ಮಾಜಿ ಸದಸ್ಯ ಎ.ಟಿ.ಗೋವಿಂದೇಗೌಡ, ಕರ್ಪೂರವಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಪ್ರಸನ್ನ ಮತ್ತು ಇತರರು ಅಭಿನಂದಿಸಿದರು.

ಅಪರಿಚಿತ ಸಾವು

ಮೈಸೂರು, ಏ.20– ಅಪರಿಚಿತ ವ್ಯಕ್ತಿಯೋರ್ವ ಚಿಕಿತ್ಸೆ ಫಲಕಾರಿಯಾಗದೆ ಕೆ.ಆರ್.ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದು, ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಏ.16ರಂದು ಮೃಗಾಲಯದ ಮುಂದೆ ಅಸ್ವಸ್ಥರಾಗಿ ಬಿದ್ದಿದ್ದ ಈ ವ್ಯಕ್ತಿಯನ್ನು ಗರುಡ ಪೊಲೀಸರು ಕೆ.ಆರ್.ಆಸ್ಪತ್ರೆಗೆ ಸೇರಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಸುಮಾರು 55 ವರ್ಷದವರಾಗಿದ್ದು, ಹಣೆಯ ಮಧ್ಯ ಭಾಗದಲ್ಲಿ ಕಪ್ಪು ಕಾರುಳ್ಳು ಇದೆ. ವಾರಸುದಾರರು ದೂ: 0821–2418308, 2418508, 100, 112 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಗಾಳಿ ಮಳೆಯಿಂದ ಹಾರಿ ಹೋದ ಮನೆ ಚಾವಣಿ



ಬೆಟ್ಟದಪುರ, ಏ. 20– ಭಾರೀ ಮಳೆ ಗಾಳಿಗೆ ಬೆಟ್ಟದಪುರದ ವೃದ್ಧ ದಂಪತಿಯ ಮನೆ ಚಾವಣಿ ಹಾರಿ ಹೋಗಿ ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಸೋಮವಾರ ಸಂಜೆ ಸುರಿದ ಭಾರೀ ಮಳೆ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದ ಮರಿನಾಯಕ ಹಾಗೂ ಚಿಕ್ಕತಾಯಮ್ಮ ದಂಪತಿಗೆ ಸೇರಿದ ಮನೆಯ ಚಾವಣಿ ಹಾರಿ ಹೋಗಿದೆ. ಭಾರೀ ಮಳೆ–ಗಾಳಿಗೆ ಹಲವಾರು ಮರಗಳು ಬಿದ್ದಿದ್ದು, ವಿದ್ಯುತ್ ಕಂಬಗಳು ಧರೆಗೆ ಉಳಿದಿವೆ. ರೈತರು ಬೆಳೆದ ಮಾವು ಬೆಳೆ ಸಂಪೂರ್ಣ ನಾಶವಾಗಿದೆ. ಭಾರೀ ಮಳೆಯಿಂದ ಮನೆ ಕಳೆದುಕೊಂಡ ದಂಪತಿ, ಕೂಡಲೇ ಮನೆ ನಿರ್ಮಿಸಲು ನೆರವಾಗುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಬಾಟಲಿಯಿಂದ ವ್ಯಕ್ತಿ ಮೇಲೆ ಹಲ್ಲೆ; ಆರೋಪಿ ಪರಾರಿ

ಹುಣಸೂರು, ಏ.20(ಕೆಕೆ)– ರಾಮನವಮಿ ಸಿದ್ಧತೆ ಪೂರ್ವಭಾವಿ ಸಭೆಯಲ್ಲಿ ಸಾರಿಗೆ ನೌಕರನೊಬ್ಬ ಸ್ನೇಹಿತನ ಮೇಲೆ ಬಾಟಲಿಯಿಂದ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ತಾಲೂಕಿನ ಚೌಡಿಕಟ್ಟೆ ಗ್ರಾಮದಿಂದ ತಡವಾಗಿ ವರದಿಯಾಗಿದೆ.

ಗ್ರಾಮದ ಗಣಪತಿ ರಾವ್‌ಪವಾರ್ ಅವರ ಪುತ್ರ ಚೇತನ್.ಜಿ.ಪವಾರ್ ಹಲ್ಲೆಗೀಡಾದವರಾಗಿದ್ದು, ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದೇ ಗ್ರಾಮದ ಜಗನ್ನಾಥ್‌ರಾವ್ ಜಾದವ್ ಪುತ್ರ, ರಾಜ್ಯ ರಸ್ತೆ ಸಾರಿಗೆ ನೌಕರ ನಾರಾಯಣರಾವ್ ಜಾದವ್ ಉರುಫ್ ನಾಣಿ ಹಲ್ಲೆ ಮಾಡಿದ ಆರೋಪಿ.

ಘಟನೆ ವಿವರ: ಏ.9ರಂದು ರಾತ್ರಿ ಗ್ರಾಮದ ರಾಮ ಮಂದಿರದ ಸಚ್ಚಿತಾನಂದ ಮಠದಲ್ಲಿ ರಾಮನವಮಿ ಆಚರಣೆ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ನಡೆಯುತ್ತಿತ್ತು. ಈ ವೇಳೆ ಆರೋಪಿ ನಾಣಿ ವಿನಾಕಾರಣ ವಾಗ್ವಾದಕ್ಕಿಳಿದು ಏಕಾಏಕಿ ಬಾಟಲ್‌ನಿಂದ ಚೇತನ್ ಮುಖಕ್ಕೆ ಹೊಡೆದಿದ್ದಾನೆ. ಇದನ್ನು ಬಿಡಿಸಲು ಮುಂದಾದ ಗ್ರಾಪಂ ಸದಸ್ಯೆ ಸುವರ್ಣ ಅವರ ಪತಿ ರಾಜಶೆಟ್ಟಿ ಸೇರಿದಂತೆ ಪವನ್, ನವೀನ್ ಅವರ ಮೇಲೂ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ ಎನ್ನಲಾಗಿದೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಕ್ರಮ ಮದ್ಯ ಮಾರಾಟಗಾರರ ಬಂಧನ

ಬೈಲಕುಪ್ಪೆ, ಏ.20(ರಾಜೇಶ್)– ಸಮೀಪದ ಕೋಮಲಾಪುರ ಗ್ರಾಮದಲ್ಲಿ ಯಥೇಚ್ಛವಾಗಿ ನಡೆಯುತ್ತಿದ್ದ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲು ಅಬಕಾರಿ ಇಲಾಖೆ ಅಧಿಕಾರಿಗಳು ಮುಂದಾಗಿದ್ದು, 2 ದಿನಗಳಲ್ಲಿ ಒಟ್ಟು 16.ಲೀ. ಮದ್ಯ ವಶಪಡಿಸಿಕೊಂಡಿದ್ದಾರೆ.



ಗ್ರಾಮದ ನಿವಾಸಿ ಶ್ರೀನಿವಾಸ್ ಬಳಿ 5,400 ಲೀ, ಚೆಲುವೇಗೌಡರ ವಾಸದ ಮನೆಯಲ್ಲಿ 10,260 ಲೀ. ಅಕ್ರಮ ಮದ್ಯ ವಶಪಡಿಸಿಕೊಂಡು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಗ್ರಾಮಕ್ಕೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಭೇಟಿ ನೀಡಿದ್ದಾಗ ಅಕ್ರಮ ಮದ್ಯ ಮಾರಾಟದ ಬಗ್ಗೆ ಅರ್ಜಿಗಳು ಬಂದಿದ್ದವು. ಜಿಲ್ಲಾಧಿಕಾರಿ ಆದೇಶದಂತೆ ಕಾರ್ಯಾಚರಣೆ ನಡೆಸುತ್ತಿದ್ದು, ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲು ಅಬಕಾರಿ ಅಧಿಕಾರಿಗಳು ಮುಂದಾಗಿದ್ದಾರೆ. ಅಲ್ಲದೆ ಗ್ರಾಮದಲ್ಲಿ ಸಭೆ ಕರೆದು ಅಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಮಾಹಿತಿ ನೀಡುವಂತೆ ಗ್ರಾಮಸ್ಥರಲ್ಲಿ ಮನವಿ ಮಾಡಿದ್ದಾರೆ. ಕಾರ್ಯಾಚರಣೆಯಲ್ಲಿ ಅಬಕಾರಿ ಉಪ ಆಯುಕ್ತ ಮಹಾದೇವಿಬಾಯಿ ಅವರ ಸೂಚನೆಯಂತೆ ಹುಣಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಶ್ರೀನಿವಾಸ್ ಅವರ ನಿರ್ದೇಶನದಂತೆ ಅಬಕಾರಿ ನಿರೀಕ್ಷಕ ಧರ್ಮರಾಜು, ಉಪ ನಿರೀಕ್ಷಕಿ ಹೆಚ್.ಎಸ್.ಲಕ್ಷ್ಮಿ ನೇತೃತ್ವದಲ್ಲಿ ಸಿಬ್ಬಂದಿ ಸುಧಾರಾಣಿ ನಾಗಲಿಂಗ ಸ್ವಾಮಿ, ರಘು, ಮೋಹನ್, ಸುರೇಶ್, ಹರೀಶ್, ಚನ್ನಕೇಶವ, ರಾಮಚಂದ್ರ ಧರ್ಮವತಿ ಭಾಸ್ಕರ್ ಇದ್ದರು.

ಕಂಬದ ರಾಮದೇವರಬೆಟ್ಟದಲ್ಲಿ ಬೇಸಿಗೆ ಬಂಡಿ ಶಿಬಿರ



ತಿ.ನರಸೀಪುರ.ಏ.20(ಎಸ್‌ಕೆ)– ಮೈಸೂರಿನ ಆರ್‌ಟಿ ನಗರದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ವಿದ್ಯಾರ್ಥಿಗಳಿಗಾಗಿ ತಾಲೂಕಿನ ತುಂಬಲ ಗ್ರಾಮದ ಶ್ರೀ ಕಂಬದ ರಾಮದೇವರಬೆಟ್ಟದಲ್ಲಿ ಬುಧವಾರ ಬೇಸಿಗೆ ಬಂಡಿ ಶಿಬಿರ ಏರ್ಪಡಿಸಲಾಗಿತ್ತು.

ಕಂಬದರಾಮದೇವರ ಬೆಟ್ಟಕ್ಕೆ ಟ್ರಕ್ಕಿಂಗ್ ನಡೆಸಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕಾಡಿನ ಪರಿಸರ, ಬೆಟ್ಟದ ಮೇಲಿನ ದೇವಸ್ಥಾನ ನೋಡಿ ಪುಳಕಿತರಾದರು. ನಗರದಲ್ಲಿ ಚಾಮುಂಡಿಬೆಟ್ಟ ಹತ್ತಿದ ಅನುಭವವಿದ್ದ ಮಕ್ಕಳು ಗ್ರಾಮದಲ್ಲಿ ಬೆಟ್ಟದ ಮೇಲಿರುವ ದೇವಸ್ಥಾನಕ್ಕೆ ಮೆಟ್ಟಿಲುಗಳ ಮೂಲಕ ಟ್ರಕ್ಕಿಂಗ್ ನಡೆಸಿ ಸಂತಸಪಟ್ಟರು.

ಈ ವೇಳೆ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕಿ ಶಿಲ್ಪಾ ಪ್ರಶಾಂತ್, ಮಕ್ಕಳಿಗೆ ಪ್ರಕೃತಿಯ ಜೊತೆಗೆ ಇತಿಹಾಸದ ಬಗ್ಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಬೇಸಿಗೆ ಬಂಡಿ ಶಿಬಿರ ಹಮ್ಮಿಕೊಂಡಿದ್ದೇವೆ. ನಗರ ಪ್ರದೇಶದ ಮಕ್ಕಳಿಗೆ ಚಾಮುಂಡಿಬೆಟ್ಟದ ಬಗ್ಗೆ ಮಾತ್ರ ಮಾಹಿತಿ ಇದೆ. ಗೊತ್ತಿಲ್ಲದ ಸ್ಥಳದ ಬಗ್ಗೆ ತಿಳಿದುಕೊಳ್ಳಲು ಇಲ್ಲಿಗೆ ಮಕ್ಕಳನ್ನು ಕರೆತರಲಾಗಿದೆ. ಶಿಬಿರದ ಮುಖ್ಯ ಉದ್ದೇಶ ಮಕ್ಕಳಿಗೆ ಹಳ್ಳಿಯ ಸೊಗಡು, ಗ್ರಾಮೀಣ ಜನರ ಬದುಕು ಹಾಗೂ ಜಾನಪದದ ಬಗ್ಗೆ ತಿಳಿಸುವುದಾಗಿದೆ. ಇಲ್ಲಿಗೆ ಮೊದಲ ಬಾರಿಗೆ ಬಂದಿರುವ ಮಕ್ಕಳು ಕಂಬದ ರಾಮದೇವರ ಬಗ್ಗೆ ಸಾಕಷ್ಟು ಮಾಹಿತಿ ತಿಳಿದುಕೊಂಡಿದ್ದು, ಶಿಬಿರದ ಉದ್ದೇಶ ಸಫಲವಾಗಿದೆ ಎಂದರು. ಈ ವೇಳೆ ಮುಖಂಡರಾದ ತುಂಬಲ ನಂದೀಶ್, ಸಿದ್ದರಾಮು, ತಿರುಮಕೂಡಲು ವಾಸು, ಅಕ್ಕೂರು ಸಿದ್ದು, ಚಿಕ್ಕಣ್ಣ, ವೆಂಕಟ ಕೃಷ್ಣನ್, ತುಂಬಲ ಶಾಲೆ ಮುಖ್ಯ ಶಿಕ್ಷಕ ರಾಯಪ್ಪ ಗೌಂಡಿ, ಶಿಕ್ಷಕರಾದ ಚೇತನ್, ಕೇಶವ್, ಲಿಖಿತ್, ತೀರ್ಥ, ಶ್ವೇತಾ, ರೇಷ್ಮಾ, ವರ್ಷ, ಹೇಮ, ತ್ರಿವೇಣಿ ಮತ್ತಿತರರಿದ್ದರು.

ಹೆಚ್.ಡಿ.ಕೋಟೆಯಲ್ಲಿ ಇಂದು ಬೃಹತ್ ಆರೋಗ್ಯ ಮೇಳ



ಹೆಚ್.ಡಿ.ಕೋಟೆ, ಏ.20(ಮಂಜು)–ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪಟ್ಟಣದಲ್ಲಿ ತಾಲೂಕು ಮಟ್ಟದಲ್ಲಿ ಗುರುವಾರ ಬೃಹತ್ ಆರೋಗ್ಯ ಮೇಳ ಆಯೋಜಿಸಿದ್ದು, ಹೆಚ್ಚಿನ ಜನರು ಭಾಗವಹಿಸುವಂತೆ ಎಲ್ಲಾ ಇಲಾಖಾ ಸಿಬ್ಬಂದಿ ಶ್ರಮ ವಹಿಸಬೇಕು ಎಂದು ತಹಸೀಲ್ದಾರ್ ರತ್ನಾಂಬಿಕಾ ನಿರ್ದೇಶನ ನೀಡಿದರು.

ಪಟ್ಟಣದ ತಾಲೂಕು ಆಡಳಿತಸೌಧ ಕಚೇರಿಯಲ್ಲಿ ನಡೆದ ಬೃಹತ್ ಆರೋಗ್ಯ ಮೇಳದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಆರೋಗ್ಯ ಮೇಳವನ್ನು ತಾಲೂಕು ಮಟ್ಟದಲ್ಲಿ ಆಯೋಜಿಸಿರುವುದು ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗಲಿದ್ದು, ಹಾಗಾಗಿ ಎಲ್ಲಾ ಇಲಾಖೆ ಸಿಬ್ಬಂದಿ ಸಾರ್ವಜನಿಕರಿಗೆ ಈ ಬಗ್ಗೆ ಮಾಹಿತಿ ನೀಡಿ ಹೆಚ್ಚು ಫಲಾನುಭವಿಗಳನ್ನು ಕರೆತರುವ ಜೊತೆಗೆ ತಾಲೂಕಿನ ಗಡಿ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಹಾಡಿಗಳು ಹಾಗೂ ಬುಡಕಟ್ಟು ಜನಾಂಗದವರನ್ನು ಈ ಮೇಳಕ್ಕೆ ಕರೆ ತರಬೇಕು ಎಂದು ತಿಳಿಸಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಏ.21ರಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ ಆರೋಗ್ಯ ಮೇಳ ಆಯೋಜಿಸಿದ್ದು, ಮೇಳದಲ್ಲಿ 8 ನೋಂದಣಿ ವಿಭಾಗ ಮತ್ತು 10 ತಜ್ಞ ವೈದ್ಯರ ವಿಭಾಗ ತೆರೆಯಲಾಗಿದೆ. ಜಿಲ್ಲಾ ಮಟ್ಟದ ತಜ್ಞ ವೈದ್ಯರು ಹಾಗೂ ಮಾನಸಿಕ ತಜ್ಞ ವೈದ್ಯರನ್ನು ನಿಯೋಜಿಸಲಾಗಿದೆ. ಈ ಮೇಳದಲ್ಲಿ ತಾಲೂಕಿನ ಎಲ್ಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು– ಸಹಾಯಕಿಯರು, ಅಕ್ಷರ ದಾಸೋಹ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವಂತೆ ಕೋರಿದರಲ್ಲದೆ, ಆಶಾ ಕಾರ್ಯಕರ್ತರು ತಮ್ಮ ವ್ಯಾಪ್ತಿಯ ಫಲಾನುಭವಿಗಳನ್ನು ಕರೆತರಲು ನಿರ್ದೇಶನ ನೀಡಿದರು.

ಜಿಲ್ಲಾ ಮಟ್ಟದ ಆರ್‌ಸಿಹೆಚ್ ಅಧಿಕಾರಿ ಡಾ.ಜಯಂತ್, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಸೋಮಣ್ಣ, ಸರಗೂರು ತಹಸೀಲ್ದಾರ್ ಚಲುವರಾಜು, ತಾಪಂ ಇಓ ರಾಜೇಶ್ ಜೆರಾಲ್ಡ್, ಬಿಇಓ ಚಂದ್ರಕಾಂತ್, ಸಿಡಿಪಿಓ ಆಶಾ ಮುಂತಾದವರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದತುಂಗ ಗ್ರಾಪಂನಲ್ಲಿ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ದಲಿತ ಮುಖಂಡ ಚೆಲುವಯ್ಯ, ರಾಧಾ, ಯಶೋಧರ, ಎಸ್‌ಡಿಎಂಸಿ ಅಧ್ಯಕ್ಷ ವೆಂಕಟೇಶ್, ಗ್ರಾಪಂ ಸದಸ್ಯರಾದ ಪ್ರೀತಿ ಅರಸ್, ಮಂಜುಳಾ ರವಿ ಮತ್ತಿತರರಿದ್ದರು.

ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪಗೆ ಅಭಿನಂದನೆ



ಮಾಜಿ ಸಚಿವ ಡಾ. ಹೆಚ್ ಸಿ.ಮಹದೇವಪ್ಪ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಮೈಸೂರಿನ ಅವರ ನಿವಾಸದಲ್ಲಿ ಮೈಮುಲ್ ನಿರ್ದೇಶಕ, ತಿ.ನರಸೀಪುರ ತಾಪಂ ಮಾಜಿ ಅಧ್ಯಕ್ಷ ಆರ್.ಚೆಲುವರಾಜ್ ಅಭಿನಂದಿಸಿದರು. ಈ ವೇಳೆ ಮಲೆಯೂರು ಗ್ರಾಪಂ ಅಧ್ಯಕ್ಷ ಜಯರಾಮ್ ಮತ್ತಿತರಿದ್ದರು.

ಬೆಟ್ಟೇಗೌಡ ನಿಧನ



ನಂಜನಗೂಡು, ಏ.20–ಕಬ್ಬಳ್ಳಿ ಗ್ರಾಮದ ಹಿರಿಯ ಮುಖಂಡ ಬೆಟ್ಟೇಗೌಡ(89) ಸೋಮವಾರ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು.

ಕ್ರೀಡೆ, ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ



ಪಿರಿಯಾಪಟ್ಟಣ, ಏ .20 –ಕ್ರೀಡೆ ಮತ್ತು ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ತಾಲೂಕಿನ ಚಿಟ್ಟಿನಹಳ್ಳಿಯಲ್ಲಿರುವ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದಿಂದ ನಡೆದ ಜನ ಪ್ರತಿನಿಧಿಗಳ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆ ಮನುಷ್ಯ ದೈಹಿಕವಾಗಿ ಸದೃಢವಾಗಿರಲು ಸಹಾಯಕವಾದರೆ, ಸಂಸ್ಕೃತಿ ಮನುಷ್ಯನ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. 2007ರಲ್ಲಿ ಪ್ರಾರಂಭವಾದ ಈ ಸಂಘವು ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಒಂದು ಸಂಘ ಅಥವಾ ವ್ಯಕ್ತಿ ಯಶಸ್ವಿಯಾಗಿ ನಡೆಯಬೇಕಾದರೆ ಸಮಯ ಪ್ರಜ್ಞೆ ಹಾಗೂ ಉತ್ತಮವಾದ ಸಂವಹನ ಬಹಳ ಮುಖ್ಯ ಎಂದರಲ್ಲದೆ ತಮ್ಮ ಶಾಸಕರ ಅನುದಾನದಲ್ಲಿ ಸಂಘಕ್ಕೆ 5 ಲಕ್ಷ ರೂ. ನೀಡುವುದಾಗಿ ಭರವಸೆ ನೀಡಿದರು. ಶಾಸಕ ಮಹಾದೇವ್ ಮಾತನಾಡಿದರಲ್ಲದೆ, ತಮ್ಮ ಶಾಸಕರ ಅನುದಾನದಲ್ಲಿ 10 ಲಕ್ಷ ರೂ. ನೀಡುವ ಜೊತೆ ರಸ್ತೆ ಅಭಿವೃದ್ಧಿ ಕಾಮಗಾರಿ ಮಾಡಿಸಿಕೊಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಎಲ್ಲಾ ಜನಪ್ರತಿನಿಧಿಗಳನ್ನು ಅಭಿನಂದಿಸಲಾಯಿತು. ಸಮಾರಂಭದಲ್ಲಿ ಮೈಮುಲ್ ಅಧ್ಯಕ್ಷ ಪ್ರಸನ್ನ, ನಿರ್ದೇಶಕ ಕುಮಾರ್, ಸಂಘದ ಅಧ್ಯಕ್ಷ ಕೆ.ರಮೇಶ್, ಉಪಾಧ್ಯಕ್ಷ ಮೊನ್ನಪ್ಪ, ಖಜಾಂಚಿ ಮಲ್ಲಿಕಾರ್ಜುನ, ಕಾರ್ಯದರ್ಶಿ ವಿಜಯ್.ಸಿ.ಎನ್, ಸಹಕಾರ್ಯದರ್ಶಿ ಹರೀಶ್, ನಿರ್ದೇಶಕರಾದ ಭುಜಂಗ , ಜ್ಯೋತಿಗೌಡ, ಕೆಂಪಣ್ಣ , ಸಂತೋಷ, ಗೌರೀಶ್, ಮೋಹನ್, ವಿನೋದ, ವಿನೋದ್‌ಕುಮಾರ್, ಬಿ.ಆರ್. ಗಣೇಶ್, ಡಿ.ಜೆ.ಗಣೇಶ್ ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೆಜಿಎಫ್ 2 (ತ): ಬೆ.8ಕ್ಕೆ, ಬೆ.11.30ಕ್ಕೆ, ಮ.3.15ಕ್ಕೆ, ಸಂ.6.30ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.15ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ.
ಸ್ಕ್ರೀನ್ 3	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.25ಕ್ಕೆ, ಬೀಸ್ಟ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.45ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬೀಸ್ಟ್ (ತ): ಬೆ.8.40ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬೀಸ್ಟ್ (ತ): ಬೆ.8ಕ್ಕೆ, ಬೆ.11.10ಕ್ಕೆ, ಮ.2.30ಕ್ಕೆ, ಸಂ.5.50ಕ್ಕೆ, ರಾ.9.10ಕ್ಕೆ.
ಸ್ಕ್ರೀನ್ 3	ಬೀಸ್ಟ್ (ತ): ಬೆ.8.20ಕ್ಕೆ, ಬೆ.11.45ಕ್ಕೆ, ಫೆಂಟಾಸ್ಟಿಕ್ ಬೀಸ್ಟ್ಸ್ (ಇಂ): ಮ.3.05ಕ್ಕೆ, ಜೇಮ್ಸ್ (ಕ): ಸಂ.6.10ಕ್ಕೆ, ಆರ್‌ಆರ್‌ಆರ್ (ಹಿಂ): ರಾ.9.20ಕ್ಕೆ.
ಸ್ಕ್ರೀನ್ 4	ಬೀಸ್ಟ್ (ತ): ಬೆ.8.10ಕ್ಕೆ, ಜೇಮ್ಸ್ (ಕ): ಬೆ.11.35ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ, ರಾ.9.50ಕ್ಕೆ, ಕೆಜಿಎಫ್ (ಕ): ಸಂ.6.25ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಆರ್‌ಆರ್‌ಆರ್ (2ಡಿ)(ಕ): ಬೆ.11ಕ್ಕೆ, ತ್ರಿಕೋನ (ಕ): ಸಂ.4ಕ್ಕೆ, ಗಣಿ (ತೆ): ಸಂ.6.45ಕ್ಕೆ.
ಸ್ಕ್ರೀನ್ 2	ಆರ್‌ಆರ್‌ಆರ್ (2ಡಿ)(ತೆ): ಮ.1.30ಕ್ಕೆ.
ಸ್ಕ್ರೀನ್ 3	ಆರ್‌ಆರ್‌ಆರ್ (2ಡಿ)(ಕ): ಸಂ.4ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ವರ್ಣಪಟಲ (ಕ): ಬೆ.11ಕ್ಕೆ, ಜೇಮ್ಸ್ (ಕ): ಮ.1.30ಕ್ಕೆ, ರಾ.7.30ಕ್ಕೆ, ಗಣಿ (ತೆ): ಸಂ.4.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.


ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬೀಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	1 ಪ್ರದರ್ಶನಗಳು
ಆರ್‌ಆರ್‌ಆರ್ (ತೆ)	3 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖತ್ರಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೆಜಿಎಫ್–2 (ಕ)	4 ಪ್ರದರ್ಶನಗಳು
ಸಂಗಂ	
ಕೆಜಿಎಫ್ 2 (ಕ)	4 ಪ್ರದರ್ಶನಗಳು
ಲಿಡೋ	
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೀಸ್ಟ್ (ತ)	4 ಪ್ರದರ್ಶನಗಳು

ಡೆಲ್ಲಿಗೆ ಸುಲಭ ತುತ್ತಾದ ಪಂಜಾಬ್



ಮುಂಬೈ, ಏ.20– ಡೆಲ್ಲಿ ಕ್ಯಾಪಿಟಲ್ಸ್ ಬೌಲರ್‌ಗಳ ಮಾರಕ ಬೌಲಿಂಗ್ ದಾಳಿ ಹಾಗೂ ನಾಯಕ ಡೇವಿಡ್ ವಾರ್ನರ್ ಅರ್ಧ ಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ 9 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಇದರೊಂದಿಗೆ ಡೆಲ್ಲಿ ಆಡಿದ 6 ಪಂದ್ಯಗಳಲ್ಲಿ ತಲಾ 3ರಲ್ಲಿ ಗೆಲುವು, ಸೋಲು ಕಂಡು 6 ಅಂಕಗಳೊಂದಿಗೆ 6ನೇ ಸ್ಥಾನಕ್ಕೇರಿತು.

ಇಲ್ಲಿನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಟೂರ್ನಿಯ 32ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ಬ್ಯಾಟ್ಸ್‌ಮನ್‌ಗಳು ಡೆಲ್ಲಿ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಲಾಗದೆ ಪೆವಿಲಿಯನ್ ಪರೇಡ್ ನಡೆಸಿದರು. ತಂಡದ ಪರವಾಗಿ ನಾಯಕ ಮಯಂಕ್ ಅಗರವಾಲ್ 24, ವಿಕೆಟ್ ಕೀಪರ್ ಜಿತೇಶ್ ಶರ್ಮಾ 32, ಶಾರೂಕ್‌ಖಾನ್ ಹಾಗೂ ರಾಹುಲ್ ಚಹರ್ ತಲಾ 12ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇವರನ್ನು ಹೊರತು ಪಡಿಸಿ ಉಳಿದೆಲ್ಲಾ ಬ್ಯಾಟರ್‌ಗಳು ಎರಡಂಕಿ ಮೊತ್ತ ದಾಟಲು ವಿಫಲರಾದರು. ಅಂತಿಮವಾಗಿ ಪಂಜಾಬ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 115ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು.

ಡೆಲ್ಲಿ ಪರ ಖಲೀಲ್ ಅಹ್ಮದ್, ಲಲಿತ್ ಯಾದವ್, ಅಕ್ಷರ್ ಪಟೇಲ್ ಹಾಗೂ ಕುಲ್‌ದೀಪ್ ಯಾದವ್ ತಲಾ 2 ಹಾಗೂ ಮುಸ್ತಫಿಜುರ್ ರೆಹಮಾನ್ ಒಂದು ವಿಕೆಟ್ ಪಡೆದರು. 116ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಡೆಲ್ಲಿಗೆ ನಾಯಕ ಡೇವಿಡ್ ವಾರ್ನರ್ ಹಾಗೂ ಪೃಥ್ವಿ ಶಾ ಉತ್ತಮ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 83ರನ್‌ಗಳ ಕಾಣಿಕೆ ನೀಡಿ ಗೆಲುವು ಸುಲಭಗೊಳಿಸಿತು. ಅಂತಿಮವಾಗಿ ಡೆಲ್ಲಿ 10.3 ಓವರ್‌ಗಳಲ್ಲಿ ಒಂದು ವಿಕೆಟ್ ಕಳೆದುಕೊಂಡು 119ರನ್ ಗಳಿಸಿ ಗೆಲುವಿನ ಸಂಭ್ರಮ ಆಚರಿಸಿತು. 20 ಎಸೆತಗಳಲ್ಲಿ 7 ಬೌಂಡರಿ ಹಾಗೂ ಒಂದು ಸಿಕ್ಸರ್‌ನಿಂದ 41ರನ್ ಗಳಿಸಿ ಪೃಥ್ವಿ ಶಾ ವಿಕೆಟ್ ಒಪ್ಪಿಸಿದರು. 30 ಎಸೆತಗಳಲ್ಲಿ 10 ಬೌಂಡರಿ ಹಾಗೂ ಒಂದು ಸಿಕ್ಸರ್‌ನಿಂದ ಡೇವಿಡ್ ವಾರ್ನರ್ 60ರನ್ ಗಳಿಸಿ ಸತತ ಮೂರನೇ ಅರ್ಧಶತಕ ಬಾರಿಸಿದರು. ಉಳಿದಂತೆ ಸರ್ಫರಾಜ್ ಖಾನ್ 12ರನ್ ಗಳಿಸಿ ಅಜೇಯರಾಗಿ ಉಳಿದರು. ಪಂಜಾಬ್ ಪರ ಬೌಲಿಂಗ್‌ನಲ್ಲಿ ರಾಹುಲ್ ಚಹರ್ ಒಂದು ವಿಕೆಟ್ ಪಡೆದರು. ಉತ್ತಮ ಬೌಲಿಂಗ್ ಮಾಡಿದ ಕುಲದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂತಾರಾಷ್ಟ್ರೀಯ ಕ್ರಿಕೆಟ್ ಪೋಲಾರ್ಡ್ ಗುಡ್‌ಬೈ



ಮುಂಬೈ, ಏ.20–ವೆಸ್ಟ್ ಇಂಡಿಸ್ ತಂಡದ ಆಲ್‌ರೌಂಡರ್ ಕೀರಾನ್ ಪೋಲಾರ್ಡ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಪಂದ್ಯಾವಳಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಅವರು ಅಂತಾ ರಾಷ್ಟ್ರೀಯ ಕ್ರಿಕೆಟ್‌ಗೆ ಗುಡ್‌ಬೈ ಹೇಳಿದ್ದಾರೆ. ಆಕ್ರಮಣಕಾರಿ ಆಟಕ್ಕೆ ಹೆಸರುವಾಸಿಯಾದ ಪೋಲಾರ್ಡ್ ವೆಸ್ಟ್ ಇಂಡಿಸ್ ತಂಡದ ಪರವಾಗಿ ಆಕ್ರಮಣಕಾರಿ ಆಟವಾಡಿದ್ದಾರೆ. ಅದಕ್ಕಿಂತ ಮುಖ್ಯವಾಗಿ ಐಪಿಎಲ್‌ನಲ್ಲಿ ಮುಂಬೈ ತಂಡದ ಪರವಾಗಿ ತಮ್ಮ ಭರ್ಜರಿ ಆಟವಾಡಿ ಹಲವಾರು ಬಾರಿ ತಂಡವನ್ನು ಗೆಲ್ಲಿಸಿದ್ದಾರೆ.